ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: 1 ಸಂಚಿಕೆ: 2 ದ್ವೈಮಾಸಿಕ ಮಾರ್ಚ್–ಏಪ್ರಿಲ್, 2022 ಪುಟಗಳು: 60

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



## ಸಂಪದದೊಳಗೆ...


ಸಂಪಾದಕೀಯ – ಡಾ ಸುರೇಶ ಸಗರದ ಪುಟ 3
ರಾಜ್ಯಾಧ್ಯಕ್ಷರ ನುಡಿ – ಡಾ ಕಟೀಲ್ ಸುರೇಶ ಕುಡ್ವಾ ಪುಟ 4
ಸಮಿತಿಯ ಅಧ್ಯಕ್ಷರ ನುಡಿ – ಡಾ ಅರವಿಂದ ಪಟೇಲ ಪುಟ 5
ಓದುಗರ ಅಭಿಪ್ರಾಯಗಳು ಪುಟ 6
ಕೋವಿಡ್ : ಖಿನ್ನತೆ ಮತ್ತು ಆತಂಕ (ಪ್ರಚಲಿತ) – ಡಾ ಸಿ ಆರ್ ಚಂದ್ರಶೇಖರ ಪುಟ 7
ವ್ಯಕ್ತಿಯ ಆಯಸ್ಸನ್ನು ಕಣ್ಣ ಬಿಂಬಿಸುವುದೇ? (ಪ್ರಚಲಿತ) – ಡಾ ಎಚ್ ಎಸ್ ಮೋಹನ್ ಪುಟ 9
ಎಣ್ಣೆಂಗ್ಹೂ ಅಂದ್ರೆ (ಕಥೆ) – ಡಾ ಸಲೀಂ ನದಾಫ ಪುಟ 11
ಶಾಲೆಯಿಂದ ಸೆರೆಗೆ (ಕಥೆ) – ಡಾ ಶಿವಶಂಕರ ಮೇಟಿ ಪುಟ 14
ಗಾಳಿ ಪಳಗಿಸಿದ ಬಾಲಕ (ಕೃತಿ ಪರಿಚಯ) – ಡಾ ಅನುಪಮಾ ವಾಯ್ ಜೆ ಪುಟ 15
ನಮ್ಮ ಮಿದುಳು ಮನಸ್ಸುಗಳೊಳಗೆ ಬೇರೆಯವರ ದನಿಗಳು (ಕಾಯಿಲೆ ಮಾಹಿತಿ) – ಡಾ ಕೆ ಎಸ್ ಪವಿತ್ರ ಪುಟ 20
ಗರ್ಭಾವಸ್ಥೆಯ ಮಧುಮೇಹ ಎಂದರೇನು? (ಕಾಯಿಲೆ ಮಾಹಿತಿ) – ಡಾ ರಕ್ಷಾ ಯು ರಾವ್ ಪುಟ 23
ತಡವಾಗಿ ಬಂದ ಪಾಸು (ವೈದ್ಯೇತರ) – ಮೇಜರ್ ಡಾ ಕುಶವಂತ ಕೋಳಿಬೈಲು ಪುಟ 25
ವಿಶ್ವಾಸ ಮತ್ತು ವೈದ್ಯಕೀಯ ವೃತ್ತಿ (ವೈದ್ಯೇತರ) – ಡಾ ಅಶೋಕ ಗೋಧಿ ಪುಟ 27
50 ರ ನಂತರ : ನಿರಂತರ, ಬದುಕಿನ ಒಂದು ಚಿಂತನೆ (ವೈದ್ಯೇತರ) – ಡಾ ಮಂಜುನಾಥ ಬಿ ಎ ಪುಟ 29
ಡಾ ಬಿ ಎಚ್ ಕೆರೂಡಿ (ವ್ಯಕ್ತಿ ವಿಷಯ) – ಡಾ ಶಿವಾನಂದ ಕುಬಸದ ಪುಟ 31
ಮಕ್ಕಳ ಹೆಣಗಳ ಮೇಲೆ ಶ್ರೀಮಂತರಾದವರ ಕಥೆ (ವೈದ್ಯ ಲೋಕದ ವಿಸ್ಮಯ) – ಡಾ ನಾ ಸೋಮೇಶ್ವರ ಪುಟ 34
ಪ್ರತಿಭಾ ಪಲಾಯನ (ವಿದ್ಯಾರ್ಥಿ ಲೋಕ) – ಆಶಿಕಾ ವಿ ಸಿಂಧೂರ ಪುಟ 36
ಬ್ರಿಟನ್ನಿನ ವೈದ್ಯಕೀಯ ವ್ಯಾಸಾಂಗದ ಕಿರುನೋಟ (ಅನಿವಾಸಿ ಲೋಕ) – ಡಾ ರಾಮಶರಣ ಎಲ್ ಪುಟ 38
ಸಮಿತಿಯಿಂದ ಕನ್ನಡ ಕಾರ್ಯಕ್ರಮಗಳು – ಡಾ ವೀಣಾ ಎನ್ ಸುಳ್ಯ ಪುಟ 41
ಶಾಖೆಗಳಲ್ಲಿ ಕನ್ನಡ – ಡಾ ವೀಣಾ ಭಟ್ ಪುಟ 44
ವಿಶ್ವ ಗ್ಲಾಕೋಮಾ ವಾರಾಚರಣೆ (ಆರೋಗ್ಯ ದಿನಾಚರಣೆ) – ಡಾ ರಶ್ಮಿ ಕುಂದಾಪುರ ಪುಟ 47
ಕಾವ್ಯ ಸಂಪದ – ಡಾ ವೀಣಾ ಎನ್ ಸುಳ್ಯ / ಡಾ ಕೆ ಬಿ ಸೂರ್ಯಕುಮಾರ್ ಪುಟ 50
ಪದಬಂಧ – ಡಾ ಜ್ಯೋತಿ ಎಸ್ ಫೋಂಗಡೆಮಠ ಪುಟ 51
ಚಿಣ್ಣರ ಲೋಕ / ಹನಿ ಕವನಗಳು ಪುಟ 52
ಸಂಘಟನೆ – ಡಾ ಮಧುಸೂಧನ ಕಾರಿಗನೂರ ಪುಟ 53
ಚಿತ್ರ ಸಂಪದ – ಡಾ ಅರವಿಂದ ಪಟೇಲ್ ಪುಟ 55


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
ಲೇಖನಗಳನ್ನು ವರ್ಡ್ಡ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
ಪ್ರಕಟಿಸಿದ ಲೇಖನಗಳಿಗೆ ಲೇಖಕರೆ ಹೊಣೆ



ವೈದ್ಯ ಸಂಪದ



ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ :
**ಡಾ. ಕಟೀಲ್ ಸುರೇಶಕುಡ್ವಾ**
ksureshkateel@yahoo.com | 9448725265
ನಿಯೋಜಿತ ಅಧ್ಯಕ್ಷರು:
**ಡಾ. ಎಸ್. ಬಿ. ಲಕ್ಕೋಳ**
9448560400
ಗೌರವ ಕಾರ್ಯದರ್ಶಿ :
**ಡಾ. ಎಸ್. ಎಮ್ ಪ್ರಸಾದ್**
9845105122
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ :
**ಡಾ. ಅರವಿಂದ ಪಟೇಲ್**
draravindpatel@gmail.com |9448918764
ಪ್ರಧಾನ ಸಂಪಾದಕರು :
**ಡಾ. ಸುರೇಶ ಸಗರದ**
vaidyasampadaeditor@gmail.com | 9448139339
ವಿಭಾಗೀಯ ಸಂಪಾದಕರು :
ಪ್ರಚಲಿತ ವಿದ್ಯಮಾನಗಳು :
**ಡಾ. ಎಚ್. ಎಸ್ ಮೋಹನ್**
prachalithavs@gmail.com | 9448173670
ಕಥಾ ವಿಭಾಗ:
**ಡಾ. ಸಲೀಮ ನದಾಫ**
kathevaidyasampada@gmail.com | 8073048415
ಕೃತಿ ಪರಿಚಯ:
**ಡಾ. ವಿನಯ ಶ್ರೀನಿವಾಸ**
kruthiparichayavs@gmail.com | 9844083284
ಕಾಯಿಲೆ / ಚಿಕಿತ್ಸೆ / ಸಂಶೋಧನೆ:
**ಡಾ. ಶುಭ್ರತ ಕೆ. ಎಸ್.**
ddinventionsvs@gmail.com | 9448149927
ವೈದ್ಯೇತರ ಲೇಖನಗಳು:
**ಡಾ. ಶಿವಾನಂದ ಕುಬಸದ**
nonmedicalvs@gmail.com | 9448012767
ವ್ಯಕ್ತಿ ವಿಷಯ / ಸಂದರ್ಶನ:
**ಡಾ. ದಿವ್ಯಾ ಕೆ. ಎನ್.**
personalitiesvs@gmail.com | 9886157094
ವೈದ್ಯ ಲೋಕದ ವಿಸ್ಮಯ:
**ಡಾ. ನಾ ಸೋಮೇಶ್ವರ**
vismayavaidyasampada@gmail.com | 9880465661
ವಿದ್ಯಾರ್ಥಿ ಲೋಕ:
**ಡಾ. ಉಮಾಮಹೇಶ್ವರಿ ಎಸ್.**
vidyarthivaidyasampada@gmail.com | 8277070611
ಅನಿವಾಸಿ ಲೋಕ:
**ಡಾ. ಕೇಶವ ಕುಲಕರ್ಣಿ**
anivasivs@gmail.com | +447852416527
ಬಳಗದ ವರದಿ:
**ಡಾ. ವೀಣಾ ಎನ್. ಸುಳ್ಯ**
programreportsvs@gmail.com | 9448215940
ಶಾಖೆಗಳಲ್ಲಿ ಕನ್ನಡ:
**ಡಾ. ವೀಣಾ ಭಟ್**
branchreportsvs@gmail.com | 9480353878
ಪದಬಂಧ / ಪದ ಕೋಶ:
**ಡಾ. ಜ್ಯೋತಿ ಎಸ್. ಫೊಂಗಡೆಮಠ**
padabhandhavs@gmail.com | 9242139990
ಕವನಗಳು:
**ಡಾ. ಗೋವಿಂದ ಹೆಗಡೆ**
poemsvaidyasampada@gmail.com | 9353118024
ಆರೋಗ್ಯ ದಿನಾಚರಣೆ:
**ಡಾ. ರಶ್ಮಿ ಕುಂದಾಪುರ**
healthdaysvs@gmail.com | 9880496567
ಚಿತ್ರ ಸಂಪದ:
**ಡಾ. ಅರವಿಂದ ಪಟೇಲ**
parisaravs@gmail.com
ಸಂಘಟನೆ / ಕೇಂದ್ರೀಯ ಸಮಾಚಾರ:
**ಡಾ. ಮಧುಸೂದನ ಕಾರಿಗನೂರು**
imavaidyasampada@gmail.com | 9448237145
ವಿಳಾಸ:
**ವೈದ್ಯ ಸಂಪದ**
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ, ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018, ದೂರವಾಣಿ: 080 26703255, vaidyasampadaeditor@gmail.com


## ಸಂಪಾದಕೀಯ...



**ಡಾ. ಸುರೇಶ ಸಗರದ**

ವೈದ್ಯ ಸಂಪದದ ಮೊದಲ ಸಂಚಿಕೆಗೆಅನೇಕರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದಾರೆ.ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ನಾಡೋಜ ಮಹೇಶ ಜೋಷಿಯವರಿಂದ ಲೋಕಾರ್ಪಣೆಗೊಂಡ ನಮ್ಮ ವೈದ್ಯ ಸಂಪದ ಪತ್ರಿಕೆ ವಿಶ್ವದಾದ್ಯಂತ ನೆಲೆಸಿರುವ ಕನ್ನಡಾಭಿಮಾನಿಗಳ ಕೈ ಸೇರಿರುವುದು ವಿಶೇಷ. ನವ್ಯ ಸಹಜತೆಯಲ್ಲಿಡಿಜಿಟಲ್ ಸಾಮರ್ಥ್ಯವನ್ನುಇದುತೋರಿಸುತ್ತದೆ. ಪತ್ರಿಕೆ ಬಿಡುಗಡೆಕಾರ್ಯಕ್ರಮದಲ್ಲಿಕನ್ನಡ ವೈದ್ಯ ಸಾಹಿತ್ಯದಇತಿಹಾಸದ ಮೈಲಿಗಲ್ಲುಗಳ ಅನಾವರಣದೊಂದಿಗೆ ವೈದ್ಯ ಸಾಹಿತ್ಯ ಬೆಳೆಯಲು ಕಸಾಪ ದಿಂದಎಲ್ಲಾರೀತಿಯ ಸಹಕಾರ ನೀಡುವ ಭರವಸೆಯನ್ನು ಡಾ ಮಹೇಶ ಜೋಷಿಯವರು ನೀಡಿದ್ದು ನಮ್ಮಲ್ಲಿ ಹೊಸ ಉತ್ಸಾಹವನ್ನುತುಂಬಿದೆ. ನಮ್ಮಜವಾಬ್ದಾರಿಯನ್ನು ಹೆಚ್ಚಿಸಿದೆ.




ಕೇಂದ್ರೀಯಆಯವ್ಯಯ ಈಗಾಗಲೇ ಮಂಡನೆಯಾಗಿದೆ. ಈ ಸಾಲಿನ ಆಯವ್ಯಯದಲ್ಲಿ ಆರೋಗ್ಯ ಕೇತ್ರಕ್ಕೆ 86200.65 ಕೋಟಿ ರೂ ಗಳನ್ನು ಒದಗಿಸಲಾಗಿದೆ. ಇದು ಕಳೆದ ಸಾಲಿನ ಆಯವ್ಯಯಕ್ಕೆ ಹೋಲಿಸಿದರೆ ಶೇ 16.59 ರಷ್ಟು ಹೆಚ್ಚಳ ಎಂದು ಹೇಳಲಾಗಿದೆ. ಆದರೆ 21–22 ರ ಮರು ಅಂದಾಜಿನ ಪ್ರಕಾರ ಆರೋಗ್ಯ ಕ್ಷೇತ್ರಕ್ಕಾಗಿ ಮೊದಲು ಕಾದಿರಿಸಲಾಗಿದ್ದ 73931,77 ಕೋಟಿಗಿಂತ ವೆಚ್ಚ 86000.65 ಕೋಟಿಯಾಗಿದ್ದು ಅದಕ್ಕೆ ಹೋಲಿಸಿದರೆ ಆಯವ್ಯಯದಲ್ಲಿ ಹೆಚ್ಚಳ ಎನಿಸುವುದಿಲ್ಲ. ಇದರಲ್ಲಿ 37000 ಕೋಟಿಯನ್ನು ರಾಷ್ಟ್ರೀಯ ಆರೋಗ್ಯ ಮಿಶನ್ ಗಾಗಿ, 10,000 ಕೋಟಿಯನ್ನು ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಮತ್ತು 6412 ಕೋಟಿಯನ್ನು ಆಯುಷ್ಮಾನ ಭಾರತ ಯೋಜನೆಗೆ ಮೀಸಲಾಗಿಡಲಾಗಿದೆ.

48ನೇ ಪುಟಕ್ಕೆ



**ಡಾ. ಕಟೀಲ್ ಸುರೇಶ ಕುಡ್ವಾ**
ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ

# ಯುಗಾದಿ ಹಬ್ಬದ ಶುಭಾಶಯಗಳು

## ಎಲ್ಲರಿಗೂ ನಮಸ್ಕಾರ

ನಾಡೋಜ ಮಹೇಶ ಜೋಶಿಯವರ ಅಮೃತ ಹಸ್ತದಿಂದ ಬಿಡುಗಡೆಗೊಂಡ ವೈದ್ಯ ಸಂಪದ ಪ್ರಥಮ ಸಂಚಿಕೆ ಎಲ್ಲರ ಮನ ಗೆದ್ದಿದೆ. ಕನ್ನಡ ವೈದ್ಯ ಬರಹಗಾರರಿಗೆ ತಮ್ಮ ಸಾಹಿತ್ಯ ಜ್ಞಾನ ಭಂಡಾರವನ್ನು ಹಂಚಲು ಇದು ಒಂದು ಉತ್ತಮ ವೇದಿಕೆಯಾಗಿದೆ. ಸಂಪಾದಕ ಮಂಡಳಿ ಬರಹಗಳನ್ನು ಹಲವು ವಿಭಾಗಗಳಲ್ಲಿ ಸಮಯೋಚಿತವಾಗಿ ಹಂಚಿ ಸಮಾಜದ ಎಲ್ಲ ವರ್ಗಕ್ಕೂ ತಲುಪುವಂತೆ ಕ್ರಮ ಕೈಗೊಂಡಿರುವುದು ಸ್ತುತ್ಯರ್ಹ.

ನಮ್ಮ ಸಾಹಿತಿಗಳಿಗೆ ರೇಡಿಯೋ, ಟ.ವಿ ಮಾಧ್ಯಮದಲ್ಲೂ ಮುಂದಿನ ದಿನಗಳಲ್ಲಿ ಪ್ರಾಥಿನಿಧ್ಯ ಸಿಗಬೇಕಾಗಿದೆ. ಆ ಮೂಲಕ ಪ್ರಮುಖವಾಗಿ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು ಜನಮನ್ನಣೆ ಗಳಿಸುವುದರಲ್ಲಿ ಸಂದೇಹವಿಲ್ಲ. ಇದು ಜನರಲ್ಲಿ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅಂಧ ಶ್ರದ್ದೆಗಳನ್ನು ಹೊಡೆದೋಡಿಸಿ, ಆರೋಗ್ಯಕರ ಚಿಂತನೆ, ಜೀವನ ಶೈಲಿ, ಆಹಾರ ಪದ್ಧತಿಯನ್ನು ಅನುಸರಿಸಲು ಸಹಾಯವಾಗಬಲ್ಲದು.

ಮಹೇಶ ಜೋಶಿಯವರು ಕೂಡಾ ಈ ನಿಟ್ಟಿನಲ್ಲಿ ತಮ್ಮಿಂದಾದ ಕೊಡುಗೆ ನೀಡುವ ಆಶ್ವಾಸನೆ ನೀಡಿದ್ದಾರೆ. ಉತ್ತಮ ವೈದ್ಯಕೀಯ ಲೇಖನಗಳನ್ನು ಮುದ್ರಿಸಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿಯೂ ಪ್ರಯತ್ನಿಸಬಹುದು. ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಕೈ ಜೋಡಿಸುವಂತೆ ವಿನಂತಿಸಬಹುದು. ಮುಂದಿನ ದಿನಗಳಲ್ಲಿ ಈ ಎಲ್ಲಾ ಯೋಜನೆಗಳ ಮೂಲಕ ನಮ್ಮ ಕನ್ನಡ ವೈದ್ಯ ಬರಹಗಾರರ ವೇದಿಕೆ, ವೈದ್ಯ ಸಂಪದವನ್ನು ಬೆಳೆಸಿ ಇತರ ಯೋಜನೆಗಳಲ್ಲಿಯೂ ಕಾರ್ಯೋನ್ಮುಖವಾಗಲಿ, ಸಫಲವಾಗಲಿ ಎಂದು ಹಾರೈಸುತ್ತೇನೆ.

ಜೈ ಕರ್ನಾಟಕ
ಐ.ಎಮ್.ಎ ವೈದ್ಯ ಬರಹಗಾರರ ವೇದಿಕೆ ಚಿರಾಯುವಾಗಲಿ

ವೈದ್ಯ ಸಂಪದ



**ಡಾ. ಅರವಿಂದ ಪಟೇಲ್**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ

# ವೈದ್ಯ ಸಂಪದ ಪತ್ರಿಕೆಯ ಓದುಗರಿಗೆಲ್ಲ ಶುಭಾಶಯಗಳು

ಮೊದಲ ಸಂಚಿಕೆ ಅನೇಕರ ಪ್ರಶಂಸೆಯ ಪಡೆದು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ

ಡಾ ಸಗರದ ರವರ ಸಂಪಾದಕ ಮಂಡಲಿ ಉತ್ತಮ ವಿಷಯ ವಿಚಾರಗಳ ಲೇಖನ ನೀಡುವಲ್ಲಿ ಶ್ರಮಿಸುತ್ತಿದೆ.

ಈಗಾಗಲೇ ನಮ್ಮ ಕೆಲವು ಶಾಖೆಗಳಲ್ಲಿ ಕನ್ನಡ ಬರಹಗಾರರ ಸಮಿತಿಗಳು ನೇಮಕಗೊಂಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತ್ತಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಾಖೆಗಳಲ್ಲಿ ಸೃಜನಾತ್ಮಕ ಕೆಲಸಗಳು ಮೂಡಿಬರಲಿ ಎಂದು ಆಶಿಸೋಣ.

ಫೆಬ್ರವರಿ 4, "ವಿಶ್ವ ಕ್ಯಾನ್ಸರ್ ದಿನ"

ಮೂರು ವರುಷಕ್ಕೆ ಘೋಷಣೆ/ಪ್ರಣಾಳಿಕೆ "ಕ್ಲೋಸ್ ದ ಕೇರ್ ಗ್ಯಾಪ್". ಅಂದರೆ ಕ್ಯಾನ್ಸರ್ ರೋಗಿಯ ಆರೈಕೆ ಅತಿ ಸಮೀಪದಿಂದ ಸಿಗುವಂತಾಗಬೇಕು.

ಭಾರತದಲ್ಲಿಯೂ ಕ್ಯಾನ್ಸರ್‌ಗೆ ತುತ್ತಾಗುವವರ ಪ್ರಮಾಣ ಏರಿಕೆಯನ್ನು ಕಂಡಿದ್ದು ಶ್ವಾಸಕೋಶ, ಸ್ತನ, ಗಂಟಲು, ದೊಡ್ಡಕರುಳು ಹೀಗೆ ಹಲವಾರು ವಿಧದ ಕ್ಯಾನ್ಸರ್ ಕಂಡು ಬರುತ್ತಿವೆ. ತಂಬಾಕು ಅಥವಾ ನಿಕೋಟಿನ್ ನಿಂದ ಬರುವ ಕ್ಯಾನ್ಸರ್ ಒಂದು ರೀತಿಯಲ್ಲಿ ತಡೆಗಟ್ಟಬಹುದಾದ ಖಾಯಿಲೆ.

ಪರಿಸರ ಮಾಲಿನ್ಯ, ಆಹಾರ ಪದಾರ್ಥಗಳಲ್ಲಿರುವ ರಾಸಾಯನಿಕಗಳು, ಬಳಸುವ ಕೀಟನಾಶಕಗಳು ನಿಜಕ್ಕೂ ಅಪಾಯಕಾರಿ ಮಟ್ಟವನ್ನು ತಲುಪಿ ಕ್ಯಾನ್ಸರ್ ಹೆಚ್ಚಾಗಲು ಕಾರಣ.

ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲು ಭಾರತೀಯ ವೈದ್ಯ ಸಂಘದ ಬರಹಗಾರರ ಬಳಗದ ತಜ್ಞರು ಕೈಪಿಡಿಗಳನ್ನು ತರುವ ಆಲೋಚನೆ ಹೊಂದಿದೆ.

ಪ್ರತಿ ರವಿವಾರ ಸಂಜೆಯ ಕಾರ್ಯಕ್ರಮ 6.30ಗಂಟೆಗೆ "ಸಾಹಿತಿಗಳೊಂದಿಗೆ ಸಂಜೆ" ಅದ್ಭುತವಾಗಿ ಮೂಡಿ ಬರುತ್ತಿದೆ. ಆಸಕ್ತರು ಭಾಗವಹಿಸಲು ವಿನಂತಿಸುವೆ.

ಉಪಸಮಿತಿಯ ನಿರ್ಧಾರದಂತೆ ಹಿರಿಯ ವೈದ್ಯರ ಕೃತಿ ಪರಿಚಯದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು ಮೊದಲನೆಯದಾಗಿ ಡಾ.ಚಂದ್ರಪ್ಪಗೌಡರ ಕೃತಿ ಆಯ್ದು ಕೊಳ್ಳಲಾಗಿದೆ.

ಡಾ. ಮಧುಸೂದನರವರು ಚಿತ್ರಕವನಗಳನ್ನು ಸ್ವತಃ ಸಂಪಾದಿಸಿ ಕಲಾತ್ಮಕ ರೂಪ ನೀಡಿರುವುದು ಬರಹಗಾರರಿಗೆ ಉತ್ಸಾಹ ತುಂಬಿದೆ. ಡಾ. ಸಿ. ಆರ್. ಚಂದ್ರಶೇಖರ್ ರವರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ವಿಮರ್ಶಾ ಲೇಖನ,ಕ್ಷೇಮ ಸಂಸ್ಥೆಯೊಂದಿಗೆ ವೈದ್ಯರಿಗೆ ಕಥಾಸ್ಪರ್ಧೆ ಹಮ್ಮಿಕೊಂಡಿದ್ದು ಬಳಗ ,ಮುಂದೆ ಇನ್ನೂ ವೈವಿಧ್ಯಮಯವಾಗಿ ಕಾರ್ಯಗಳನ್ನು ರೂಪಿಸಲಿದೆ. ಈಗಾಗಲೇ ವೇದಿಕೆಯ ಅಕೌಂಟ್ (ಖಾತೆ) ತೆರೆಯಲಾಗಿದ್ದು ವೈದ್ಯ ಸಂಪದಕ್ಕೆ ಜಾಹಿರಾತು ನೀಡಬಯಸುವವರು ನೇರವಾಗಿ ಸಂಪಾದಕರನ್ನು ಸಂಪರ್ಕಿಸಲು ಮನವಿ.

ಈ ಕೆಲಸದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ಉಪಸಮಿತಿಯ ಸದಸ್ಯರು ಮತ್ತು ಸಂಪಾದಕ ಮಂಡಳಿಯ ಸರ್ವ ಸದಸ್ಯರೆಲ್ಲರನೂ ಅಭಿನಂದಿಸುವೆ.

ಫೆಬ್ರವರಿ ತಿಂಗಳಲ್ಲಿ ಜನಿಸಿದವರು

ರಾಷ್ಟ್ರಕವಿ ಡಾ. ಜಿ ಎಸ್. ಶಿವರುದ್ರಪ್ಪ

(ಫೆ 7 ಶಿಕಾರಿಪುರ)

ವೈದೇಹಿಯೆಂದೇ ಪ್ರಸಿದ್ಧ ಜಾನಕಿ ಶ್ರೀನಿವಾಸ ಮೂರ್ತಿ ಹೆಸರಾಂತ ಸಾಹಿತಿ ವಿಮರ್ಶಕಿ( ಫೆ 12 ಕುಂದಾಪುರ)ಇವರ ಕ್ರೌಂಚ ಪಕ್ಷಿಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ದೊರಕಿದೆ.

**ಕನ್ನಡ ಬಳಸುತ ಕನ್ನಡ ಬೆಳೆಸೋಣ**

ವೈದ್ಯ ಸಂಪದ




# ಓದುಗರ ಅಭಿಪ್ರಾಯಗಳು

### ವೈದ್ಯ ಸಂಪದ ಪತ್ರಿಕೆಗೆ ಹಾರ್ದಿಕ ಸ್ವಾಗತ

ಡಾ. ಸುರೇಶ್ ಸಗರದ ಅವರ ಸಂಪಾದಕತ್ವದಲ್ಲಿ, ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಕನ್ನಡ ವೈದ್ಯ ಬರಹಗಾರರು 'ವೈದ್ಯ ಸಂಪದ' ಎಂಬ 48 ಪುಟಗಳ ಮಾಸಿಕವನ್ನು ಹೊರತರುವ ಪ್ರಯತ್ನವಾಗಿ ಮೊದಲ ಸಂಚಿಕೆ (ಜನವರಿ–ಫೆಬ್ರವರಿ) ಹೊರತಂದಿದ್ದಾರೆ. ಬಗೆಬಗೆಯ ವಿಷಯಗಳನ್ನು ಒಳಗೊಂಡ ವರ್ಣಮಯ ಸಂಚಿಕೆ ಕಣ್ಣಿಗೆ ಆಕರ್ಷಕವಾಗಿದೆ; ಓದಲು ಬಗೆಬಗೆಯ ವಿಷಯಗಳನ್ನು ಕೊಡಮಾಡಿದೆ. ಪ್ರಚಲಿತ ವಿದ್ಯಮಾನಗಳು, ರೋಗಗಳು–ಚಿಕಿತ್ಸೆ, ಕಥೆ, ವ್ಯಕ್ತಿ–ಪುಸ್ತಕ ಪರಿಚಯ, ವೈದ್ಯೇತರ ವಿಷಯಗಳು, ವೈದ್ಯಲೋಕದ ವಿಸ್ಮಯಗಳು, ವಿದ್ಯಾರ್ಥಿಲೋಕ, ಅನಿವಾಸಿ ವೈದ್ಯರು, ಕಾರ್ಯಕ್ರಮ ವರದಿ, ಕವನಗಳು, ಇತಿಹಾಸ, ಪದಬಂಧ, ಚಿಣ್ಣರ ಲೋಕ, ಚಿತ್ರಸಂಪದ ಹೀಗೆ ಎಲ್ಲ ವರ್ಗಕ್ಕೂ ಉಪಯುಕ್ತವಾಗುವಂತಹ, ಆಸಕ್ತಕರ ವಿಷಯ ವೈವಿಧ್ಯತೆಯಿಂದ ಪತ್ರಿಕೆ ಕೂಡಿದೆ. ಅನೇಕ ದಶಕಗಳಿಂದ ವೈದ್ಯಕೀಯ ಪತ್ರಿಕೆಗಳ ಸಂಪಾದಕರಾಗಿ ಕಾರ್ಯಮಾಡಿದ ನನಗೆ ಈ ಪತ್ರಿಕೆ ಅದ್ಭುತವಾಗಿ ಕಂಡಿದೆ. ಇದೇ ಉತ್ಸಾಹವನ್ನು ಸಂಪಾದಕ ಮಂಡಳಿ ಕಾಯ್ದಿರಿಸಿಕೊಂಡು ಪತ್ರಿಕೆಯನ್ನು ಹೊರತರಲಿ ಎಂದು ಹಾರೈಸಿ, ಅವರ ಪ್ರಯತ್ನವನ್ನು ಮನತುಂಬಿ ಶ್ಲಾಘಿಸುತ್ತೇನೆ. ಅವರ ಪ್ರಯತ್ನ ಯಶಸ್ವಿಯಾಗಲಿ.

– **ನಾಡೋಜ ಡಾ. ಪಿ. ಎಸ್. ಶಂಕರ್**
ಪ್ರಧಾನ ಸಂಪಾದಕ : ವಿಜ್ಞಾನ ಲೋಕ/ಆರೋಗ್ಯ ವಿಜ್ಞಾನ

ಉತ್ತಮವಾಗಿ ಮೂಡಿಬಂದಿದೆ, ವೈದ್ಯರ ಕೃತಿಗಳನ್ನು ಹೆಚ್ಚು ಪರಿಚಯಿಸಿ

– **ಡಾ ಸಿ ಆರ್ ಚಂದ್ರಶೇಖರ**

ವೈದ್ಯ ಸಂಪದ ಪತ್ರಿಕೆ ಅಂದವಾದ ವಿನ್ಯಾಸ, ಆರೋಗ್ಯ (ವಿಚಾರ) ಪೂರ್ಣ ಹೂರಣದಿಂದ ಕಣ್ಣು–ಮನಸ್ಸು–ಮಿದುಳನ್ನು ತಣಿಸುತ್ತದೆ. ಕತೆ, ಕಾವ್ಯ, ಸಂದರ್ಶನ, ಪುಸ್ತಕ ಪರಿಚಯ, ಚಿತ್ರಕತೆಗಳಿಂದಾಗಿ ಸಾಹಿತ್ಯಕ ಮತ್ತು ಕಲಾತ್ಮಕ ಸ್ಪರ್ಶವೂ ದೊರೆತಿದೆ. ಲೇಖನಗಳ ಆಯ್ಕೆಯಲ್ಲಿನ ವೈವಿಧ್ಯತೆಯಿಂದಾಗಿ ಪತ್ರಿಕೆಯ ಘನತೆಯೂ ಹೆಚ್ಚಿದೆ. ಕನ್ನಡಿಗರಿಗೆ ಇಂತಹದೊಂದು ಆರೋಗ್ಯ ಸಾಹಿತ್ಯದ ಪತ್ರಿಕೆ ಪ್ರಕಟಗೊಳಿಸಿರುವುದಕ್ಕೆ ಐ ಎಮ್ ಎ ಬರಹಗಾರರ ಸಮಿತಿಗೆ ಅಭಿನಂದನೆಗಳು. ಸಂಪಾದಕ ಮಂಡಳಿಗೆ ಗೌರವದ ಅಭಿನಂದನೆಗಳು. ಆರಂಭಿಕ ಹೆಜ್ಜೆಯಲ್ಲಿಯೇ ಗಮನಸೆಳೆಯುವ ವೈದ್ಯ ಸಂಪದ ಆರೋಗ್ಯ ಪತ್ರಿಕೋದ್ಯಮದಲ್ಲಿ ಸಮೃದ್ಧತೆಯಿಂದ ಬೆಳಗುತ್ತ ಬಾಳಲಿ ಎಂಬ ಹಾರೈಕೆ ನನ್ನದು

– **ಡಾ ವಸುಂಧರಾ ಭೂಪತಿ**
ನಿಕಟ ಪೂರ್ವ ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ನಮಸ್ಕಾರ, ನಿಮ್ಮ ಸಾರಥ್ಯದಲ್ಲಿ ಮೂಡಿ ಬಂದಿರುವ ವೈದ್ಯ ಸಂಪದ ದ್ವೈಮಾಸಿಕದ ಮೊದಲನೇ ಸಂಚಿಕೆಯ ಸಾಫ್ಟ ಕಾಪಿ ಪತ್ರಕರ್ತರ ಗುಂಪಿನ ಮೂಲಕ ನೋಡಲು ಸಾಧ್ಯವಾಯಿತು. ಸೊಗಸಾಗಿ ಮೂಡಿ ಬಂದಿದೆ, ಶುಭಾಶಯಗಳು

– **ನರೇಂದ್ರ ಪಾರೆಕಟ್**
ಹಿರಿಯ ಪತ್ರಕರ್ತರು, ಬೆಂಗಳೂರು.

ವೈದ್ಯ ಸಂಪದ ಚೆನ್ನಾಗಿ ಮೂಡಿ ಬಂದಿದೆ. 48 ಪುಟಗಳ ವಿಭಿನ್ನ ಲೇಖನಗಳ ಸಂಕಲನ ಯಾವ ಮಾಸಪತ್ರಿಕೆಗೂ ಕಡಿಮೆಯಿಲ್ಲ. ಈ ಸಂಚಿಕೆಯಲ್ಲಿ ಲೇಖನ ಪ್ರಕಟಿಸಿದ ಎಲ್ಲಾ ವೈದ್ಯ ಲೇಖಕರಿಗೂ ಸಂಪಾದಕ ಮಂಡಳಿಗೂ ತಾಂತ್ರಿಕ ಸಂಯೋಜಕರಿಗೆ ಹೃತ್ಪೂರ್ವಕ ಅಭಿನಂದನೆಗಳು. ನಿಮ್ಮ ಪ್ರಯತ್ನಕ್ಕೆ ಶುಭ ಹಾರೈಕೆಗಳು


– **ಡಾ ಶ್ರೀಕಾಂತ ಹೆಗಡೆ**
ಚಿಕಿತ್ಸಕ ತಜ್ಞ ವೈದ್ಯರು, ಶಿವಮೊಗ್ಗ

ವೈದ್ಯ ಸಂಪದ ಆಂತರಿಕ ವಿತರಣೆಗಾಗಿ ಇರುವ ಪತ್ರಿಕೆ. ಇದರಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವ ಹಾಗೆ ಕನ್ನಡದಲ್ಲಿ ಲೇಖನಗಳು ಬಂದಿವೆ. ಇದೊಂದು ಜನಸಾಮಾನ್ಯರಿಗಾಗಿ ಇರುವ ಪತ್ರಿಕೆ ಆಗಿದ್ದರೆ ಒಳ್ಳೆಯದು ಅನಿಸುತ್ತದೆ

– **ಶ್ರೀ ಕೆ ಎನ್ ಲಕ್ಷ್ಮೀನಾರಾಯಣ**

ಪ್ರಚಲಿತ...


# ಕೋವಿಡ್ ಖಿನ್ನತೆ ಹಾಗು ಆತಂಕ




**ಡಾ. ಸಿ. ಆರ್. ಚಂದ್ರಶೇಖರ್**
ಹಿರಿಯ ಮನೋವೈದ್ಯರು, ಬೆಂಗಳೂರು

ಕೋವಿಡ್ ಜಾಗತಿಕ ಸೋಂಕು ಬಂದು ಒಂದು ವರ್ಷದ ಮೇಲಾಯಿತು. ಜಗತ್ತಿನಾದ್ಯಂತ ಕೋಟಿಕೋಟಿ ಜನರಿಗೆ ಸೋಂಕಾಗಿ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ. ಕೋವಿಡ್ನ ಉಪಟಳ ಇನ್ನೂ ನಿಂತಿಲ್ಲ. 2ನೆಯ ಅಲೆ, 3ನೆಯಅಲೆ ಏಳುತ್ತಲೇ ಇದೆ. ಪ್ರಪಂಚದಾದ್ಯಂತ, ಕಂಡರಿಯದ ಕಷ್ಟ – ನಷ್ಟನೋವಿಗೆ ಜನ ಒಳಗಾದರು. ಲಾಕ್ಡೌನ್, ಸೀಲ್ಡೌನ್, ಕ್ವಾರೆಂಟೈನ್, ಮನೆಬಿಟ್ಟು ಹೊರಬರುವಂತಿಲ್ಲ, ಕರ್ಫ್ಯೂ ವಾಹನಗಳ ಓಡಾಟವಿಲ್ಲ. ಕೆಲಸ ಹೋಯಿತು, ಆದಾಯವಿಲ್ಲ, ಊಟವಿಲ್ಲ. ವಲಸೆಬಂದಿದ್ದ ಕಾರ್ಮಿಕರು ಸಾವಿರಾರು ಮೈಲುನಡೆದು ಊರುಗಳನ್ನು ತಲುಪಿದರು. ಸೋಂಕಿತರು, ಶಂಕಿತರು ಆಸ್ಪತ್ರೆಯಲ್ಲಿ ವನವಾಸವನ್ನು ಅನುಭವಿಸಿದರು. ಮನೆಯಒಬ್ಬ / ಒಬ್ಬಳು ಸತ್ತಾಗ ಅಂತ್ಯಸಂಸ್ಕಾರ ಮಾಡಲೂ ಅವಕಾಶವಿಲ್ಲದೆ ಒದ್ದಾಡಿದರು. ಮದುವೆ, ನಾಮಕರಣಗಳನ್ನೂ ಮುಂದೂಡಿದರು ಸಭೆಸಮಾರಂಭಗಳು ರದ್ದಾದುವು. ಜಾತ್ರೆ – ಉತ್ಸವಗಳು, ದೇವರದರ್ಶನಇಲ್ಲವಾದುವು. ಇಡೀ ದಿನ ಮನೆಯೊಳಗೆ ಕುಳಿತು ಹಿಂಸೆಪಟ್ಟರು, ಶಾಲಾ – ಕಾಲೇಜಿಲ್ಲದ ಮಕ್ಕಳು – ಹರೆಯದವರು, ಆಟಪಾಠಗಳಿಲ್ಲದೆ ಕಂಗೆಟ್ಟರು. ಇವೆಲ್ಲದರ ಪರಿಣಾಮವಾಗಿ ಖಿನ್ನತೆ ಎಂಬ ಮಾನಸಿಕ ಕಾಯಿಲೆ ಜಗತ್ತಿನಲ್ಲಿ ಮೂರುಪಟ್ಟು ಹೆಚ್ಚಾಯಿತು. ಒಂದು ಅಂದಾಜಿನ ಪ್ರಕಾರ ಜನಸಂಖ್ಯೆಯಶೇ 25ರಿಂದ 30ರಷ್ಟು ಜನರು ಖಿನ್ನತೆಯಿಂದ ಬಳಲಿದರು. ಕೋವಿಡ್ ಪಾಸಿಟಿವ್ ಭೂತದ ಉಪದ್ರ ಎಲ್ಲಡೆ ಕುಣಿದಾಡಿತು.

ಏನೋ ಬೇಸರ, ದುಃಖ, ದುಗುಡ, ನಿರುತ್ಸಾಹ, ನಿರಾಸಕ್ತಿ, ನಿರ್ಲಕ್ಷ್ಯ, ನಿದ್ರಾಹೀನತೆ, ಆಹಾರ ಸೇವನೆಯಲ್ಲಿ





ಏರುಪೇರು, ಲೈಂಗಿಕಆಸೆ – ಕ್ರಿಯೆಯಏರುಪೇರು, ದೈಹಿಕ – ಮಾನಸಿಕ ಶಕ್ತಿಕುಗ್ಗಿತು. ಕೆಲಸ ಕರ್ತವ್ಯನಿರ್ವಹಣೆಯಲ್ಲಿ ಆಸಕ್ತಿ ಹೋಯಿತು, ಆತ್ಮಹತ್ಯೆಯ ಯೋಚನೆ – ಖಿನ್ನತೆಯ ಪ್ರಮುಖ ಲಕ್ಷಣಗಳು.

ನಮ್ಮಲಿ ಖಿನ್ನತೆ ಕಾಯಿಲೆ ಬಗ್ಗೆ ಅರಿವು ಇಲ್ಲ. ಮಾನಸಿಕ ಕಾಯಿಲೆ ಎಂದರೆ ಹುಚ್ಚು – ಬುದ್ದಿ ಭ್ರಮಣೆ ಎಂದೇ ತಿಳಿಯುವ ಜನ ಎಲ್ಲಡೆ ಇದ್ದಾರೆ. ತಮಗೆ ಖಿನ್ನತೆ ಇದೆ, ತಮ್ಮ ಮನೆಯವರಿಗೆ ಖಿನ್ನತೆ ಇದೆ ಎಂದು ಒಪ್ಪಲು ಅನೇಕರು ತಯಾರಿಲ್ಲ. ಹೀಗಾಗಿ ಶೇಕಡಾ 80ರಷ್ಟು ಖಿನ್ನತೆರೋಗಿಗಳಿಗೆ ಚಿಕಿತ್ಸೆ ಸಿಗುವುದಿಲ್ಲ. ನಿಮಗೆ ಖಿನ್ನತೆ ಡಿಪ್ರೆಶನ್ನಿದೆ ಎಂದು ಹೇಳಲು ವೈದ್ಯರೂ ಹಿಂಜರಿಯುತ್ತಾರೆ.

ಖಿನ್ನತೆಯಲ್ಲಿ ಎರಡು ವಿಧ ಒಂದು ಪ್ರತಿಕ್ರಿಯಾ ಖಿನ್ನತೆ Reactive Depression. ಮತ್ತೊಂದು ಒಳಜನ್ಯ ಖಿನ್ನತೆ Endogenous Depression. ಮನಸ್ಸಿಗಾದ ನೋವು, ನಿರಾಶೆಗಳಿಂದಲೋ, ಹೊರಗಿನ ಕಷ್ಟ–ನಷ್ಟಗಳು, ಇತರರ ಟೀಕೆ – ಅವಮಾನ – ಮೋಸ, ವಂಚನೆಗಳಿಂದಲೋ ಬರುವುದೇ ಪ್ರತಿಕ್ರಿಯಾ ಖಿನ್ನತೆ. ಒಳಗಿನ ಮತ್ತು ಹೊರಗಿನ ಯಾವ ಒತ್ತಡ (ಪ್ರಚೋದನೆ / ಘಟನೆ / ಅನುಭವ – ಇಲ್ಲದೇ ಬರುವುದೇ. ಒಳಜನ್ಯ ಖಿನ್ನತೆ ಮಿದುಳಿನಲ್ಲಿ ಡೋಪಮಿನ್ ಸೆರೋಟೋನಿನ್ನ ರವಾಹಕಗಳು ಕಡಿಮೆಯಾಗಿ ಅಥವಾ ಥೈರಾಕ್ಸಿನ್ಹಾರ್ಮೋನು ಕಡಿಮೆಯಾಗಿ ಒಳಜನ್ಯ ಖಿನ್ನತೆ ಕಾಣಿಸಿಕೊಳ್ಳುತ್ತದೆ, ಮುಟ್ಟುನಿಲ್ಲುವ ಸಮಯದ ಖಿನ್ನತೆ ಒಳಜನ್ಯವೂ ಹೌದು, ಪ್ರತಿಕ್ರಿಯಾ ಖಿನ್ನತೆಯೂ ಹೌದು.

ಖಿನ್ನತೆ ಇದ್ದಾಗ ಅನೇಕ ದೈಹಿಕ ನೋವು / ಸುಸ್ತು/ ನಿಶಕ್ತಿ ಎಂದು ಜನ ಸಾಮಾನ್ಯ ವೈದ್ಯರಲ್ಲಿಗೆ ಹೋಗಿ ಅನಗತ್ಯತಪಾಸಣೆ ಔಷಧಿಗಳನ್ನು ಕೇಳುತ್ತಾರೆ, ಇವುಗಳ ಅಗತ್ಯವಿಲ್ಲ.

ಖಿನ್ನತೆಗೆ ಖಿನ್ನತೆ ನಿವಾರಕ ಔಷಧಿಗಳು ಮತ್ತು ಆಪ್ತ ಸಮಾಲೋಚನೆಯೇ ಚಿಕಿತ್ಸೆ, ಈ ದಿನಗಳಲ್ಲಿ ಸುರಕ್ಷಿತವಾದ ತೀವ್ರ ಅಡ್ಡಪರಿಣಾಮಗಳಿಲ್ಲದ ಖಿನ್ನತೆ ನಿವಾರಕ ಔಷಧಿಗಳು ಲಭ್ಯವಿವೆ. ಯಾವುದೇ ವೈದ್ಯರು ಅಥವಾ ಮನೋವೈದ್ಯರು ಇವನ್ನು ಬರೆದುಕೊಡುತ್ತಾರೆ. 2 – 3 ತಿಂಗಳ ಕಾಲಸೇವಿಸಬೇಕು. ಜೊತೆಗೆ ಬಂಧು– ಮಿತ್ರರು– ಆಪ್ತಸಮಾಲೋಚಕರೊಂದಿಗೆಮಾತನಾಡಿ, ಮನಸ್ಸನ್ನುಹಗುರಮಾಡಿಕೊಳ್ಳಬೇಕು. ಕಷ್ಟ – ನಷ್ಟ, ನೋವು, ನಿರಾಶೆಗಳನ್ನು ಹೇಗೆ ನಿಭಾಯಿಸಬೇಕೆಂದು ಕಲಿತುಕೊಳ್ಳಬೇಕು. ಮನಸ್ಸಿಗೆ ಹಿತಕೊಡುವ, ಸಂತೋಷ ನೆಮ್ಮದಿ ಕೊಡುವ ಚಟುವಟಿಕೆಗಳನ್ನು ಉದಾ: ಸಂಗೀತ ಶ್ರವಣ, ಒಳ್ಳೆಯಪುಸ್ತಕದ ಓದು, ಒಳಾಂಗಣ ಹೊರಾಂಗಣ ಕ್ರೀಡೆಗಳು ಧ್ಯಾನ – ಪ್ರಾಣಾಯಾಮ, ದೇವರ ಪ್ರಾರ್ಥನೆ, ಆತ್ಮೀಯರೊಂದಿಗೆ ಮಾತುಕತೆ ಮಾಡಿ. ಕೋವಿಡ್ 19ಕ್ಕೆ ನಾವು ಹೆದರಬೇಕಿಲ್ಲ. 99% ಸೋಂಕಿತರು ಗುಣಮುಖರಾಗಿದ್ದಾರೆ. ಬಿಪಿ, ಶುಗರ್, ಶ್ವಾಸಕೋಶದ ಕಾಯಿಲೆ, ಮೂತ್ರಪಿಂಡದ ವೈಫಲ್ಯ ಇರುವವರು ಮಾತ್ರ ಅಪಾಯಕ್ಕೆ ಸಿಕ್ಕಿ ಕೊಳ್ಳುತ್ತಾರೆ. ಒಳ್ಳೆಯ ಆಹಾರ, ವ್ಯಾಯಾಮ, ಪ್ರಶಾಂತ ಮನಸ್ಸು, ಮುಖ ಗವಸು, ಶರೀರ ಮತ್ತು ಮನೆಯ ಸ್ವಚ್ಛತೆ, ಗುಂಪು ಗೂಡುವುದನ್ನು ಬಿಡುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದರಿಂದ, ಕೋವಿಡ್ 19ರ ವಿರುದ್ಧ ನಾವು ಯಶಸ್ವಿಯಾಗಿ ಹೋರಾಡಬಹುದು. ಧೈರ್ಯ ಮತ್ತು ಸಕಾರಾತ್ಮಕ ಧೋರಣೆಯೇ ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.



ವೈದ್ಯಸಂಪದ



ಪ್ರಚಲಿತ

## ವ್ಯಕ್ತಿಯ ಆಯಸ್ಸನ್ನು ಕಣ್ಣು ಬಿಂಬಿಸುವುದೇ?

**ಡಾ. ಎಚ್. ಎಸ್. ಮೋಹನ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ವಿಜಯ ಐ ಕ್ಲಿನಿಕ್, ಸಿಟಿ ಮುನಿಸಿಪಲ್ ಆಫೀಸ್ ಎದುರು, ಸಾಗರ – 577401

ದೇಹದ ಹಲವು ವಿಚಾರಗಳ ಬಗ್ಗೆ ಕಣ್ಣು ಖಚಿತವಾದ ಮಾಹಿತಿಯನ್ನು ಒದಗಿಸಬಲ್ಲದು. ಈ ವಿಚಾರ ಹೆಚ್ಚಿನ ನೇತ್ರತಜ್ಞರಿಗೆ ಹಾಗೂ ದೈಹಿಕಕಾಯಿಲೆಗಳ ವಿವಿಧ ತಜ್ಞರಿಗೆ ಈಗಾಗಲೇ ಮನವರಿಕೆಯಾಗಿದೆ. ಹಿಂದಿನ "ವೈದ್ಯಸಂಪದ" ಸಂಚಿಕೆಯಲ್ಲಿ 40 ರವಯಸ್ಸಿನ ಸುಮಾರಿಗೆ ಹೆಚ್ಚಿನ ವ್ಯಕ್ತಿಗಳಿಗೆ ತೊಂದರೆ ಕೊಡುವ Presbyopia ಸಮಸ್ಯೆಗೆ ಒಂದು ಔಷಧವನ್ನು ಕಂಡು ಹಿಡಿದ ವಿಚಾರ ಈ ಅಂಕಣದಲ್ಲಿ ಬರೆದಿದ್ದೆ. ಅಂತಹುದೇ ಒಂದು ಹೊಸ ವಿಚಾರ ಕಣ್ಣಿನ ಬಗ್ಗೆ ತಮ್ಮ ಗಮನ ಸೆಳೆಯಲು ಪ್ರಯತ್ನಿಸುತ್ತೇನೆ.

ಸಾಮಾನ್ಯವಾಗಿ ಕಣ್ಣು ಪರೀಕ್ಷೆ ಮಾಡುವ ವ್ಯಕ್ತಿಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಕಣ್ಣಿನ ಒಳಗಿನ ಅಕ್ಷಿಪಟಲವನ್ನು ಪರೀಕ್ಷಿಸುವ ಪರೀಕ್ಷೆ ಅಥವಾ Retinal Imaging ಮಾಡುವ ಪದ್ಧತಿ ಇದೆ. ಇದು ಕಣ್ಣಿನ ಬಗ್ಗೆ ಹಲವಾರು ಮಾಹಿತಿಗಳನ್ನು ಒದಗಿಸುವುದಲ್ಲದೇ, ವ್ಯಕ್ತಿಯ ದೇಹದಲ್ಲಿರಬಹುದಾದ ಡಯಾಬಿಟಿಸ್, ಏರು ರಕ್ತದೊತ್ತಡ, ಅನೀಮಿಯಾ, ಲ್ಯುಕೀಮಿಯಾ, ಕಣ್ಣಿನ ದೃಷ್ಟಿ ನರಕ್ಕೆ ಸಂಬಂಧ ಪಟ್ಟ ಕಾಯಿಲೆಗಳಾದ ಆಪ್ಟಿಕ್ನ್ಯೂರೈಟಿಸ್, ಪ್ಯಾಪಿಲ್ಲೆಡಿಮಾ – ಹೀಗೆ ಹಲವು ಕಾಯಿಲೆಗಳ ಬಗ್ಗೆ ನಿಖರ ಮಾಹಿತಿಯನ್ನು ಒದಗಿಸುತ್ತದೆ. ದೇಹದ ಬೇರೆ ಅಂಗಗಳಿಗಿಂತ ಇಲ್ಲಿ ತಜ್ಞ ವೈದ್ಯ ಕಣ್ಣಿನಲ್ಲಿ ಆದ ಬದಲಾವಣೆ, ಕಾಯಿಲೆಯ ಹಂತಹಂತದ ವ್ಯತ್ಯಾಸಗಳು ಹಾಗೂ ಕಣ್ಣಿನ ಅಕ್ಷಿಪಟಲದ ರಕ್ತನಾಳಗಳ ಆರೋಗ್ಯ, ಅವುಗಳಲ್ಲಿ ಆಗುವ ಬದಲಾವಣೆಗಳು – ಇವೆಲ್ಲವನ್ನೂ ನೇರವಾಗಿ ವಿಕ್ಷಿಸಬಲ್ಲ.

ಇತ್ತೀಚಿಗೆ ಕಣ್ಣಿನ ಅಕ್ಷಿಪಟಲದ ಸ್ಕ್ಯಾನಿಂಗ್ನಿಂದ ವ್ಯಕ್ತಿ ಇಷ್ಟು ದಿನ ಬದುಕಬಲ್ಲ, ಅವನ ಸಾವಿಗೆ ಕಾರಣವಾಗುವ ಅಂಶಗಳ್ಯಾವುವು ಎಂಬುದನ್ನು ತಿಳಿಸುತ್ತದೆ ಎಂದರೆ ಆಶ್ಚರ್ಯವಲ್ಲವೇ ? ಚೀನಾ, ಆಸ್ಟ್ರೇಲಿಯಾ ಮತ್ತು ಜರ್ಮನಿಯ ತಜ್ಞರು ಈ ಅಕ್ಷಿಪಟಲದ ಸ್ಕ್ಯಾನಿಂಗ್ನಿಂದ ಅಲ್ಲಿರುವ ಚಿತ್ರಗಳ ಸಹಾಯದಿಂದ "ಅಕ್ಷಿಪಟಲದ ಆಯಸ್ಸನ್ನು" ಕಂಡುಕೊಳ್ಳಬಹುದು ಎಂದು ತಿಳಿಸಿದ್ದಾರೆ.



ಝೂ ಮತ್ತು ಸಹೋದ್ಯೋಗಿಗಳು ಕೃತಕ ಬುದ್ಧಿಮತ್ತೆ (Artificial intelligence) ಮತ್ತು ಆಳವಾದ ಅಧ್ಯಯನ ದಿಂದ ಮೇಲ್ನೋಟಕ್ಕೆ ಕಂಡು ಬರುವ ಅಕ್ಷಿಪಟಲದ ವಯಸ್ಸು ಮತ್ತು ವ್ಯಕ್ತಿಯ ನಿಜವಾದ ವಯಸ್ಸು – ಇವುಗಳನ್ನು ಹೋಲಿಸಿದಾಗ ವ್ಯಕ್ತಿ ಎಷ್ಟು ಕಾಲಬದುಕಬಲ್ಲ ಎಂದು ಒಂದು ಅಂದಾಜನ್ನು ಮಾಡಬಹುದು ಎಂದು ಅಮೆರಿಕದ ಕ್ಯಾಲಿಫೋರ್ನಿಯಾದ ಸೇಂಟ್ಜಾನ್ಸ್ ಆರೋಗ್ಯ ಕೇಂದ್ರದ ನೇತ್ರ ವಿಭಾಗದ ಪ್ರೊ. ಹೋವರ್ಡ್ ಆಕ್ರಾಸ್ ಅಭಿಪ್ರಾಯ ಪಡುತ್ತಾರೆ.

ಈ ಅಧ್ಯಯನದಲ್ಲಿ ಯುಕೆ ಬಯೋ ಬ್ಯಾಂಕ್ನಲ್ಲಿ ಇರುವ ಮಾಹಿತಿಯ




ಈ ಸಂಶೋಧನೆಯಲ್ಲಿ ಹಲವಾರು ಮಿತಿಗಳಿವೆ ಎಂದು ಸಂಶೋಧಕರು ಒಪ್ಪಿಕೊಳ್ಳುತ್ತಾರೆ. ಈ ಅಧ್ಯಯನದಿಂದ ವ್ಯಕ್ತಿಯ ಮರಣದ ನಿಜವಾದ ಕಾರಣ ತಿಳಿಯಲು ಸಾಧ್ಯವಿಲ್ಲ. ಇದರಲ್ಲಿ ಒಳಗೊಂಡ ಎಲ್ಲರೂ ಸ್ವಯಂಸೇವಕರು ಮತ್ತು ಹೆಚ್ಚಿನವರು ಬಿಳಿಯರು. ಹಾಗಾಗಿ ಇದು ಎಲ್ಲಾ ಜನರಿಗೆ ಹೊಂದುವದೇ ಎಂದು ಹೇಳಲು ಸಾಧ್ಯವಿಲ್ಲ.

ಈ ಅಧ್ಯಯನಕ್ಕೆ 35,913 ಜನರ "ಅಕ್ಷಿಪಟಲದ ವಯಸ್ಸಿನ ಅಂತರ" ವನ್ನು ಪರಿಶೀಲಿಸಲಾಯಿತು. ಅಕ್ಷಿಪಟಲದ ಬಯಲಾಜಿಕಲ್ ಆಯಸ್ಸು ( ಕೆಲವು ಪರೀಕ್ಷೆಗಳಿಂದ ಇದನ್ನು ಕಂಡು ಹಿಡಿಯಲಾಗುತ್ತದೆ) ಮತ್ತು ವ್ಯಕ್ತಿಯ ನಿಜವಾದ ದೈಹಿಕ ವಯಸ್ಸು ಇವುಗಳ ನಡುವಿನ ಅಂತರವನ್ನೇ "ಅಕ್ಷಿ ಪಟಲದ ವಯಸ್ಸಿನ ಅಂತರ" ಎನ್ನುತ್ತಾರೆ. ಇದರಲ್ಲಿ ಧನಾತ್ಮಕ ಅಂಕಿ ( Positive Value ) ಬಂದರೆ ವ್ಯಕ್ತಿಯ ವಯಸ್ಸಿಗಿಂತ ಕಣ್ಣಿನ ಅಕ್ಷಿಪಟಲಕ್ಕೆ ಹೆಚ್ಚು ವಯಸ್ಸಾಗಿದೆ ಎಂದರ್ಥ. ಮೇಲಿನ ಅಧ್ಯಯನದಲ್ಲಿ ಜನರು ಮಧ್ಯ ವಯಸ್ಸಿನ ಅಥವಾ ಜಾಸ್ತಿ ವಯಸ್ಸಾದವರು ಇದ್ದರು. 40 – 69 ವಯಸ್ಸಿನವರು ಸರಾಸರಿ ವಯಸ್ಸು 52.6 ವರ್ಷಗಳು ಇದ್ದವು. ಇವರಲ್ಲಿ ಮುಂದಿನ 11 ವರ್ಷಗಳಲ್ಲಿ ಸಂಶೋಧಕರು ಸಾವಿನ ಪ್ರಮಾಣವನ್ನು ಲೆಕ್ಕ ಹಾಕಿದರು. ಆ ಅವಧಿಯಲ್ಲಿ 1871 ಜನರು ಅಂದರೆ ಸುಮಾರು 5.21% ಜನರು ಅಸು ನೀಗಿದರು.

ವ್ಯಕ್ತಿಗೆ ಆದ ವಯಸ್ಸಿಗಿಂತ ಅಕ್ಷಿಪಟಲಕ್ಕೆ ಆದ ವಯಸ್ಸು ಜಾಸ್ತಿ ಎಂದು ಬಂದಾಗ ಅಂತಹ ವ್ಯಕ್ತಿಗಳು ಒಂದಲ್ಲ ಒಂದು ಕಾರಣದಿಂದ ಅಸುನೀಗುತ್ತಾರೆ ಎನ್ನಲಾಗಿದೆ. "ಅಕ್ಷಿಪಟಲದ ಅಂತರ" ಜಾಸ್ತಿ ಆದಷ್ಟೂ ಅಂತಹ ವ್ಯಕ್ತಿಗಳ ಮರಣದ ರಿಸ್ಕ್ ಜಾಸ್ತಿ ಎನ್ನಲಾಗಿದೆ.

ಹೀಗೆ ಅಕ್ಷಿಪಟಲದ ಅಂತರ ಜಾಸ್ತಿ ಇರುವವರು ಮಡಿಯುವುದು ಬೇರೆ ಬೇರೆ ಕಾರಣಗಳಿಂದ ಎನ್ನಲಾಗಿದೆ. ಆದರೆ ಇವುಗಳಲ್ಲಿಎರಡು ರೀತಿಯ ಕಾಯಿಲೆಗಳನ್ನು ಬಿಡಬೇಕು ಎಂದು ತಜ್ಞರ ಅಭಿಪ್ರಾಯ. ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳು ಮತ್ತು ಕ್ಯಾನ್ಸರ್ ಕಾಯಿಲೆಗಳು. ಇಂತಹ ವ್ಯಕ್ತಿಗಳಲ್ಲಿ 71.6% ರಷ್ಟು ವ್ಯಕ್ತಿಗಳು ಮಡಿದರು. ಉಳಿದಂತೆ ಡಿಮೆನ್ಷಿಯಾ ಕಾರಣಗಳಿಂದ ಬರುವ ಸಾವು 49 – 67% ರಷ್ಟು ಜಾಸ್ತಿ ಹೆಚ್ಚಿನ ಅಕ್ಷಿಪಟಲದ ವಯಸ್ಸಿನ ಅಂತರದಲ್ಲಿದ್ದವು.




ಹಲವಾರು ಮಿತಿಗಳಿದ್ದರೂ ಇದೊಂದು ದೇಹದ ಒಳಗೆ ತೀವ್ರವಾಗಿ ಏನೂ ಉಪಕರಣ ತೂರಿಸದೇ ಬರೀಸ್ಕ್ಯಾನಿಂಗ್ನಿಂದ ಜನತೆಯನ್ನು ಸ್ಕ್ರೀನ್ ಮಾಡುವ ಪರೀಕ್ಷೆಯಾಗಿ ಇಟ್ಟುಕೊಳ್ಳಬಹುದು ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಅಕ್ಷಿ ಪಟಲದ ರಕ್ತನಾಳಗಳು ಇದರಲ್ಲಿ ನೇರವಾಗಿ ಕಾಣಿಸುವುದರಿಂದ ಇಡೀ ದೇಹದ ಆರೋಗ್ಯ ಪರಿಸ್ಥಿತಿ ಇದರಲ್ಲಿ ಸೂಕ್ಷ್ಮವಾಗಿ ಗೊತ್ತಾಗುತ್ತದೆ ಎಂದು ನೇತ್ರವೈದ್ಯರು ಅಭಿಪ್ರಾಯ ಪಡುತ್ತಾರೆ. ವಯಸ್ಸಾಗುವಿಕೆಯನ್ನು ತಿಳಿಯಲು ಮತ್ತು ಬೇರೆ ದೈಹಿಕಕಾಯಿಲೆಗಳಿಂದ ಮರಣಹೊಂದುವ ಸಾಧ್ಯತೆ ತಿಳಿಯಲು ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದು ಜಗತ್ತಿನ ಹಲವು ನೇತ್ರತಜ್ಞರ ಅಭಿಪ್ರಾಯ. ಹಾಗಾಗಿ ಹೆಚ್ಚಿನವರು ಮೊದಲು ತಿಳಿದಂತೆ "ಕಣ್ಣುಗಳು ನಮ್ಮ ಮೆದುಳಿಗೆ ನಿಜವಾಗಿ ಕಿಟಕಿಯಾಗಬಲ್ಲದು" ಎಂದು ಈ ತಜ್ಞರುಗಳ ಅಭಿಮತ.



ವೈದ್ಯ ಸಂಪದ

ಕಥಾ ವಿಭಾಗ

# ಎಣ್ಣೆಂಗ್ಸೂ ಅಂದ್ರೆ ..?



**ಡಾ ಸಲೀಮ ನದಾಫ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು ಆರ್ ಪಿ ಮಾನ್ಷನ್,
ಪಟಾಲಮ್ಮ ಲೇ ಔಟ್, ಕಾಡುಗೋಡಿ, ಬೆಂಗಳೂರು–560067

"ಏನ್ ಸ್ವಾಮಿ ನನ ಕೈಯಿಂದ ಆಗಲ್ಲ ನನ್ನ ಮಗನ ಸಾವಾಸಾ.ಹುಡಗಿ ನಂಕಿಷ್ಟ ಆಯ್ತು,ಅವ್ನಕೂ ಇಸ್ಟಾ ಆಗಿತ್ತು.. ....ನೆನ್ನೆ ಸುಕ್ರಾರ ಅವನು ಅವ್ರಕ್ಕುನು ,ಅವ್ರ ಬಾವ್ನು, ನೊಡ್ಕೊಂಬಂದು ಹುಡುಗಿ ದಪ್ಪಾ ಬ್ಯಾಡಾ ಬ್ಯಾರೆ ನೋಡೋಣಾ ಅಂದ್ರಂತೆ .....ಅವ್ರಕ್ನು ಬಾವನ್ನೆಕಕೊರ್ಂಡೋಗ್ಲಿ ಹೆಣ್ಣುಗ್ಳ ನೋಡಕ್ಕಾ ......ಮೂರ್ ವರ್ಸಾ ಸಾರೂ ..ಬೆಸಿಗೆ ಅಂದಿಲ್ಲ ....ಸೊಳಿ ಅಂದಿಲ್ಲ ಮಳೆ ಅಂದಿಲ್ಲ ಇವ್ನಕೋಸ್ಕರಾ ಹೆಣ್ಣ ಹೈಕ್ಳ ಹುಡಕಿದ್ದೆ ಹುಡಕಿದ್ದು .ನೀವು ನೋಡ್ದೆ ಇರೋ ವಿಷ್ಯ ಏನೂ ಅಲ್ಲ .ನೀವು ಒಂತಾವ ಯೋಳಿದ್ರಿ ನೋಡಿದ್ದಾಯ್ತು ಅವರು ಪಸ್ಟು ಒಪ್ಕೊಂಡು ಅಮೇಲೆ ಕೊಡಲ್ಲ ಅಂದಿದ್ದು ನಿಮ್ಗೊಂದಾನೆ ತಿಳಿತು ಅಲ್ಲ್ ವ್ರಾ..?...ಈಗ ಹೋದ್ವಾರಾ ನೋಡಿ ನನ್ ಜೋತೆ ಒಪ್ಗೆ ಅಂತೇಳಿ ಈ ವಾರಾ ಅವ್ರ ಅಕ್ಕಾ ಬಾವ್ನ ಜೊತೆಕೆ ಹೋಗಿ ಬೇಡಾ ....ಹುಡಗಿ ದಪ್ಪಾ ....ಅಂದ್ಬುಟ್ಟಾ ನನ್ನ ಮರ್ವಾದೆ ಏನ್ ಆಗಬೇಕು ..? ಅಲ್ಲಾ ಸೋಮೆ ನೀನು ದಾಗಟರು ನಿನ್ನ ಅತ್ರ ಬಂದ್ರೆ ಒಳಕ್ಕರ್ದು ಟೀ ಕುಡ್ಸಿ ಕಸ್ಟಾ ಸುಕಾ ಕೇಳಿ ಅರ್ದ ಗಂಟೆ ಮಾತೆಳಿ ಕಳುಸ್ತಿಯಾ ...ಬೇರೆ ಯಾವನ್ಗಾನಾ ನಿನ್ ರೂಮಾಗ ಬಂದು ನನತರಾ ಮಾತೇಳೋ ಕೆಪಾಸಿಟಿ ಐತಾ ...? ಯಾಕಪ್ಪಾ ಅಂದ್ರೆ ನೀನು ನಂಕ ಮರ್ಯಾದೆ ಕೋಡ್ತಿಯಾ ಅದಕ ತಕ್ಕಂಗೆ ನಾನು ನಡ್ಕೋಬೇಕು .ನಾನು ನಿಂಕಾ ಇಸ್ವಾಸಗಾತಾ ಮಾಡುದ್ರೆ ನಂಕೂ ಮರ್ಯದೆ ಇರಲ್ಲ ನಮ್ ಪ್ರೆಂಡ್ಶಿಪ್ಗೂ ಮರ್ಯದೆ ಇರಲ್ಲ ..."

"ಅಣ್ಣಾ ಸ್ವಲ್ಪ ನಿಧಾನ ....ನಾನು ಓಡೋಗಲ್ಲ ನೀನೂ ಓಡೋಗಲ್ಲ ನಿದಾನ್ವಾಗೇಳು ...ನಾನ್ ಕೇಳ್ತಿನಿ ...ಹುಡ್ಗಾ ಟೀ ಮಡ್ಗವ್ನೆ ಟೀ ಕುಡ್ದಿರು ಆ ಮೇಲೆ ಮಾತಾಡಿಯಾ " ಎಂದು ಬುಸುಗುಡುತಿದ್ದ ಅಣ್ಣಯ್ಯನ ಬಲವಂತದಿದಂದ ತಡೆದೆ .ಟೀ ಕುಡಿಯುತ್ತ ನನ್ನತ್ತ ನೋಡತೊಡಗಿದ .

" ಮಗನು ಹುಡಗಿನಾ ಬೇಡಾ ಅಂದ್ನಾ ...ಹಾಂಗಂದ್ರೆ ?" ಎಂದೆ

" ಹೌದ್ಸಾರು ...ಅವತ್ತು ಒಪ್ಕೊಂಡಾ ಸುಕ್ರಾರ ಅಂದ್ರೆ ನೆನ್ನೆ ಅವರ ಅಕ್ಕನು ಭಾವನು ಹುಡಗಿ ದಪ್ಪಾ ಅಂದ್ರಂತೆ ಈಗಾ ಬೇಡಾ ಅಂದ್ನು ...ನಮ್ ಮರ್ಯಾದೆ ಏನಾಗಬೇಕು .....? ನೀನೇಳೂ ಉಡ್ಗಿ ಕಣ್ಮುಚ್ಕೊಂಡು ಮದ್ವೆಯಾಯ್ತಿನಿ ಅಂತೇಳಿ ..ಈಗಾ ಅವ್ರ ಅಕ್ಕಾ ಬಾವನ್ ಜೋತೆ ಈ ಒಸಾ ನಾಟ್ಕಾ .....ಇವನೇನು ಸುಂದ್ರನಲ್ಲ ...ಇವನು ದಪ್ಪಾನೆ ವಯಸು ಯಾರಪ್ಪಂದು ? ಇವಾಗ್ಗೆ ಮೂವತ್ತೈದು .... ಕೇಳ್ಕೋರೆಲ್ಲಾ ಹುಡಗ್ನಕಾ ವಯ್ಸು ಜಾಸ್ತಿ, ವಯ್ಸು ಜಾಸ್ತಿ ಅಂತಾ ,ಹೆಣ್ ಕೊಡ್ತಿನಿ ಅಂದೋರು ಕ್ಯಾನ್ಸಲ್ ಮಾಡಾಕದ್ರು .....ಅದರಲ್ಲಿ ನಮ್ ಗೌಡ್ರಲ್ಲಿ ದ್ಯಾವ್ರಗಳು ಪ್ರಾಬ್ಲಮ್ಮು ನಾವು ದ್ಯಾವ್ರು ಮಾಡಲ್ಲ ಅದಕ್ಕಾಗೆ ಅರ್ದಾ




ಮುಕ್ಕಾಲ ಜನ ಕೊಡಲ್ಲ ಅಂದ್ರು .....ಆಂದ್ರ ಆಯ್ತು ಕುಪ್ಪಂ ಮದನಪಲ್ಲಿ ...ತೆಮ್ಳುನಾಡಾಯ್ತು ..ಕಿಷ್ಣಗಿರಿ ,ಯಾಪನಪಲ್ಲಿ.....ಹೊಸೂರಗಂಟಾ ಹೋಗಿದ್ದಾಯ್ತು ಇವನಕೋಸ್ಕರಾ.. ಇವಾಕಾ ತಿರ್ಪುರ ಸುಂದ್ರಿ ಬೇಕ್ಯಾಗೆವ್ಳೆ ....ಅಲ್ಲಾ ಸೋಮೆ ಎಲ್ರೂ ಬರಿ ಸುಂದ್ರಿನೇ ಬೇಕು ....ಸಣ್ಕಿರೋಳೆ ಬೇಕು ಅಂದ್ರೆಂಗೆ ?...ಕಪ್ಕಿರೋ, ದಪ್ಕಿರೋ ಹೆಣ್ಹೈಕ್ಳನಾ ಮದ್ವೆಯಾಗೋರ್ಯಾರು ? ಇವನ್ಕಾ

ಮೂವಾರು ಅಕ್ಕಂದ್ರು ...ಒಬ್ಳು ತಂಗಿ. ....ಅವರ್ಯಾರಾದ್ರು ದಪ್ಪಗಾ ಕಪ್ಪಗಾ ಇದ್ರೆ ಎಂಗಿರೋದು ? ಮನೆ ತುಂಬ ಹೆಣ್ಣೈಕ್ಳಿರೋ ನಾವು ಈ ತರಾ ಮಾತಾಡ್ಬೋದಾ ....? . ಅಪ್ಪಾ ಅಮ್ಮನ್ನಾ ಇಸ್ಟಾ ಆಗ್ಯೋದ್ರೆ ....ಸಿವಾ ಅಂತ ಮದ್ವೆಯಾಗಿ ಸಮ್ಸಾರ ಮಾಡೋದಲ್ವಾ ಸಾಮೆ ..?.." ಎಂದು ಟೀ ಮುಗಿಸಿ ನನ್ನ ನೋಡಿ ಹುಬ್ಬೇರಿಸಿದ ಅಣ್ಣಯ್ಯ

" ನೀನೇಳೋದು ಸರೀನೆ ಅಣಾ ....ಎಲ್ಲರಿಗೂ ಬೆಳ್ಳಗೆ ಸಣಕಲು ಸುಂದ್ರಿನೆ ಬೇಕು ಅಂದ್ರೆ ಹೆಂಗೆ ?" ಎಂದೆ

" ನನ ಹಿರಿ ಸೊಸೆ ನೊಡಕ ಪರ್ವಾಗಿಲ್ಲ,ಎರಡನೆ ಸೊಸೆ ಕಪ್ಪಗೆ ಅವ್ಳೆ ,ನಾನು ಎರಡನೆ ಮಗನ್ನಾ ...ಲೇ ಇವಳ್ನಾ ಮಾಡಿಕ್ಯಾ ಅಂದೆ ಅವ್ನು ಕಮಕ್ ಅನ್ದೆ ಮಾಡಿಕೆಂಡಾ ಇವಾಕ್ಕಾ ಬಂಗಾರವಾಗೆದೆ ಅವನ ಸಂಸಾರಾ ....ಕಲರ ಎಲ್ಲೋಯ್ತೋ ಏನೋ...? ...ಅದ್ಯಾಕ ಸೋಮೆ ನನ್ ಇಷ್ಯಾನೆ ತಗೋಳಿ .ನಮ್ಮೋಳ್ಕಾ ಮೆಂಟಲ್ ಕಾಯ್ಲೆ ನಿಂಕೂ ಗೋತ್ತು. ಈಗ ಸುಮಾರಾಗೆವೈ. ನಾನ್ ಮದ್ವೆ ಅದಾಗ ಅವ್ರ ಊರೋರೆಲ್ಲ ಹುಚ್ಚಿ ಅನ್ನೋರು ಸಾಮೆ .ನನ ಮದ್ವೆ ಹೆಂಗಾತು ತಿಳ್ಯೋದಾ ನಿಂಕಾ ....? ನನ ಮದ್ವೆ ವಯಸ್ಕಾ ನಾನು ಬಲೆ ಸಂದಾಗಿದ್ದೆ ....ನಮ್ಮಪ್ಪನ್ನು ಯಾರ್ದೋ ಜಿದ್ದಿಗಿ ಬಿದ್ದು ಇವಳ್ನಾ ನಂಕ ಮದ್ವೆ ಮಾಡ್ಸದಾ .ನಮ್ಮೋಳು ಹುಟ್ದಾಗಾ ನಮ್ಮತ್ತೆಕಾ ಸನ್ನಿ ಸಕಾ ಆಗಬುಟ್ಟು,.... ನಮ್ಮೋಳು ಹಾಲ್ಕುಡಿಯೋ ಕೂಸಾಗಿದ್ದಾಗಾ ಬ್ರೆನ್ ಕಾ ಎಫೆಟ್ ಆಗಿ ಮೆಂಟ್ಲಾಗೋದ್ಲು .ನಮ್ಮಪ್ಪನು ಯಾರ್ದೋ ಜಿದ್ದಗ್ ಬಿದ್ದು .....ಲೇ ಇವಳ್ನಾ ಮಾಡ್ಕ್ಯಾ ಅಂದ್ನು .....ನಾನು ಒಂದು ಮಾತಿಲ್ದೆ ಮಾಡಿಕಂಡೆ .ಮದ್ವೆ ಆಗಿದ್ದಿನಾ ನಮ್ಮತ್ತೆ ಬಂದು ನನ ಕಾಲಿಡಿಯೋಕ ಬಂದ್ಲು, ಅತ್ಕೊಂಡು ನನ್ನ ಮಗಳ್ನಾ ಉಚ್ಚಿ ಅಂತಾರೆ ಊರ ಜನಾ ಎಲ್ಲಾ....! ಅವಳ್ಕಾ ಅಡಿಗೆ ಮಾಡಕ ಬರಲ್ಲ ಸರಿಯಾಗಿ ಬಾಳ ಮಾಡಕ ಬರಲ್ಲ ...ಎಲ್ಲಾ ಗೋತ್ತಿದ್ದು ಅವ್ಳನಾ ಮಾಡಿಕಂಡೆ ...ಅವ್ಳು ತಪ್ಪು ಮಾಡಿದ್ರೆ ಹಸಾನೋ ಮೇಕೆನೋ ತಪ್ಪು ಮಾಡದಂಗೆ ಅನ್ಕೊಂಡು ಮರ್ತ ಬುಡು ,ಒಂದು ಸಾಕ್ ಪ್ರಾಣಿತರಾ ನೋಡ್ಕೋ ಅಂದ್ಲು ಸೋಮೆ .ಅದಿಕ್ಕೆ ನಮ್ಮಪ್ನು ಅಂದೆಂಗಮ್ಮಾ...? ದೊಡ್ಡಮುನಿಯಪ್ಪನ ಸೊಸೆ ಅಂದ್ರೆ ತೆಳಿಯುದಾ...? ಅವ್ಳನಾ ಮಾರಾಣಿಯಂಗೆ ನೋಡ್ಕತೀನಿ ಅಂದು ಮನೆಕೆ ಕರ್ಕೊಂಬಂದಾ ಸಾಮೇ. ನಾನು ಹಂಗೆ ನೋಡ್ಕಂಡೆ .ನಮ್ಮೋಳ್ಕಾ ಏನಂದ್ರೆ ಏನೂ ಗೊತ್ತಿರಿಲ್ಲ .ಆವ್ರ ಊರ್ಜನಾ ,ನೆಂಟ್ರು ಹುಚ್ಚಿ, ಮೆಂಟ್ಲು ಅಂತಾನೆ ಬೇಳ್ಸುದ್ರು ನಾನು ನಾನು ಅವ್ಳಾ ರಾಣಿಯಂಗೆ ನೋಡ್ಕಂಡೆ .ಅವಾಕ್ಕಾ ನಮ್ಮೂರಿಂದ ಸರ್ಜಾಪುರ್ಗಂಟಾ ಬಸ್ಸು, ಅಲ್ಲಿಂದ ನಿಮ್ಹಾನ್ಸ್ಗಾ ಇನ್ನೊಂದು ಬಸ್ಸಾಗಾ ಓಗಿ ಸ್ಟೆಟ್ ಮೆಂಟ್ ಕೊಡಸ್ದೆ ಸೋಮೆ. ಕೊಂಚ ಕೊಂಚ ಸರಿಯೋದ್ಲು .ನಮ್ಮಮ್ಮ ನಿದಾನ್ವಾಗಿ ಮುದ್ದೆ ತಟ್ಟೋದು ಉಪ್ಸಾರು ಇನ್ನೊಂದು ಮತ್ತೊಂದು ಕಲ್ಸಕೊಟ್ಲು .ಅವಾಗಾ ಬಡ್ತನಾ ಅಂದ್ರೆ ಬಡ್ತಾನಾ .ನಮ್ಮೋಳು ನಂಕೊಂದು ಬಟ್ಟೆ ಕೊಡ್ಸು ನಂಕೋಂದು ಬಂಗಾರ ಕೊಡ್ಸು ಅಂದಿಲ್ಲ ಸೋಮೆ .ನೀಟಾಗಿ ಮೂರೋತ್ತು ಉಣ್ಣಕಿಕ್ಕಿ ಮನೆತುಂಬಾ ಮಕ್ಕಳೆತ್ಲು ,ಅವುನ ನೀಟಾಗಿ ಸಾಕುದ್ಲು .ಬರ್ಗಾಲದಲ್ಲಿ ಗಂಜಿಇದ್ರೂ ಹೂಂ ,ಇಲ್ದಿರಾ ಇದ್ರೂ ಹೂಂ, ನಂಕಾ ಮಕ್ಕಳ್ಕಾ ಉಣ್ಣಕಿಕ್ಕಿ ಮಿಕ್ಕುದ್ರೆ ಅವ್ಳು ಉಣ್ಣೋಳು .ಇವಳ ಕಾಲ್ಗುಣಾ ಸಂದಾಗಿತ್ತು ನಮ್ಮಪ್ಪನು ಎಲ್ಡೆಕ್ರೆ ಸಂಪಾದಿಸಿದ್ನು .ಅದೆ ಇವಳ ಕಾಲ್ಗುಣದಿಂದಾ ಈವತ್ತು ಇಪ್ಪತ್ತೆಲ್ಡ ಎಕರೆ .ಎಲ್ಲಾ ಇವಳಿಂದ್ಲೆ ಸೋಮೆ .ನಾನ ಸುಂದ್ರಿ ನಂಕ ಅದು ಬೇಕು ,ನಂಕ ಇದು ಬೇಕು ಅಂದಿದ್ರೆ ಆ ಎಲ್ಡೆಕ್ರೆನೂ ಮಾರ್ಕೋಬೇಕಾಗಿತ್ತು .ನಾನು ಅಷ್ಟೆ ಸೋಮೆ.. ಅವ್ಳ ಮೆಂಟ್ಲ ಲ್ಲ ಕೋಂಚ ನಿಧಾನ ಅಂತೇಳಿ ಆ ನಿಮ್ಹಾನ್ಸ್ ದಾಗಟ್ರು ಏಳ್ದಾಗಿಂದ ಮಗು ನೋಡ್ಕಂಡಂಗೆ ನೋಡ್ಕಂಡೆ .ಈ ಕಡ್ಡಿ ಎತ್ತಿ ಈ ಕಡೆ ಮಡಗು ಅಂದಿಲ್ಲ .ಅವ್ಳು ಅಷ್ಟೆ, ನಾನಂದ್ರೆ ಅವ್ಳಾ ದೇವ್ರು .ನಾಲ್ಕ ಗಂಡು ನಾಲ್ಕು ಹೆಣ್ಣು ಮಕ್ಕಳಾದ್ವು .ಇರಿಮಗ್ಳು ಬೇಗಾ ಮನೆಕೆಲ್ಸಾ ಕಲ್ಕೊಂಡು ಸಾಯಾ ಆದ್ಲು . ಆಮ್ಯಾಕಾ ನಮಕ ಕಷ್ಟನೆ ಇಲ್ಲ .ಆದ್ರೆ ನನ್ನೆಂಡ್ರು ಮೆಂಟ್ಲು ,ಉಚ್ಚಿ ಅಂದಕೊಂಡು ಯಾವತ್ತೂ ನಾನವ್ಳ ಜೊತೆ ಸಮ್ಸಾರ ಮಾಡಿಲ್ಲ ಸೋಮೆ .ಟೆಮ್ ಟೆಮ್ಕಾ ನಿಮ್ಹಾನ್ಸಕಾ ಕರ್ಕೊಂಡ್ಹೋಗಿ ಮಾತ್ರೆ ಮದ್ದು ತಂದು ಕೊಡೋದು ಇವತ್ತೂ ತಪ್ಲಿಲ್ಲ .ಈ ನಡ್ವೆ ಸುಗರ್ಬಂದು ಕಾಲು ಗ್ರಾಂಗ್ರಿನ ಆಗಿ ಊರೋರೆಲ್ಲಾ ಕಾಲ್ಕಟ್ಟ ಮಾಡ್ಬೇಕು ಅಂದ್ರು ,ನಿಂಕೂ ನ್ಯಾಪ್ಕ ಇರ್ಬೆಕು ನೀನು ಡ್ರೆಸಿಂಗ್ ಮಾಡಿದಿಯಾ .ಅವ್ಳ ಕಾಲು ಅದೆಂಗ ಕಟ್ಟಾಯ್ತುದೆ ನೋಡೋಣಾ....? ಅಂತೇಳಿ ನಾನೆ ದಿನಾ ಟಿಂಚರ್ ಹಾಕಿ ಡ್ರೆಸಿಂಗ್ ಮಾಡ್ದೆ ಸೋಮೆ ಮನೆಲಿ .ಈಗ ಅವ್ಳ ಕಾಲು ಮುಂಚೆ ತರಾ ನಾರ್ಮಲ್ ಆಗೆದೆ .ಅವ್ಳ ಕಾಲ ಸರಿ ಓಗೋಗಂಟಾ ನಂಕ ರಾತ್ರಿಗೋಳ್ಕಾ ನಿದ್ರಿ ಬಂದಿಲ್ಲ ಸೋಮೆ ತಿಳ್ಯೋದಾ ನಿಂಕಾ ...? ನನ್ನೆಂಡ್ರು ಮಗು ಇದ್ದಂಗ ಸೋಮೆ .ಹೆಣ್ಣೆಂಗ್ಸು



ಅಂದ್ರೆ ಬರಿ ಪಕ್ಕ ಮನಿಕೊಂಡು ಮಕ್ಕಳುಟ್ಸೋದಲ್ಲಾ .ಅವರ ನಮನೆಂಗ ನೊಡ್ಕೊಬೇಕೋ ನಾವು ಅವ್ರನಾ ಅಂಗೆ ನೋಡ್ಕೋಬೇಕು .ನಮ್ಮೂರಾಗ ಬಂದ್ ಕೇಳಿ ಸೋಮೆ ...ಅಣ್ಣಯ್ಯನು ಅವನೆಂಡ್ರನಾ ಎಂಗೆ ನೋಡ್ಕೊಂಡ್ನು ಅಂತಾ ...??."

" ಅಲ್ಲಣ್ಣಾ ನೀನು ನಿನ್ ಮದ್ವೆ ವಿಷ್ಯಾ ಇವತ್ತ ವರ್ಗೂ ಹೇಳ್ಳೆ ಇಲ್ಲ .ನಾನು ನೋಡ್ದಾಗಿಂದ ನೀನು ಅಕ್ಕನಾ ನೋಡ್ಕೊಳ್ಳೋದು ನಾನೆ ನೋಡಿ ಶಾಕಾಗಿದಿನಿ." ಎನ್ನುತ್ತ ಅಣ್ಣಯ್ಯನ ತಡೆಯುವಷ್ಟರಲ್ಲಿ ಕೊಂಚ ತಣ್ಣಗಾಗಿದ್ದ .



" ಅಲ್ಲಾ ಸಾರೂ..... ನಮ್ಮ ಇರಿ ಮಗ್ಳು ನಾನು ತೋರ್ಸಿದವ್ನಾ ಮದ್ವೆ ಮಾಡ್ಕೊಂಡು ಚಂದಾಗೆವ್ಳೆ .ಎಲ್ಡ್ನೆಯವ್ಳೂ ಅಂಗೆ .ಮೂರ್ನೆ ಮಗುಕೂ ನಾನೆ ನೋಡಿದ್ದು ...ಅದೆ ನೀನು ಗೌರ್ಮೆಂಟಾಗಾ ಅಪೆಂಟಾಗಿ ಬಂದ್ ಹೋಸತ್ರಲ್ಲಿ ಅವ್ಳ್ ಚೊಚ್ಚ ಹೆರ್ಗೆ ಮಾಡಿದ್ದೆ ನೀನೆ .ಆವತ್ತಿಂದಾನೆ ನಂಕೂ ನಿಂಕೂ ಪ್ರೆಂಡ್ಶಿಪ್ಪು .ಅವ್ಳೂ ಚೆಂದಾಗೆವ್ಳೆ .ನನ್ನ ಮೂರುಗಂಡ ಮಕ್ಕಳೂ ನಾನು ತೋರ್ಸಿದ್ದ ಹೆಣ್ಣ ಮಗಿನಾ ಕಣ್ಮುಚ್ಕೊಂಡು ಮದ್ವೆಯಾಗಿ ಬಂಗಾರ್ದಂಗೆ ಬಾಳ್ತಾವ್ರೆ .ಇವ್ನಕಾ.....ನಮ್.. ರಾಮುಕಾ ಅಪ್ಸರೆನೆ ಬೇಕಂತೆ .ಎಮ್ಮಲ್ಲೆ ಕಡೆಯವ್ರು......!! ನನ್ ಮಕಾ ನೋಡಿ, ಇಂದೆ ಮುಂದೆ ನೋಡಿಲ್ಲ ,ದ್ಯಾವ್ರು ದಿಂಡ್ರು ಕೇಳುಲ್ಲ ಉಡ್ಗಿ ಕೊಡೋಕ್ ಒಪ್ಕೆಂಡ್ರು .ಈಗ ಇವನ್ಕಾ ಸಣ್ಕಿರೋಳು ಕೆಂಪ್ಕಿರೋಳು ಬೇಕಂತೆ .ನಾನು ಇವರಮ್ಮನ ಮದ್ವೆಯಾಗಿದ್ದು ಕತೆ ಇವನಕಾ ತಿಳಿಬೇಕು .ಇವನು ನೋಡ್ದಿರದೇನೂ ಇಲ್ಲ.ಅರ್ತಾ ಮಾಡ್ಕೋಬೇಕು .ಇವನಾದ್ಮೆಲೆ ಕೊನೆ ಹುಡ್ಗಿ ಮದ್ವೆ ಮಾಡಬೇಕು .ಆ ಹೆಣ್ಮಗು ನೋಡುದ್ರೆ ಹೊಟ್ಟೆ ಉರಿತದೆ .ಹೆಣ್ಣ ಹೆತ್ತ ಮೇಲೆ ಸರಿಯಾಗಿ ನೋಡ್ಕೋಬೇಕು .ಹೆಣ್ಗೊಂದು ಲೆಕ್ಕ ಗಂಡ್ಗೊಂದು ಲೆಕ್ಕ ಮಾಡೋದು ಪಾಪಾ ಸೋಮೆ .ಈಗಾ ನಾನು ಅವ್ನ ಸಾವಾಸಕ್ಕೋಗಲ್ಲ ಅವ್ರ ಅಕ್ಕಾ ಬಾವನ ಇಷ್ಟದಂಗೆ ಪಿಲಿಂ ಇರೋಯಿನ್ನೆ ಮಾಡ್ಕಳ್ಳಿ ಯಾವನ್ ಬ್ಯಾಡಾ ಅಂದ್ನು . ನನ್ನ ಕಡೆ ಮಗಳ ಮದ್ವೆ ಮಾಡುದ್ರೆ ನನ ಜವಾಬ್ದಾರಿ ಮುಗಿತು ." ಎನ್ನುವಷ್ಟರಲ್ಲಿ

" ಅಣಾ ನಾನು ಹೇಳ್ತಿನಿ ಅವನಿಗೆ ನೀನು ಕೋಪಾ ಕಡ್ಮೆ ಮಾಡ್ಕೋ ...." ಎಂದೆ

" ನೋಡ್ಸಾಮಿ ನಂಕೂ ನಿಂಕು ಅತ್ತ ವರ್ಸದ ನ್ಯಾಸ್ತಾ .ನೀನು ಸಾಬ್ರು ನಾನು ಗೌಡ್ರು.ನಮ್ಮ ಪ್ರೇಂಡ್ಶಿಪು ಇಡಿ ಓಬಳಿಗೆ ಪ್ರೇಮಸ್ಸು .ನಂಕಾ ಹೆಣ್ಗೊಂದ ಲೆಕ್ಕ ಗಂಡ್ಗೊಂದ್ ಲೆಕ್ಕಾ ಮಾಡುದ್ರೆ ಶ್ಯಾನೆ ಕೋಪಾ ಬತ್ತದೆ .ಅವ್ನ ಕೇಳಿ ಹೆಣ್ಣೆಂಗ್ಸು ಅಂದ್ರೆ ಬರೀ ಮಕ್ಕಳುಟ್ಸೋದು ಅಲ್ಲ .ಕಲರ್ರು ಸೈಜು ನೋಡಿ ಮದ್ವೆಯಾಗೋದಲ್ಲಾ ,ಮನಸತ್ವ ಇರ್ಬೆಕು ಅಂತೇಳಿ ಸ್ವಪಾ ಬುದ್ದಿ ಹೇಳಿ .ಅಪ್ಪನ ಮಾತಿಗೆ ಬೆಲೇ ಇಲ್ಲಾ ಅಂದ್ರು ಪರ್ವಾಗಿಲ್ಲ ನಿಮ್ಮಂತವ್ರ ಮಾತಿಗಾನಾ ಬೆಲೆ ಇರ್ಲಿ .ಕೋನೆಗೆ ಓಗೋದು ಅಪ್ಪನ ಮಾರ್ಯಾದೆನೆ ...." ಎಂದು ಇನ್ನೂ ತಣ್ಣಗಾಗದ ಅಣ್ಣಯ್ಯನಿಗೆ

" ಅಣ್ಣಾ.....! ಸಾಕಣ್ಣಾ ರಾಮುನಕಾ ನಾನೆ... ಯೋಳ್ತಿನಿ .ಒಳ್ಳೆ ಹುಡ್ಗಾ ಅವ್ನು ಅದೇನೋ ಮೂಡಲ್ಲಿ ಹೇಳಿದಾನೆ ..." ಎಂದು ಹೇಳುವಷ್ಟರಲ್ಲಿ ಅಣ್ಣಯ್ಯನ ಮುಖ ಕೊಂಚ ಅರಳಿತು

" ಔದ್ ಸಾರೂ ಎಣ್ಣೆಂಗ್ಸ ಅಂದ್ರೆ ಮರ್ಯಾದೆ ಕೊಡ್ಬೇಕು ......" ಅನ್ನುವಷ್ಟರಲ್ಲಿ ಅಣ್ಣಯ್ಯನ ಜಂಗಮವಾಣಿ ರಿಂಗಣಿಸಿತು

" ಅಲೋ ಅಮ್ಮಯ್ಯ ......" ಎನ್ನುತ್ತ ನನ್ನತ್ತ ನೋಡಿ

" ಇರು ಸೋಮೆ ನನ್ ಇರಿ ಸೋಸೆ ಇಜಮ್ನು ....." ಎಂದು ಮಾತು ಮುಂದವರೆಸಿದ

" ಉಂ ಅಮ್ಮಯ್ಯಾ .....ಒಬ್ಬಟ್ಟು ಸಾಮಾನು ಇವತ್ತೆ ತಂದಿರೋದಾ ....? ಊಂ ಸರೆ .,.ಶೆಟ್ಟಿ ಅಂಗ್ಡಿ ತಾವಾ ಓಗಿ ಪೋನಾಕ್ತಿನಿ ಅವನ್ಗೆ ಹೇಳಿಯಾ .....ತತ್ತೀನಿ.....ಊಂ ಇಲ್ಲೆ ಇರೋದು ....ದಾಗಟ್ರು ಮುಂದೆನೆ ಕೂತವ್ರೆ ....ಯೋಳ್ತಿನಿ ....."ಸಾ..ಇಜಮ್ನು ನಮ್ಮನೆಯವರು ಉಗಾದಿ ಹಬ್ಬಕ್ಕಾ ಊಟ್ಕೆಳವ್ರೆ ...ಈ ಸಲಾ ನಿಮ್ ಹೆಂಗಸ್ರು ಮಕ್ಳು ಕರ್ಕೊಬಾ ಸೊಮೆ ....ನಿನ್ ಮಗನಕೂ ನಂಕಾ ಬಲೆ ಪ್ರಂಡ್ಶಿಪ್ಪೂ ನೋಡಿ ಶಾನೆದಿವ್ಸಾ ಆಯ್ತು ....." ಎಂದು ಕರೆಯ ಮಧ್ಯೆ ನನ್ನ ನೋಡಲು

" ಅಣಾ ಗ್ಯಾರಂಟಿ ....ನಿಮ್ಮನೆ ಒಬ್ಬಟ್ಟುಗಳು ಮಿಸ್ ಮಾಡಂಗೆ ಇಲ್ಲ ." ಎನ್ನಲು ಸಮಾಧಾನವಾಗಿ ಕರೆ ಮುಂದುವರೆಸಿಕೊಂಡು

" ಅಲ್ಲಮ್ಮಾ ಅವ್ನು ಉಡ್ಗಿ ಬೇಡ ಅಂದಿದ್ದು ದಾಗಟರ್ ತಾವಾ ದೂರ್ ಎಳ್ದೆ ......" ಎಂದು ಸೊಸೆಗೆ ವರದಿ ಒಪ್ಪಿಸುತ್ತ ಹೊರಟು ಹೋದ ಅಣ್ಣಯ್ಯ.

ವೈದ್ಯಸಂಪದ

ವೈದ್ಯ ಸಂಪದ



ಕಥಾ ವಿಭಾಗ

# ಶಾಲೆಯಿಂದ ಸೆರೆಗೆ

**ಡಾ ಶಿವಶಣಕರ ಮೇಟಿ**
ಸ್ತ್ರೀ ರೋಗ ತಜ್ಞರು
248, ಮೆರ್ನ್ಸ್ ರೋಡ್, ನ್ಯೂಟನ್ ಮೆರ್ನ್ಸ್ ಗ್ಲಾಸೋ, ಸ್ಕಾಟ್ಲೆಂಡ್, ಜಿ 775 ಎಲ್ ಎಕ್ಸ

ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೊರಟ ಬಸ್ಸು ದಾವಣಗೆರೆಯನ್ನು ತಲುಪಿದಾಗ ರಾತ್ರಿ ಹನ್ನೆರಡು ಗಂಟೆಯಾಗಿತ್ತು . ಕಾಫಿ ಕುಡಿಯಲು ಅರ್ಧಗಂಟೆ ಸಮಯವಿದೆಯೆಂದು ಹೇಳಿ ಚಾಲಕ ಮತ್ತು ಕಂಡಕ್ಟರ್ ಇಬ್ಬರೂ ಬಸ್ಸಿನಿಂದ ಕೆಳಗೆ ಇಳಿದು ಹೋದರು . ಅರೆನಿದ್ರೆಯಲ್ಲಿದ್ದ ನನಗೂ ಸಹ ಕಾಫಿ ಹೀರಬೇಕೆನಿಸಿತು . ಕೆಳಗೆ ಇಳಿದು ಕಾಫಿ ಕುಡಿಯಲೆಂದು ಬಸ್ ಸ್ಟ್ಯಾಂಡಿನಲ್ಲಿದ್ದ

ಸಣ್ಣ ಬೀಡಾ ಅಂಗಡಿಯ ಮುಂದೆ ನಿಂತಿದ್ದೆ. ಅಷ್ಟರಲ್ಲಿಯೇ ನನ್ನ ಕಡೆಗೆ ಯಾರೋ ಧಾವಿಸಿ ಬರುವುದು ಕಾಣಿಸಿತು . ಹರಕಲು ಬಟ್ಟೆ , ಕುರುಚಲು ಗಡ್ಡಾ , ಮೈಮೇಲೊಂದು ಕೊಳೆಯಾದ ಕಂಬಳಿ ಹೊತ್ತ ಸುಮಾರು ಮೂವತ್ತರ ವಯಸ್ಸಿನ ಮನುಷ್ಯ .


“ಲೇ ಹಲ್ಕಾ ನನ್ನ ಮಕ್ಕಳಾ ನನ್ನನ್ನ ಹಾಳು ಮಾಡಿದಿರಿ , ನೀವೆಲ್ಲಾ ಪಾಪಿಗಳು , ಹುಚ್ಚ ನನ್ನ ಮಕ್ಕಳು “ ಎಂದು ಕಿರುಚಾಡತೊಡಗಿದ . ನನಗೆ ಯಾಕೋ ಭಯವಾಯಿತು. ಕಾಫಿಯನ್ನು ಬಿಟ್ಟು ಬಸ್ಸಿನತ್ತ ಪಲಾಯನ ಮಾಡಲು ತಯಾರಾಗತೊಡಗಿದೆ , ಅಷ್ಟರಲ್ಲಿಯೇ ಅಂಗಡಿಯ ಹುಡುಗ ಅವನನ್ನು ಅಲ್ಲಿಂದ ಓಡಿಸಿ,

“ಸಾರ್ ನೀವೇನು ಡಾಕ್ಟರಾ?” ಎಂದು ಕೇಳಿದ. ಅರೆ! ನಾನು ಡಾಕ್ಟರಂತಾ ಇವನಿಗೆ ಹೇಗೆ ಗೊತ್ತಾಯಿತೆಂದು ಆಶ್ಚರ್ಯವಾಯಿತು.

“ಹೌದಪ್ಪ , ಆದರೆ ನಿನಗೆ ಹೇಗೆ ಗೊತ್ತಾಯಿತು?” ಎಂದೆ.

ಸಾರ್ ಅವನು ಡಾಕ್ಟರಗಳನ್ನು ಕಂಡರೆ ಮಾತ್ರ ಹಾಗೆ ರೇಗಾಡುವದು ಇಲ್ಲ ಅಂದರೆ ಸುಮ್ಮನೆ ತನ್ನ ಪಾಡಿಗೆ ಇಲ್ಲಿಯೇ

ಓಡಾಡಿಕೊಂಡು ಇರುತ್ತಾನೆ . ಪಾಪ ಡಾಕ್ಟರ್ ಆಗಲು ಹೋದವ ಹುಚ್ಚನಾಗಿ ಅಲೆಯುತ್ತಿದ್ದಾನೆ, ಎಲ್ಲಾ ಗ್ರಹಚಾರ, ನಿಮಗೇನಾದರೂ ಬೀಡಾ ಬೇಕಾ ಅಂತ ಕೇಳಿದ. ಬೀಡಾ ಕಟ್ಟಿಸಿಕೊಂಡು ಬಸ್ಸಿನತ್ತ ಮರಳುವಾಗ ಅವನನ್ನು ಮತ್ತೊಮ್ಮೆ ನೋಡಿದೆ. ಅರೆಗತ್ತಲಿನಲ್ಲಿ ನಿಂತು ನನ್ನನ್ನೇ ಗುರಾಯಿಸುತ್ತಿದ್ದ , ನಾನು ಒಮ್ಮೆ ಅವನತ್ತ ನೋಡಿದೆ , ತಕ್ಷಣವೇ ತಲೆಯಲ್ಲಿ ಹೊಳೆಯಿತು ಅವನು ನಮ್ಮ ವೈದ್ಯಕೀಯ ಕಾಲೇಜಿನ ಸಹಪಾಠಿ ‘ ಮುರಳಿ ‘ ಎಂದು .



ಅವನೊಬ್ಬ ಹಳ್ಳಿಯ ಹುಡುಗ . ಬಡ ಕುಟುಂಬದಲ್ಲಿ, ಕಂದೀಲು ಬೆಳಕಿನಲ್ಲಿ ಓದಿ ಕೆಎಂಸಿಯ ಬಾಗಿಲು ತುಳಿದಿದ್ದ. ಸಾವಿರ ಕನಸುಗಳನ್ನು ಹೊತ್ತು ತಂದ ಕನಸುಗಾರರಲ್ಲಿ ಇವನೂ ಒಬ್ಬ. ಇವನ ಬಗ್ಗೆ ನೂರಾರು ಆಶೆಗಳನ್ನು ಇಟ್ಟುಕೊಂಡಿದ್ದ ತಂದೆ ತಾಯಿಗಳು ಹೇಗೋ ಕಷ್ಟಪಟ್ಟು ಕೆಎಂಸಿ ಸೇರಿಸಿದ್ದರು . ಮೃದು ಸ್ವಭಾವ, ಕುಹಕವಿಲ್ಲದ ಮನಸು ಎಲ್ಲರೊಡನೆಯೂ ನಗುತ್ತ ಮಾತನಾಡುತ್ತಿದ್ದ ಹುಡುಗ. ಹಾಸ್ಟೆಲ್ ಜೀವನ ಹೊಸದಾಗಿತ್ತು. ಹಾಸ್ಟೆಲುಗಳಲ್ಲಿ ರ್‍ಯಾಗಿಂಗ್ ಜೋರಾಗಿದ್ದ ಕಾಲವದು. ರ್‍ಯಾಗಿಂಗ್ ಒಬ್ಬಬ್ಬರಿಗೆ ಮಜಾ ಕೊಡುತ್ತಿದ್ದರೆ ಕೆಲವರಿಗೆ ನರಕದ ಅನುಭವವಾಗಿತ್ತು . ಹಾಸ್ಟೆಲನ್ನು ಸೇರುವ ಹೊಸಬರು ಇದರಿಂದ ತಪ್ಪಿಸಿಕೊಳ್ಳುವದು ಅಸಾಧ್ಯವಾಗಿತ್ತು . ಇವನೂ ಅದಕ್ಕೆ ಹೊರತೇನಾಗಿರಲಿಲ್ಲ . ಇವನ ಮುಗ್ಧ ಸ್ವಭಾವ ಕಂಡ ಸೀನಿಯರ್ಸ್ ಕೇಳಿದ್ದರು

“ಯಾರನ್ನಾದರೂ ಲವ್ ಮಾಡಿದ್ದೀಯಾ ?” ಎಂದು

“ಹೌದು ಮಾಡಿದ್ದೇನೆ , ಈ ಭೂಮಿಯನ್ನು , ಆಕಾಶವನ್ನು ಮತ್ತು ಪ್ರಾಣಿ ಪಕ್ಷಿಗಳನ್ನು ತುಂಬಾ ಲವ್ ಮಾಡಿದ್ದೇನೆ “ಎಂಬ ಅವನ ಉತ್ತರವನ್ನು ಕೇಳಿ ಮತ್ತೆ ಅವನನ್ನು ರ್‍ಯಾಗಿಂಗ್ ಮಾಡುವ ತಂಟೆಗೆ ಯಾರೂ ಹೋಗಿರಲಿಲ್ಲ. ಎಂದೂ ಮನೆ ಬಿಟ್ಟು ಇರದ ಅವನಿಗೆ ಹಾಸ್ಟೆಲ್ ಜೀವನಕ್ಕೆ ಹೊಂದಿಕೊಳ್ಳುವದು ಸ್ವಲ್ಪ ಕಷ್ಟವೇ ಆಗಿತ್ತು. ಹಾಸ್ಟೆಲಿನಲ್ಲಿ ಇದ್ದದ್ದು ಮಿಶ್ರ ಮನಸುಗಳ ಹುಡುಗರ ಗುಂಪು.

ಕೆಲವರು ಸದಾ ಓದುವದರಲ್ಲಿ ನಿರತರಾಗಿದ್ದರೆ, ಕೆಲವರು ಹಗಲಿನಲ್ಲೆಲ್ಲಾ ಗಲಾಟೆ ಹಾಕಿ ರಾತ್ರಿಯಲ್ಲಾ ಓದುವವರಿದ್ದರು ಇನ್ನೂ ಕೆಲವರು ಬೇರೆಯವರ ಕಾಲನ್ನೆಳೆಯುತ್ತ ಇಡೀ ದಿನ ಮಜಾ ಮಾಡಿಕೊಂಡು ತಿರುಗುವ ಭೂಪರಿದ್ದರು. ಇಂಥ ಭೂಪರಿಗೆ ಯಾರಾದರು ಮುಗ್ಧರು ಸಿಕ್ಕರೆ ಸಾಕು ಅಮೃತ ಸಿಕ್ಕಂತೆ. ಮುರಳಿಯು ಅವರ ಮಜಾಗೆ ಬಲಿಪಶುವಾಗಿದ್ದ. ಏನಾದರೂ ಒಂದು ಪ್ರಸಂಗವೆತ್ತಿ ಅವನಿಂದ ಮಜಾ ತೆಗೆದುಕೊಳ್ಳುತ್ತಿದ್ದರು. ಮೊದ ಮೊದಲು ಅವನಿಗೆ ಬೇಜಾರಾಗುತ್ತಿದ್ದರೂ ಕೊನೆಗೆ ಅದಕ್ಕೆ ಹೊಂದುಕೊಂಡು ಹೋಗಿದ್ದ. ಓದುವದು ಸಾಕಷ್ಟಿದೆ, ಸಮಯ ಕಳೆದಂತೆ ಎಲ್ಲಾ ಸರಿ ಹೋಗುವದು ಎಂದುಕೊಂಡು ಸುಮ್ಮನಾಗಿದ್ದ. ಸಮಯ ಕಳೆದಿತ್ತು, ಪ್ರಥಮ ವರ್ಷ ಮುಗಿದು ಎರಡನೆಯ ಹಂತಿಗೆ ಕಾಲಿಟ್ಟಾಗಿತ್ತು. ಕೊರಳಲ್ಲಿ ಸ್ಟೆಥೋಸ್ಕೋಪು ತೂಗಾಡತೊಡಗಿತ್ತು. ಕೆಲವರಿಗೆ ಆಗಲೇ ವೈದ್ಯರಾದಷ್ಟು ಖುಷಿ . ಪರೀಕ್ಷೆಯ ಒತ್ತಡವನ್ನು ಗೆದ್ದು ಪಾಸಾದವರು ಆಕಾಶದಲ್ಲಿ ತೇಲಾಡುತ್ತಿದ್ದರು . ಮುರಳಿಯೂ ಅವರಲ್ಲಿ ಒಬ್ಬನಾಗಿದ್ದ. ಅವನಿಗೆ ಅರಿವಿಲ್ಲದೆ ವಯಸ್ಸಿಗೆ ತಕ್ಕ ಭಾವನೆಗಳು ಅವನ ಮನಸಿನಲ್ಲಿ ಮೂಡಿದ್ದವು . ಪ್ರಥಮ ಬಾರಿಗೆ ತನ್ನ ಬ್ಯಾಚಮೇಟ್ ಹುಡುಗಿಯೊಬ್ಬಳ ಜೊತೆಗೆ ಮಾತನಾಡಿದ್ದ. ಮಾತು ಮನಸಿಗೆ ಬಹಳ ಹಿತಕೊಟ್ಟಿತ್ತು.

ಪ್ರೇಮ ಪ್ರೀತಿಗಳ ಅಲೆಯೊಂದು ಮನದಲ್ಲಿ ತುಡುಕಾಡಿತ್ತು. ಮತ್ತೆ ಮಾತನಾಡಿಸುವ ಧೈರ್ಯವೂ ಇರಲಿಲ್ಲ ಎದುರಿಸುವ ಶಕ್ತಿಯೂ ಇರಲಿಲ್ಲ . ತನಗೂ ಅವಳಿಗೂ ಭೂಮಿ ಆಕಾಶದಷ್ಟು ಅಂತರವಿದೆಯೆಂಬ ಅರಿವಿದ್ದರೂ ಭಾವನೆಗಳನ್ನು ಹತ್ತಿಕ್ಕಲು ಅಸಾಧ್ಯವಾಗಿತ್ತು. ಏಕಮುಖ ಸಂಚಾರದಲ್ಲಿ ಚಲಿಸುತ್ತಿದ್ದ ಮನಸಿನ ವಾಹನಕ್ಕೆ ತಡೆಯನ್ನು ಹಾಕುವ ಪ್ರಯತ್ನದಲ್ಲಿ ಅವನು ವಿಫಲನಾಗಿದ್ದ. ಮಾನಸಿಕ ತುಮುಲವು ಹೆಚ್ಚಾಗಿ ಸಾಧಿಸಬೇಕಾದ ಗುರಿಯನ್ನೇ ಮರೆಯತೊಡಗಿದ್ದ. ಸುಪ್ತವಾಗಿ ಮನಸಿನಲ್ಲಿ ಏನೇನೋ ವಿಚಿತ್ರ ಬದಲಾವಣೆಗಳು ಆಗತೊಡಗಿದ್ದವು . ಅವಳೇ ಎದುರು ಬಂದು ಕುಳಿತಂತೆ, ಕಿವಿಯಲ್ಲಿ ಏನೇನೋ ಮಾತನಾಡಿದಂತೆ ಆಗತೊಡಗಿತ್ತು . ಈ ತರಹದ ಬದಲಾವಣೆಗಳು ಪ್ರಾಯಕ್ಕೆ ಬದ್ಧವಾದವುಗಳೇ

ಅಥವಾ ಮಾನಸಿಕ ಅಸ್ಥಿರತೆಯಿಂದ ಬಂದಿರುವವೆ ಎಂಬುದನ್ನು ಅವನಿಂದ ವಿಭಜಿಸಲು ಸಾಧ್ಯವಾಗಲಿಲ್ಲ

ವಿಷಯ ಹೇಗೋ ಹಾಸ್ಟೆಲಿನಲ್ಲಿದ್ದ ಹುಡುಗರಿಗೆ ಗೊತ್ತಾಯಿತು. ಕಾಲೆಳೆಯಲು ಕುಳಿತವರಿಗೆ ಇನ್ನೊಂದು ಅವಕಾಶ ಸಿಕ್ಕಿತ್ತು.

ಕೆಲವರು

““ಹೋಗಪ್ಪ ಮುರಳಿ ಪ್ರಪೋಸ್ ಮಾಡಿಬಿಡು” ಎಂದರೆ, ಇನ್ನೂ ಕೆಲವರು


“ಅವಳು ನಿನ್ನನ್ನೇ ನೋಡುತ್ತಿರುತ್ತಾಳೆ ಗುರು” ಎಂದು ಉರಿಯುವ ಬೆಂಕಿಗೆ ತುಪ್ಪ ಸುರವಿದ್ದರು. ಇವನಿಗೆ

ವೈದ್ಯಸಂಪದ

ಅವರು ಹೇಳಿದ್ದು ನಿಜ ಎನಿಸತೊಡಗಿತು. ಬರಬರುತ್ತ ಮಾನಸಿಕ ಹತೋಟಿಯನ್ನು ಕಳೆದುಕೊಳ್ಳತೊಡಗಿದ. ಅವಳದೇ ನೆನಪಿನಲ್ಲಿ ಕಾಲೇಜಿಗೂ ಬರದೆ ಬರೀ ಕೊನೆಯಲ್ಲಿ ಕುಳಿತುಕೊಳ್ಳುತ್ತಿದ್ದ. ಸಂಜೆಯಾದರೆ ಅವಳಿದ್ದ ಹಾಸ್ಟೆಲಿನ ಕಡೆಗೆ ಹೋಗಿ ಹಾಗೆಯೇ ನೋಡುತ್ತಾ ನಿಂತುಬಿಡುತ್ತಿದ್ದ. ಇವನ ವರ್ತನೆಯನ್ನು ಕಂಡು ಅವಳಿಗೂ ಭಯವಾಗಿತ್ತು. ಹೊರಗೆ ಬಂದು ಬುದ್ಧಿ ಹೇಳಬೇಕೆನ್ನುವ ಧೈರ್ಯ ಅವಳಲ್ಲಿ ಇರಲಿಲ್ಲ. ಕ್ರಮೇಣವಾಗಿ ಅವನ ಪರಿಸ್ಥಿತಿ ಹದಗೆಟ್ಟಿತೆ ಹೊರತು ಸುಧಾರಿಸಲಿಲ್ಲ . ಆ ಸಮಯದಲ್ಲಿ ಅವನಿಗೆ ಯಾರಾದರು ಬುದ್ಧಿ ಹೇಳುವವರು ಬೇಕಾಗಿದ್ದರು. ತಾನು ಅಂದುಕೊಂಡಿರುವದು ನಿಜ ಅಲ್ಲ ಎಂದು ತಿಳಿಸಿ ಹೇಳುವ ಸಹನಾ ಜೀವಿಯ ಅವಶ್ಯಕತೆಯಿತ್ತು. ಕಾಲೆಳೆಯುವ ಕಪಟಿಗಳಿಂದ ದೂರ ಉಳಿಯಬೇಕಾಗಿತ್ತು. ದುರದೃಷ್ಟವಶಾತ್ ಅದು ಒದಗಿ ಬರಲಿಲ್ಲ ಹೇಗೋ ವಿಷಯ ಅವನ ತಂದೆ ತಾಯಿಯರಿಗೆ ಗೊತ್ತಾಯಿತು. ಹಳ್ಳಿಯಿಂದ ಹುಬ್ಬಳ್ಳಿಗೆ ಬಂದಿಳಿದಿದ್ದರು. ಮಗನ ಪರಿಸ್ಥಿತಿಯನ್ನು ಕಂಡು ತಾಯಿ ಕಣ್ಣೀರು ಹಾಕಿದ್ದಳು. ಅವನು ಬುದ್ಧಿವಾದವನ್ನು ಕೇಳುವ ಮಟ್ಟವನ್ನು ಮೀರಿ ಹೋಗಿದ್ದಾನೆಂದು ಅವರಿಗೆ ಅನಿಸಿತು. ವೈದ್ಯರು ಅವನನ್ನು ಧಾರವಾಡದ ಮಾನಸಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದರು. ಅವನು ಮಾನಸಿಕ ಆಸ್ಪತ್ರೆಗೆ ದಾಖಲಾಗಿದ್ದ. ಎರಡು ತಿಂಗಳು ಅವನು ಮರಳಿ ಬರಲೇ ಇಲ್ಲ. ಕೆಲವು ದಿನ ಆಸ್ಪತ್ರೆಯಲಿದ್ದು ಇನ್ನೂ ಕೆಲ ಸಮಯ ಮನೆಯಲ್ಲಿದ್ದು, ಅದೊಂದು ದಿನ ಅವನು ಹಾಸ್ಟೆಲಿನಲ್ಲಿ ಪ್ರತ್ಯಕ್ಷನಾಗಿದ್ದ . ಅವನೊಬ್ಬ ಹೊಸ ಮುರಳಿಯಾಗಿದ್ದ . ಅದು ಹೇಗೋ ಅವನ ನಡೆ ನುಡಿ ಸಂಪೂರ್ಣ ಸಹಜವಾಗಿತ್ತು . ಎಲ್ಲರೊಡನೆಯೂ ನಗುತ್ತಾ ಮಾತನಾಡುತ್ತಿದ್ದ ಮತ್ತೆ ಕ್ಲಾಸ್ಸುಗಳಿಗೆ ಹಾಜರಾಗಿದ್ದ . ಅವಳ ಕಡೆಗೆ ಗಮನ ಕೊಡುವದನ್ನು ನಿಲ್ಲಿಸಿದ್ದ. ತನ್ನ ಪಾಡಿಗೆ ತಾನು ಓದುವದನ್ನು ಮುಂದುವರೆಸಿದ್ದ . ಒಂದು ಸಣ್ಣ ರೇಡಿಯೋ ತಂದಿದ್ದ , ತನಗೆ ಇಷ್ಟವಾದ ಹಾಡುಗಳನ್ನು ಕೇಳುತ್ತ ಸಮಯ ಕಳೆಯುತ್ತಿದ್ದ . ಆದರೆ ತಂದೆ ತಾಯಿಗಳಿಗೆ ಇವನೆಲ್ಲಿ ಮತ್ತೆ ಕೆಟ್ಟುಹೋಗುವನೆಂಬ ಭಯವಿತ್ತು . ಕಾಲೇಜು ಪ್ರಾಂಶುಪಾಲರನ್ನು ಭೇಟಿಯಾಗಿ ಅವನನ್ನು ಭೇರೆ ಕಾಲೇಜಿಗೆ ವರ್ಗಾಯಿಸುವಂತೆ ವಿನಂತಿ ಮಾಡಿಕೊಂಡಿದ್ದರು ಆದರೆ ಪ್ರಯೋಜನವಾಗಿರಲಿಲ್ಲ . ಅವರಲ್ಲಿ ಯಾವುದೇ ರಾಜಕೀಯ ವ್ಯಕ್ತಿಯ ಶಿಫಾರಸು ಪತ್ರ ಇರಲಿಲ್ಲ , ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮನಸು ಪ್ರಾಂಶುಪಾಲರಿಗೂ ಇರಲಿಲ್ಲ . ಅವನಿಗೆ ಹಾಸ್ಟೆಲಿನ ಪರಿಸರವನ್ನು ಬಿಟ್ಟು ಬೇರೆ ಕಡೆ ಇರಲು ವೈದ್ಯರು ಸಲಹೆ ಕೊಟ್ಟಿದ್ದರೂ ತಂದೆ ತಾಯಿಗಳಿಗೆ ಅದನ್ನು ಪೂರೈಸುವ ಶಕ್ತಿ ಇರಲಿಲ್ಲ . ಹೊರಗಡೆಯ ರೂಮ್ ಮತ್ತು ಊಟದ ವೆಚ್ಚ ದುಬಾರಿಯಾಗಿತ್ತು . ಮಗನಿಗೆ ಹೇಗೋ ಬುದ್ಧಿಯನ್ನು ಹೇಳಿ ಓದಿನ ಕಡೆ ಗಮನ ಕೊಡಲು ಸೂಚಿಸಿ ಹುಬ್ಬಳ್ಳಿಯನ್ನು ಬಿಟ್ಟಿದ್ದರು

ಸಹಪಾಠಿಗಳಿಂದ ಅವನಿಗೆ ಅಷ್ಟೊಂದು ಸಹಾಯ ಸಿಗಲಿಲ್ಲ . ಅವನ ಹೆಸರಿನ ಮುಂದೆ ಇನ್ನೊಂದು ಹೆಸರು ಸೇರಿತ್ತು – 'ಹುಚ್ಚ ' ಎಂದು . ಮುರಳಿ ಈಗ ಅವರಿಗೆಲ್ಲ ' ಹುಚ್ಚ ಮುರಳಿ ' ಆಗಿದ್ದ .

ಕೆಲವು ದಿನಗಳ ನಂತರ ಅವನ ಕೊಠಡಿಯ ಸಹಪಾಠಿಗಳು ಬೇರೆ ಕೊಠಡಿಗೆ ಸ್ಥಳಾಂತರಿಸಿದ್ದರು . ಅವರಿಗೆಲ್ಲ ಅವನ ಜೊತೆಗೆ ಇರಲು ಭಯವಾಗಿತ್ತು .



ಇನ್ನೂ ಕೆಲವರು ಅವನ ಜೊತೆಗೆ ಮಾತನಾಡುವದನ್ನೇ ನಿಲ್ಲಿಸಿ ಬಿಟ್ಟಿದ್ದರು . ನಿಧಾನವಾಗಿ ಅವನನ್ನು ಕುರಿತು ಗೇಲಿ ಮಾಡುವದು ಮರುಕಳಿಸಿತ್ತು . ಆವರಿಸಿದ ಪರಿಸರ ಅವನಿಗೆ ಮತ್ತೆ ಮಾನಸಿಕ ವೇದನೆಯನ್ನು ಕೊಡಲು ಪ್ರಾರಂಭಿಸಿತ್ತು . ಅವನ ಮನಸು ಮತ್ತೆ ಚಂಚಲವಾಗತೊಡಗಿತು

ಕೆಲವು ದಿನಗಳ ನಂತರ ಅವನಿಗೆ ಒಂದು ಪತ್ರ ಬಂದಿತ್ತು

ಕಳುಹಿಸಿದವರ ವಿಳಾಸ ಪಕ್ಕದ ಹುಡುಗಿಯರ ಹಾಸ್ಟೆಲಿನದಾಗಿತ್ತು . ಅವನಿಚ್ಛಿಸಿದ ಹುಡುಗಿಯ ಹೆಸರಿತ್ತು.

"ಈ ಎರಡು ತಿಂಗಳು ನಿನ್ನನ್ನು ಮಿಸ್ ಮಾಡಿದೆ ನಿನ್ನ ಜೊತೆಗೆ ಮಾತನಾಡಬೇಕೆನಿಸಿದೆ"ಎಂದು ಬರೆದಿತ್ತು

ಯಾರೋ ಪಡ್ಡೆ ಹುಡುಗರು ಮಜಾ ತೆಗೆದುಕೊಳ್ಳಲು ತಾವೇ ಪತ್ರಬರೆದು ಹುಡುಗಿಯ ಅಡ್ರೆಸ್ ಹಾಕಿದ್ದರು . ವಿಷಯ ಅರಿಯದ ಅವನು ನಿಜವೆಂದು ನಂಬಿದ್ದ , ಅವನ ಮನಸಿನಲ್ಲಿ ಮತ್ತೆ ಅವಳ ಬಗ್ಗೆ ಆಸೆ ಚಿಗುರತೊಡಗಿತು, ಹುಚ್ಚು ಹೊಳೆ ಹೃದಯದಲ್ಲಿ ಹರಿಯತೊಡಗಿತು . ಅದೊಂದು ದಿನ ಧೈರ್ಯ ಮಾಡಿ ಅವಳನ್ನು ಮಾತನಾಡಿಸುವ ಪ್ರಯತ್ನ ಮಾಡಿದ್ದ . ಇವನನ್ನು ಕಂಡು ಹೆದರಿಕೊಂಡು ಅವಳು ಇವನತ್ತ ನೋಡದೆಯೇ ಹಾಗೆ ಹೋಗಿಬಿಟ್ಟಿದ್ದಳು. ದಿನ ಕಳೆದಂತೆ ಮತ್ತೆ ಅವಳನ್ನು ನೋಡುವ ಚಪಲ ಮರುಕಳಿಸತೊಡಗಿತು . ಮತ್ತೆ ಕಿವಿಗಳಲ್ಲಿ ಅವಳ ಧ್ವನಿ ಗುಣ ಗುಣಿಸತೊಡಗಿತು . ಸಂಜೆಯಾದರೆ ಮತ್ತೆ ಅವಳ ಹಾಸ್ಟೆಲಿನ ಮುಂದೆ ಸುತ್ತಾಡಲು ಪ್ರಾರಂಭಿಸಿದ . ದಿನ ಕಳೆದಂತೆ ಅವನ ಮಾನಸಿಕ ಸಮತೋಲನ ಸಂಪೂರ್ಣವಾಗಿ ಕೆಟ್ಟು ಹೋಯಿತು . ಎರಡು ದಿನಗಳಿಂದ ಅವನು ಹಾಸ್ಟೆಲಿನಲ್ಲಿ ಕಾಣದಾಗಿದ್ದನು . ಅವನ ಕೊಠಡಿಯ ಬಾಗಿಲು ತೆಗೆದೇ ಇರಲಿಲ್ಲ . ಭಯವಾಗಿ ಕೆಲವು ಹುಡುಗರು ಹಾಸ್ಟೆಲಿನ ಮೇಲ್ವಿಚಾರಕರಿಗೆ ತಿಳಿಸಿದ್ದರು

ಹೇಗೋ ಕಷ್ಟಪಟ್ಟು ಕೊಠಡಿಯ ಬಾಗಿಲನ್ನು ತೆರೆದಿದ್ದರು . ಅವನು ಒಂದು ಮೂಲೆಯಲ್ಲಿ ಮುದುಡಿ ಕುಳಿತಿದ್ದ . ಸುಮ್ಮನೆ ಎಲ್ಲರನ್ನು ನೋಡುತ್ತಿದ್ದನೇ ಹೊರತು ಯಾರ ಜೊತೆಗೂ ಮಾತನಾಡಲಿಲ್ಲ . ಅಷ್ಟರಲ್ಲಿಯೇ ಯಾರೋ ಆಂಬುಲೆನ್ಸ್ ಕರೆಸಿದ್ದರು . ಮೇಲ್ವಿಚಾಲಕರು ಅವನನ್ನು ಕರೆದುಕೊಂಡು ಕೆಳಗೆ ಬಂದರು . ಅವನ ಮನ ಒಲಿಸಿ ಆಂಬ್ಯುಲೆನ್ಸ್ನಲ್ಲಿ ಕೂರಿಸಿದ್ದರು . ಕೊಲೆ ಮಾಡಿದ ಖೈದಿಯನ್ನು ಪೊಲೀಸ್ ಗಾಡಿಯಲ್ಲಿ ಕೂರಿಸಿದಂತಿತ್ತು ಆ ನೋಟ . ಅವನನ್ನು ಧಾರವಾಡದ ಮಾನಸಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು . ಅವನು ಮತ್ತೆ ಮರಳಿ ಕಾಲೇಜಿಗೆ ಬರಲೇ ಇಲ್ಲ . ಪಡ್ಡೆ ಹುಡುಗರ ಗುಂಪು ಇನ್ನೊಬ್ಬ ಮುರಳಿಗೆ ಕಾಯುತ್ತಿದ್ದರು .

ಆ ಹೊತ್ತು ನೋಡಿದ ಅವನನ್ನು ಮತ್ತೆ ನೋಡಿದ್ದು ಈ ರಾತ್ರಿಯಲ್ಲಿ .!! ಹಾಗೆ ನನ್ನನ್ನು ನೋಡುತ್ತಾ ನಿಂತಿದ್ದ ಅವನನ್ನು ಹೋಗಿ ಮಾತನಾಡಿಸಬೇಕೆನಿಸಿತು ಅಷ್ಟರಲ್ಲಿಯೇ ಬಸ್ಸಿನ ಕಂಡಕ್ಟರ್ ಕೂಗುತ್ತಿದ್ದ ಎಲ್ಲ ಮೇಲೆ ಹತ್ತಿ ಬಸ್ಸು ಹೊರಡತಾಯಿದೆಯೆಂದು. ಬಸ್ಸು ಚಲಿಸತೊಡಗಿತು ಅವನು ಹಾಗೆಯೇ ಕತ್ತಲಿನಲ್ಲಿ ಮಾಯವಾದ . ನಿದ್ದೆ ಬಾರದ ಮನಸಿನಲ್ಲಿ ಏನೇನೋ ವಿಚಾರಗಳು ಸುಳಿದಾಡತೊಡಗಿದ್ದವು

ಸಧ್ಯಕ್ಕೆ ನಾನಿರುವ ದೇಶದಲ್ಲಿನ (ಇಂಗ್ಲೆಂಡ್) ಮೆಡಿಕಲ್ ಕಾಲೇಜುಗಳ ವ್ಯವಸ್ಥೆಯನ್ನು ಕಂಡಿದ್ದೆ. ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಎಷ್ಟೊಂದು ಸಂಘಟನೆಗಳು ಇರುತ್ತವೆ. ವಿದ್ಯಾರ್ಥಿ ಸಹಾಯಕ್ಕೆ ಅಂತೇನೆ ಒಬ್ಬರು ನೇಮಿತ ವೈದ್ಯರಿರುತ್ತಾರೆ. ಇಂಥ ಪದ್ಧತಿ ನಮ್ಮ ದೇಶದಲ್ಲೂ ಇದ್ದಿದ್ದರೆ ಮುರಳಿಯಂತವರಿಗೆ ಇಂಥ ಸ್ಥಿತಿ ಬರುತ್ತಿದ್ದಿಲ್ಲವೇನೋ ಎಂದು ಎನಿಸಿತು . ವೈದ್ಯಕೀಯ ಶಿಕ್ಷಣ ಮಾನಸಿಕ ಒತ್ತಡದಿಂದ ಕೂಡಿದ್ದು , ಕೆಲವರಿಗೆ ಸಹಾಯದ ಅವಶ್ಯಕತೆ ಇದ್ದೆ ಇರುತ್ತೆ

ಅವನ ಈ ಪರಿಸ್ಥಿಗೆ ಏನು ಕಾರಣವೆಂದು ಉತ್ತರ ಹುಡುಕಲು ಪ್ರಯತ್ನಿಸಿದೆ . ಅವನ ಮುಗ್ಧ ಮನಸ್ತಿತಿಯೇ ? ಹಾಸ್ಟೆಲಿನ ಪರಿಸರವೆ ? ಕಾಲೆಳಿಯುತ್ತಿದ್ದ ಪಡ್ಡೆ ಹುಡುಗರೆ? ಕಾಲೇಜಿನ ವ್ಯವಸ್ಥೆಯೇ ? ಸಹಾಯ ಹಸ್ತ ಚಾಚದ ಪ್ರಾಂಶುಪಾಲರೇ ? ಅಸಾಹಾಯಕ ಪೋಷಕರೆ ?


ಇಲ್ಲ ; ನನಗೆ ನಿಖರ ಉತ್ತರ ದೊರೆಯಲೇ ಇಲ್ಲ

ನೀವೇನು ಎನ್ನುತ್ತೀರಿ ?

ಅಷ್ಟರಲ್ಲಿಯೇ ಕಂಡಕ್ಟರ್ ಕೂಗುತ್ತಿದ್ದ ಹುಬ್ಬಳ್ಳಿಯ 'ಕೊನೆಯ ಸ್ಟಾಪ್' ಎಂದು.



ಮಾರ್ಚ್ | ಏಪ್ರಿಲ್, 2022



ಕೃತಿ ಪರಿಚಯ


# ಗಾಳಿ ಪಳಗಿಸಿದ ಬಾಲಕ

**ಡಾ ಅನುಪಮಾ ವೈ. ಜೆ**
ನೆಫ್ರಾಲಜಿಸ್ಟ್, ಮೂತ್ರಪಿಂಡಶಾಸ್ತ್ರ ವಿಭಾಗ, ನಂಜಪ್ಪ ಆಸ್ಪತ್ರೆ,
ಶಿವಮೊಗ್ಗ–577201, 9686213290



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ಮನುಷ್ಯನಿಗೆ ತೀವ್ರ ಸಂಕಷ್ಟ ಬಂದೊದಗಿದಾಗ ಅದರ ಭಾರದ ಅಡಿಯಲ್ಲಿ ನಲುಗುವುದೇ ಹೆಚ್ಚು. ಆದರೆ ಅತ್ಯಂತ ವಿಪತ್ತಿನ ಸಂದರ್ಭ ಎದುರಾದಾಗಲೂ ಕೂಡಾ ಧೃತಿಗೆಡದೆ ಗುರಿಯತ್ತ ದೃಷ್ಟಿ ನೆಟ್ಟು ಛಲದಿಂದ ಕಾರ್ಯ ಕೈಗೊಂಡಾಗ ಅಸಾಮಾನ್ಯವಾದ ಜಯ ದೊರಕುವುದನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿರುವ ಪುಸ್ತಕ ' ಗಾಳಿ ಪಳಗಿಸಿದ ಬಾಲಕ'. ವಿಲಿಯಮ್ ಕಾಂಕ್ವಾಂಬಾ ಎಂಬ 14 ವರ್ಷದ ಆಫ್ರಿಕಾದ ಬಾಲಕ ತನ್ನ ದೇಶಕ್ಕೆ ಬಂದೆರಗಿದ ಭೀಕರ ಕ್ಷಾಮದ ನಡುವೆಯೂ ಗಾಳಿಯಂತ್ರವನ್ನು ಸ್ಥಾಪಿಸಿ ತನ್ನ ಮನೆಗೆ ಮತ್ತು ಊರಿಗೆ ವಿದ್ಯುತ್ ಒದಗಿಸುವ ಕನಸನ್ನು ನನಸು ಮಾಡಿಕೊಂಡ ಕಥೆ ಇದು. ಈ ಆತ್ಮ ಕಥನವನ್ನು ಕಾಂಕ್ವಾಂಬಾ , ಇಂಗ್ಲಿಷ್ ಮೂಲದಲ್ಲಿ 'The boy who harnessed the wind' ಎಂಬ ಹೆಸರಿನಲ್ಲಿ ಬ್ರಿಯಾನ್ ಮೀಲರ್ ಅವರ ಜತೆಗೂಡಿ ಬರೆದಿದ್ದಾರೆ. ಇದರ ಕನ್ನಡ ಅನುವಾದವನ್ನು ಶ್ರೀಮತಿ ಕರುಣಾ ಬಿ ಎಸ್ ಅವರು ಅತ್ಯಂತ ಜತನದಿಂದ, ಪ್ರೀತಿಯಿಂದ ನಮ್ಮಲ್ಲಿಯ ಯುವಜನತೆಗೆ ಇದು ಸ್ಫೂರ್ತಿಯ ಬೆಳಕಾಗಲಿ ಎಂಬ ಸದಾಶಯದಿಂದ 'ಛಂದ ಪುಸ್ತಕ' ದ ಆಶ್ರಯದಲ್ಲಿ ಹೊರತಂದಿದ್ದಾರೆ.




ಆಫ್ರಿಕಾ ಖಂಡದಲ್ಲಿ ಒಂದು ಸಣ್ಣ ದೇಶ ಮಾಲಾವಿ ಅಲ್ಲಿಯ ಕಸುಂಗು ಪಟ್ಟಣದ ಬಳಿ ಹಳ್ಳಿಯೊಂದರಲ್ಲಿ ಬಡ ರೈತಾಪಿ ಕುಟುಂಬದಲ್ಲಿ ವಿಲಿಯಮ್ ತನ್ನ ತಂದೆ, ತಾಯಿ, ಮತ್ತು ಐದು ಜನ ಅಕ್ಕ ತಂಗಿಯರೊಡನೆ ಜೀವಿಸುತ್ತಿರುತ್ತಾನೆ. ಮೆಕ್ಕೆ ಜೋಳ ಮತ್ತು ತಂಬಾಕನ್ನು ಬೆಳೆಸಿ ಜೀವನ ನಿರ್ವಹಿಸುತ್ತಿದ್ದ. ಅವನ ಅಪ್ಪ ಅನುಕೂಲಸ್ಥರೇನೂ ಅಲ್ಲದಿದ್ದರೂ ಮಗನನ್ನು ಶಾಲೆಗೆ ಕಳುಹಿಸುತ್ತಿದ್ದರು. ಬಾಲ್ಯದಲ್ಲೇ ಯಂತ್ರಗಳ ಕಾರ್ಯ ವೈಖರಿ ಕುರಿತು ಕುತೂಹಲ ಬೆಳೆಸಿಕೊಂಡಿದ್ದ ವಿಲಿಯಮ್ ಸೈಕಲ್ ಡೈನಮೋ ರೇಡಿಯೋ ಮೊದಲಾದವುಗಳನ್ನು ಬಿಚ್ಚಿ ಪರಿಶೀಲಿಸಿ ಅವುಗಳನ್ನು ಜೋಡಿಸುವುದು ರಿಪೇರಿ ಮಾಡುವುದು ಮೊದಲಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ.

ಶಾಲಾ ನಂತರ ಬಿಡುವಿನ ಸಮಯದಲ್ಲಿ ಅಪ್ಪನಿಗೆ ಹೊಲದಲ್ಲಿ ನೆರವಾಗುತ್ತಿದ್ದರೂ ವಿಜ್ಞಾನಿಯಾಗಬೇಕೆಂದು ಕನಸು ಕಾಣುತ್ತಿದ್ದ. ಇಂತಹ ಸಮಯದಲ್ಲಿ ಮಾಲಾವಿಯಲ್ಲಿ ಮಳೆ ವೈಫಲ್ಯದಿಂದ ಭೀಕರ ಕ್ಷಾಮ ತಲೆದೋರಿತು. ಬೆಳೆಗಳು ವಿಫಲಗೊಂಡು , ಹಳ್ಳಿಗಳಲ್ಲಿ ಜನರು ಹಸಿವಿನಿಂದ ನರಳಿ ಕೆಲಸಕ್ಕಾಗಿ ಊರೂರು ಅಲೆಯುವುದು ಸಾಮಾನ್ಯವಾಯಿತು. ಒಂದು ಹೊತ್ತಿನ ಊಟಕ್ಕೂ ಪರದಾಡುವಂತಾದಾಗ ಅನಿವಾರ್ಯವಾಗಿ ವಿಲಿಯಮ್ ಶಾಲೆ ಬಿಡಬೇಕಾಯಿತು. ಹೊಟ್ಟೆಯಲ್ಲಿ ಹಸಿವಿನ ಹಾಹಾಕಾರವಿದ್ದರೂ ಅದಕ್ಕಿಂತಲೂ ಅಧಿಕವಾದ ಜ್ಞಾನದ ಹಸಿವು ವಿಲಿಯಮ್‌ಗೆ. ತನ್ನ ಊರಿನಲ್ಲಿದ್ದ ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ಓದುತ್ತಿದ್ದ. ಇಂತಹ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಿಕ್ಕ 'Using energy' ಪುಸ್ತಕದಲ್ಲಿ ಅವನಿಗೆ ಗಾಳಿಯಂತ್ರದಿಂದ ಶಕ್ತಿ ಉತ್ಪಾದಿಸಬಹುದೆಂಬ ಮಾಹಿತಿ ದೊರೆಯಿತು. ತಾನು ಒಂದು ಗಾಳಿಯಂತ್ರ ನಿರ್ಮಿಸಿದರೆ ವಿದ್ಯುತ್ ಉತ್ಪಾದಿಸಿ ಬಾವಿ ನೀರನ್ನು ಪಂಪ್ ಮಾಡಿ ಕೃಷಿ ಭೂಮಿಗೆ ಹಾಯಿಸಿ ಹೆಚ್ಚಿನ ಬೆಳೆ ಬೆಳೆಯಲು ಸಹಾಯಕವಾಗುವುದೆಂದು ಆತನಿಗೆ ತೋರಿತು. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾದ ಅವನು, ಅದಕ್ಕೆ ಬೇಕಾದ ಪರಿಕರಗಳೆಲ್ಲವನ್ನು ಒಟ್ಟು ಮಾಡುತ್ತಾನೆ. ಗುಜರಿಯ ಅಂಗಡಿಗಳಲ್ಲಿ ಹುಡುಕಿ ಸಿಕ್ಕ ವಸ್ತುಗಳನ್ನು ಜೋಡಿಸಿ ಬಹಳ ಕಷ್ಟಪಟ್ಟು ಗಾಳಿಯಂತ್ರ ನಿರ್ಮಿಸುತ್ತಾನೆ. ಊರಿನ ಜನರೆಲ್ಲಾ ಅವನನ್ನು ಹುಚ್ಚನೆಂದು ಕರೆಯ ತೊಡಗಿದರೂ ಬಿಡದೆ ತನ್ನ ಕಾರ್ಯ ಸಾಧಿಸುತ್ತಾನೆ. ಅವನ ಯಶಸ್ಸಿನ ವಿಷಯ ಅವನ ಹಿತೈಷಿಗಳ ಮೂಲಕ ಸುದ್ದಿ ಮಾಧ್ಯಮಗಳಿಗೆ ತಲುಪುತ್ತದೆ. ಮುಂದೆ ಅವನು ಪ್ರಸಿದ್ಧ TED talk ನಲ್ಲೂ ಭಾಗವಹಿಸಿ ಜನಮನ್ನಣೆಗೆ ಪಾತ್ರನಾಗುತ್ತಾನೆ. ಅವನು ಅಲ್ಲಿ ಹೇಳಿದ್ದಿಷ್ಟೇ 'I try, I made it –ನಾನು ಪ್ರಯತ್ನಿಸಿದೆ. ಯಶಸ್ವಿಯಾದೆ'–ಅದು ಆ ಸಮಾವೇಶದ highlight ಆಗಿ ಜನರ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತದೆ. ಅವನಿಗೆ ಓದನ್ನು ಮುಂದುವರೆಸಲು ಅನೇಕರು ಸಹಾಯ ಮಾಡುತ್ತಾರೆ. ಅಮೇರಿಕದಲ್ಲಿ ಉನ್ನತ ಶಿಕ್ಷಣವೂ ದೊರಕಿ, ನಂತರದ ದಿನಗಳಲ್ಲಿ ತನ್ನವರ ಅಭಿವೃದ್ಧಿಗೆ ಕಾರಣನಾಗುತ್ತಾನೆ.

ಗಾಳಿ ಪಳಗಿಸಿದ ಬಾಲಕ ಒಂದು ಹುಡುಗನ ಯಶೋಗಾಥೆ ಅಷ್ಟೇ ಅಲ್ಲ. ಈ ಪುಸ್ತಕದಲ್ಲಿ ಹುಡುಗನ ಕಥೆಯ ಮುಖಾಂತರ ಆಫ್ರಿಕಾದ ದೇಶಗಳ ಸಾಮಾಜಿಕ ಹಾಗೂ ರಾಜಕೀಯ ವಿಪ್ಲವಗಳ ಪರಿಚಯವೂ ನಮಗಾಗುತ್ತದೆ. ಅಜ್ಞಾನ ಮೌಢ್ಯಗಳಿಂದಾಗಿ ಜನರು ಮಂತ್ರ–ತಂತ್ರಗಳಿಗೆ ಮೊರೆ ಹೋಗುವುದನ್ನು ಮತ್ತು ಅದರಿಂದಾಗಿ ಅವರಿಗಾಗುವ ಮೋಸದ ಚಿತ್ರಣವಿದೆ. ಬರಗಾಲದಿಂದಾಗಿ ಜನರು ಪಡುವ ಪಾಡು, ದವಸಧಾನ್ಯಗಳಿಗಾಗಿ ಪರದಾಟ, ಜನರು ಗುಳೇ ಹೋಗುವುದು, ಇವುಗಳ ವಿಸ್ತೃತ ವರ್ಣನೆಯಿದ್ದು ಮನಕಲಕುತ್ತದೆ. ಒಂದು ಹೊತ್ತಿನ ಊಟಕ್ಕೂ ಇಲ್ಲದೆ ಜನರು ಅನಾರೋಗ್ಯ ಮತ್ತು ಅಪೌಷ್ಟಿಕತೆಗೆ ಗುರಿಯಾಗುವುದು ಸರ್ವೇ ಸಾಮಾನ್ಯವಾಗಿದ್ದು, ವಿಲಿಯಮ್‌ನ ಪರಿಚಯದವರು ಅನೇಕರು ಮರಣಹೊಂದಿದ್ದನ್ನು ಆತ ನೋಡಿರುತ್ತಾನೆ. ಅಸಮರ್ಥ ರಾಜಕೀಯ ನಾಯಕತ್ವದಿಂದಾಗಿ ದೇಶದಲ್ಲಿ ಬರಗಾಲ ಹೇಗೆ ತಾಂಡವವಾಡುವಂತಾಯಿತು, ಆಫ್ರಿಕಾದ ದೇಶಗಳು ಹಿಂದುಳಿದಿರುವುದಕ್ಕೆ ಕಾರಣ ಏನು ಎಂದು ಸೂಕ್ಷ್ಮವಾಗಿ ತಿಳಿಯುತ್ತದೆ. ಕಾಲರಾ ಮಲೇರಿಯಾ ಮತ್ತು ಏಡ್ಸ್ ಆಫ್ರಿಕಾದಲ್ಲಿ ಬೇರೂರಲು ಜನರ ಅನಕ್ಷರತೆ ಮತ್ತು ಅಜ್ಞಾನ ಹೇಗೆ ಮೂಲವಾಗುತ್ತದೆ ಎಂದೂ ಈ ಪುಸ್ತಕದಲ್ಲಿ ಹೇಳಲಾಗಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ದೇಶವಾದ ಮಾಲಾವಿಯ ವಿದ್ಯಮಾನಗಳಿಗೂ, ನಮ್ಮ ದೇಶದ ಕೆಲವೆಡೆ ಕಂಡು ಬರುವ ಪರಿಸ್ಥಿತಿಗೂ ಬಹಳಷ್ಟು ಸಾಮ್ಯತೆ ನಮಗೆ ಕಾಣಿಸುತ್ತದೆ. ಹಾಗಾಗಿಯೇ ಇದು ಎಲ್ಲೋ ನಡೆದ ಘಟನೆಯೆಂದೆನಿಸದೆ, ನಮ್ಮಲ್ಲೇ, ನಮ್ಮ ನೆಲದಲ್ಲೇ ಆಗಿದೆ ಎಂದು ಎನಿಸುವಷ್ಟು ಹತ್ತಿರವೆನಿಸುತ್ತದೆ. ಪುಸ್ತಕ ಓದುತ್ತಾ ಹೋದಂತೆ ನಮಗೆ ವಿಲಿಯಮ್ ಮತ್ತು ಆತನ ಗೆಳೆಯರಾದ ಜೆಫ್ರಿ ಮತ್ತು ಗಿಲ್ಬರ್ಟ್ ಅವರ ಸಂಭಾಷಣೆಗಳು ಆಪ್ತವೆನಿಸುತ್ತದೆ. ಅವರಿಬ್ಬರ ಸಹಯೋಗದಿಂದಾಗಿ ವಿಲಿಯಮ್ ಯಶಸ್ವಿಯಾದ ಬಗ್ಗೆ ಮತ್ತು ಅವನ ಪರಿಶ್ರಮದಿಂದಾಗಿ ತನ್ನ ಜನರ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಿದ ಬಗ್ಗೆ ಹೆಮ್ಮೆಯೂ ಆಗುತ್ತದೆ. ಮನುಷ್ಯ ಮನಸ್ಸು ಮಾಡಿದರೆ ಎಂತಹ ವಿಪತ್ತನ್ನೂ ಗೆಲ್ಲಬಲ್ಲ, ಏನನ್ನೂ ಸಾಧಿಸಬಲ್ಲ ಎಂಬ ಸತ್ಯದ ಅರಿವು ನಮಗೆ ಮೂಡಿಸುವಲ್ಲಿ ಈ ಪುಸ್ತಕ ಯಶಸ್ವಿಯಾಗುತ್ತದೆ. ○



### 2021 ರಲ್ಲಿ ಪ್ರಕಟವಾದ ವೈದ್ಯ ಬರಹಗಾರರ ಕೃತಿಗಳು

**ಡಾ ಅರವಿಂದ ಪಟೇಲ**
ಕೃತಿ – ದಿ ರೇಲ್ವೆ ಚಿಲ್ಡ್ರನ್
ಮೂಲ – ಎಡಿತ್ ನೆಸ್ಬಿಟ್
ಅಭಿನವ ಪ್ರಕಾಶನ, ಬೆಂಗಳೂರು, ಬೆಲೆ 200

**ಡಾ ಶಾಂತಲ**
ಕೃತಿ – 3019 AD,
ಪ್ರಕಾಶನ – ಮೈ ಲಾಂಗ್
ಪೇಪರ್ ಬ್ಯಾಕ್, ಈ ಬುಕ್, ಆಡಿಯೋ ಬುಕ್
http://mylang.in, Mylang App

**ಡಾ ಕೆ ಬಿ ಸೂರ್ಯಕುಮಾರ್**
ಕೃತಿ – ವೈದ್ಯ ಕಂಡ ವಿಸ್ಮಯ
(ವಿಭಿನ್ನ ವಿಶ್ವದ ಇಣುಕು ನೋಟ)

**ಡಾ ಪವಿತ್ರ ಕೆ ಎಸ್**
ಕೃತಿ – ವಿಹಾರಿ ಮನೋಹಾರಿ
(ಕಲೆ ಸಾಹಿತ್ಯ ಜೀವನಕ್ಕೆ ಸಂಬಂಧಿಸಿದ ಸುಲಲಿತ ಪ್ರಬಂಧ ಮಾಲೆ)
ಕೃತಿ – ನೃತ್ಯ ಸಾಂಗತ್ಯ
(ನೃತ್ಯ ಕಲೆಯ ಕುರಿತು ಅಂಕಣ ಬರಹ)
ಕೃತಿ – ಚಿತ್ತ ಸಮುದ್ರ
(ಮಾನಸಿಕ ಆರೋಗ್ಯ ಕುರಿತು ಲೇಖನ ಮಾಲೆ)
ಕೃತಿ – ಹೆಣ್ಣು ಹೆಜ್ಜೆ
(ಮಹಿಳಾ ಮನಸ್ಸಿನ ಮಂಥನ, ಅಂಕಣ ಬರಹ)

**ಡಾ ಶುಭ್ರತ ಕೆ ಎಸ್**
ಕೃತಿ – ಆ ಕ್ಷಣ...ಗೆಲ್ಲೋಣ (ಮುಳುಗದಿರಲಿ ಬದುಕ ಹಾಯಿದೋಣಿ)(ಆತ್ಮಹತ್ಯೆ ತಡೆ ಕುರಿತು ವಿದ್ಯಾರ್ಥಿಗಳ ಲೇಖನಗಳ ಸಂಗ್ರಹ) ಐ ಎಂ ಎ ಕನ್ನಡ ವೈದ್ಯ ಬರಹಗಾರರ ಬಳಗ ಮತ್ತು ಕ್ಷೇಮ ಟ್ರಸ್ಟ ಶಿವಮೊಗ್ಗ

**ಡಾ ಸಂಜೀವ ಕುಲಕರ್ಣಿ**
ಕೃತಿ – ನೂರೊಂದು ರೂಮಿ ಹನಿಜೇನು
ಸೂಫಿ ದಾರ್ಶನಿಕ ರೂಮಿಯ ಕಾವ್ಯದ ತುಣುಕುಗಳ ಅನುವಾದ
ಪ್ರಕಾಶನ – ಸ್ವಯಂದೀಪ ಝೆನ್ ಕೇಂದ್ರ, ಧಾರವಾಡ

**ಡಾ ಭಾಸ್ಕರ ಆಚಾರ್ಯ**
ಕೃತಿ – ದಾರಿ ಕಾಣದಾಗಿದೆ (ಕಾದಂಬರಿ)
ಎನ್ ಆರ್ ಎ ಎಮ್ ಎಚ್ ಪ್ರಕಾಶನ

**ಡಾ ಸಂಜಯ್ ಎಚ್. ಆರ್.**
ಕೃತಿ – ಹಾರುವ ನರಿ ಮತ್ತು ಇತರೆ ಕಥೆಗಳು
ಕಾವೇರಿ ಪ್ರಕಾಶನ, ಮೈಸೂರು, ಬೆಲೆ 180

**ಡಾ ವೀಣಾ ಎನ್ ಸುಳ್ಯ**
ಕೃತಿ – ಭಾವಾರ್ಣವ (ಕವನ ಸಂಕಲನ)
ಕೃತಿ – ಸ್ತ್ರೀ ಸ್ವಾಸ್ಥ್ಯ (ಸ್ತ್ರೀ ಆರೋಗ್ಯ ಕುರಿತು ಲೇಖನಗಳು)

**ಡಾ ಕರವೀರಪ್ರಭು ಕ್ಯಾಲಕೊಂಡ**
ಕೃತಿ – ಮಿಸ್ಸಿಂಗ್ ವುಮೆನ್
ಸಿವಿಜಿ ಪ್ರಕಾಶನ
ಕೃತಿ – ಅಜ್ಜಗೆ ಬಂದಿವೆ ಹಲ್ಲು
(ಮಕ್ಕಳ ಕವನ ಸಂಕಲನ)
ಕೃತಿ – ಅಕ್ಷರ ಮಂದಿರ ಪ್ರಕಾಶನ, ಬೆಂಗಳೂರು
ಆರೋಗ್ಯ ಆರೈಕೆ, ಎನ್ ಕೆ ಎಸ್ ಪ್ರಕಾಶನ, ಮೈಸೂರು

**ಡಾ ಸುರೇಶ ಸಗರದ**
ಕೃತಿ – ಹೃದಯ – ಅರಿವು ಮತ್ತು ಆರೋಗ್ಯ
ಸಪ್ನಾ ಬುಕ್ ಹೌಸ್, ಬೆಂಗಳೂರ ○



**ಡಾ॥ ಕೆ.ಎಸ್. ಪವಿತ್ರ**
ಮನೋವೈದ್ಯೆ ಮತ್ತು ಲೇಖಕಿ,
ಶಿವಮೊಗ್ಗ

ಕಾಯಿಲೆ–ಚಿಕಿತ್ಸೆ

# ನಮ್ಮ ಮಿದುಳು–ಮನಸ್ಸುಗಳ ಒಳಗೆ ಬೇರೆಯವರ ದನಿಗಳು!!



**ಡಾ॥ ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು


"ಡಾಕ್ಟ್ರೇ, ಇವನು ಇತ್ತೀಚೆಗೆ ತನ್ನ ಪಾಡಿಗೆ ತಾನೇ ಮಾತಾಡ್ತಾನೆ. ಗೋಡೆಯ ಹತ್ತಿರ ಹೋಗಿ ಕಿವಿಕೊಟ್ಟು ಆಲಿಸ್ತಾನೆ. ಯಾರೋ ಹಿಂದೆ ಬಂದು ಮಾತಾಡಿದ್ರೇನೋ ಅನ್ನೋ ಹಾಗೆ ಹಿಂದೆ ನೋಡ್ತಾನೆ. ಅವನು ಮೊದಲು ಮೊದಲು ಹೀಗೆ ಮಾಡಿದಾಗ ನಾವು ನಮಗೂ ಏನಾದ್ರೂ ಕೇಳಿಸಬಹುದು ಅಂತ ನೋಡಿದ್ವಿ. ಯಾರೂ ಇಲ್ಲ, ಯಾರ ಮಾತೂ ಕೇಳಿಸ್ತಾ ಇಲ್ಲ. ಆದ್ರೂ ಇವನು ಯಾರೋ ಮಾತಾಡಿದ ಹಾಗೆ ಕೇಳಿಸ್ತು ಅಂತಾನೆ. ಒಂದು ಮೈಲಿ ದೂರವಿರುವ ನಮ್ಮ ಸಂಬಂಧಿಕರ ಮನೆಯಲ್ಲಾಡುವ ಮಾತುಗಳು ತನಗೆ ಕೇಳಿಸತ್ತೆ ಅಂತಾನೆ. ಅದಂತೂ ಹೇಗೆ ಸಾಧ್ಯ ಡಾಕ್ಟ್ರೇ? ಅದಕ್ಕೇ ಮೊದಲು ಮಾಟ–ಮಂತ್ರ ಏನೋ ಮಾಡಿಸಿರಬಹುದು, ಅಥವಾ ಯಾವುದಾದರೂ ಅತೃಪ್ತ ಆತ್ಮ ಇವನಲ್ಲಿ ಹೊಕ್ಕಿರಬಹುದು ಅಂತ ಸಂಶಯ ಬಂತು. ಹೋಗಿ ದೇವರ ದೋಷ ಎಲ್ಲಾ ಪರಿಹಾರ ಮಾಡಿಸಿದ್ವಿ. ಕಡಿಮೆಯಾಗ್ತಾ ಇಲ್ಲ. ಅದಕ್ಕೇ ಬಂದ್ವಿ" ಹೇಗೆ ಡಾಕ್ಟ್ರೇ ಬೇರೆಯವರ ದನಿಗಳು ನಮಗೆ ಕೇಳದೆ ಇವನಿಗೆ ಮಾತ್ರ ಕೇಳಿಸತ್ತೆ. ಅಷ್ಟೇ ಅಲ್ಲ ಅವರು ಮಾತಾಡದಿದ್ರೂ ಇವನಿಗೆ ಅದು ಕೇಳಿಸೋದು?! ".

'ಸ್ಕಿಜೋಫ್ರಿನಿಯಾದಿಂದ' ನರಳುವ ವ್ಯಕ್ತಿಗಳು ಸಾಮಾನ್ಯವಾಗಿ ಮನೋವೈದ್ಯರ ಬಳಿಗೆ ಬರುವಾಗ ಅವರ ಆತ್ಮೀಯರನ್ನು, ಕುಟುಂಬದವರನ್ನು ಕಾಡುವ ಗೊಂದಲ ಇದು. ಬೆಚ್ಚಿ ಬೀಳಿಸುವಂತಹ ಹೆಸರಿದ್ದರೂ, 'ಸ್ಕಿಜೋಫ್ರಿನಿಯಾ' ಪ್ರಾಣಾಪಾಯ ತರುವ ಕಾಯಿಲೆಯಲ್ಲ. ಚಿಕಿತ್ಸೆ ಸರಿಯಾಗಿ ಪಡೆದವರಲ್ಲಂತೂ ಸ್ಕಿಜೋಫ್ರಿನಿಯಾ ಇಂದು ಸಂಪೂರ್ಣ ನಿಯಂತ್ರಣಕ್ಕೆ ಬರುವ ಕಾಯಿಲೆಯಾಗಿ ಬದಲಾಗಿದೆ. ಆದರೆ ಸ್ಕಿಜೋಫ್ರಿನಿಯಾದ ಲಕ್ಷಣಗಳು ಸುಲಭವಾಗಿ ಅರ್ಥವಾಗುವಂತಹವಲ್ಲ. ವಿಚಿತ್ರ ಎನಿಸುವಂತಹವು. ಈ ವಿಚಿತ್ರ ಎನಿಸುವ ಲಕ್ಷಣಗಳಲ್ಲಿ ಪ್ರಮುಖವಾದದ್ದು ಯಾರೂ ಇರದೆಯೂ, ಯಾರೂ ಮಾತನಾಡದೆಯೂ, ಯಾರೋ ಮಾತನಾಡಿದ ರೀತಿ ಭಾಸವಾಗುವುದು. ಕೆಲವೊಮ್ಮೆ ಈ ಧ್ವನಿಗಳು ಸ್ಪಷ್ಟ. ಪಕ್ಕದಲ್ಲೇ ನಿಂತು ಮಾತನಾಡಿದಷ್ಟೇ ನಿಚ್ಚಳ. ಮನಸ್ಸಿನಲ್ಲಿಯೇ ಕಲ್ಪನೆ ಮಾಡಿ ನೋಡಿ. ಯಾರೂ ಇಲ್ಲದೆ ಮಾತನಾಡಿದ ರೀತಿ ಕೇಳಿದರೆ ನಮಗೆ ಏನನ್ನಿಸುತ್ತದೆ? ಭಯವಾಗುತ್ತದೆ, ಅಚ್ಚರಿಯಾಗುತ್ತದೆ, ಎಲ್ಲಿಂದ ಈ ಧ್ವನಿ ಕೇಳಿಸುತ್ತದೆಂಬ ಕುತೂಹಲ ಉಂಟಾಗುತ್ತದೆ. ಮತ್ತೆ ಮತ್ತೆ ಈ ಅನುಭವ ಮುಂದುವರೆದರೆ 'ಯಾರೋ ಬೇಕೆಂದೇ ಸಂಚು ಹೂಡಿ ಹೀಗೆ ಮಾಡಿಸುತ್ತಿದ್ದಾರೆ' ಎಂಬ ಸಂಶಯ ಮೊದಲಾಗುತ್ತದೆ. ಇದು 'ಸ್ಕಿಜೋಫ್ರೇನಿಯಾ' ದಲ್ಲಿ ಭ್ರಮೆಗಳ ಸರಣಿ ಆರಂಭವಾಗುವ ರೀತಿ. ಹೀಗೆ ಕೇಳುವ ಧ್ವನಿಗಳಿಂದ ಸ್ಕಿಜೋಫ್ರಿನಿಯಾದಿಂದ ನರಳುವ ವ್ಯಕ್ತಿಗೆ ಬೇರೆಯವರು ಇನ್ನೊಬ್ಬರೊಡನೆ ಏನೇ ಮಾತನಾಡುತ್ತಿದ್ದರೂ ಅದು ತಮಗೇ ಅನ್ವಯಿಸಿ ಹೇಳುತ್ತಿದ್ದಾರೆ ಎಂಬ ಭಾವನೆಯನ್ನೂ ತರುತ್ತದೆ.

'ಸ್ಕಿಜೋಫ್ರಿನಿಯಾ' ದಲ್ಲಿ ಮನೋವೈದ್ಯಕೀಯ ವಿಜ್ಞಾನದ ಪ್ರಕಾರ, 'auditory hallucinations' ಕೇಳುವ ಧ್ವನಿಗಳ ಭ್ರಮೆಗಳು ಎಷ್ಟು ಸಾಮಾನ್ಯ ಲಕ್ಷಣವೆಂದರೆ ಈಗಷ್ಟೇ ಮನೋವೈದ್ಯಕೀಯಕ್ಕೆ ಕಾಲಿರಿಸಿದ ವಿದ್ಯಾರ್ಥಿ ವೈದ್ಯ ಕೂಡ 'ಇದು ಇಂಥದ್ದೇ ಕಾಯಿಲೆ' ಎಂದು ಹೇಳಿಬಿಡುವಷ್ಟು. ಆದರೆ ಈ ಸಾಮಾನ್ಯ ಲಕ್ಷಣದ ಬಗೆಗೆ ಜನಸಾಮಾನ್ಯರಿಗೆ ಇನ್ನೂ ಅರಿವಿಲ್ಲ. ಹಾಗಾಗಿಯೇ ಇಂಥ ಲಕ್ಷಣಗಳು ಕಂಡು ಬಂದಾಗ ಜನರು ಭಯಭೀತರಾಗುತ್ತಾರೆ, ಆತ್ಮ–ದೆವ್ವ–ಪ್ರೇತಗಳು ರೋಗಿಯ ದೇಹದೊಳಕ್ಕೆ ಹೊಕ್ಕು ಈ ಧ್ವನಿಗಳನ್ನು ಉಂಟು ಮಾಡುತ್ತಿರಬೇಕು ಎಂದು ನಂಬುತ್ತಾರೆ. ಮಾಟ–ಮಂತ್ರಗಳ– ಪೂಜೆ–ಪುನಸ್ಕಾರಗಳ ಮೊರೆ ಹೋಗುತ್ತಾರೆ.

ಹಾಗಿದ್ದರೆ 'auditory hallucinations' ಕೇಳುವ ಧ್ವನಿಗಳ ಭ್ರಮೆಗಳು ಉಂಟಾಗುವುದು ಹೇಗೆ? ಮಿದುಳಿಗೆ ಬೇರೆಯವರ ಧ್ವನಿಗಳನ್ನು ತಾನೇ ಸೃಷ್ಟಿ ಮಾಡುವ ಸಾಮರ್ಥ್ಯವುಂಟೇ? ಹೀಗೆ ಈ ವಿವರಗಳು ರೋಗಿಯನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ರೋಗಿಯ ಕುಟುಂಬ, ಮನೋವೈದ್ಯ ಇಬ್ಬರಿಗೂ ಅವಶ್ಯವೆನಿಸುತ್ತವೆ. ಅಷ್ಟೇ ಅಲ್ಲ, ಇಡೀ ಸಮಾಜ ಇವುಗಳ ಬಗ್ಗೆ ತಿಳಿದುಕೊಳ್ಳುವುದು, 'ಹುಚ್ಚ' ಎಂಬ ಕಳಂಕದಿಂದ ಸ್ಕಿಜೋಫ್ರಿನಿಯಾದಿಂದ ನರಳುವ ವ್ಯಕ್ತಿಯನ್ನು ಪಾರಾಗಿಸಿ ಬೇರೆಲ್ಲಾ ಕಾಯಿಲೆಗಳಂತೆ ಚಿಕಿತ್ಸೆಗೆ ಬೇಗ ಒಳಪಡಲು ಸಹಾಯಕವಾಗುತ್ತದೆ.

ಹಾಗೆ ನೋಡಿದರೆ ಭ್ರಮೆಗಳನ್ನು ನಮ್ಮ ಐದೂ ಇಂದ್ರಿಯಗಳ ಪ್ರಕ್ರಿಯೆಯಲ್ಲಿ ಮಿದುಳು ಸೃಷ್ಟಿಸುತ್ತದೆ.



ಅತಿ ಸಂತೋಷ, ಅತಿ ದುಃಖದಲ್ಲಿ ನಮ್ಮ ಆತ್ಮೀಯರು ಮಾತನಾಡಿದ, ಸತ್ತವರ ಧ್ವನಿ ಬಂದು ಮಾತನಾಡಿದ ಅನುಭವಗಳು ಸಾಮಾನ್ಯ. ಅವೇ ನಮ್ಮ ಕಣ್ಣ ಮುಂದೆ ಬಂದು ನಿಂತಂತೆಯೂ ಎನಿಸಬಹುದು. ನಿದ್ರಿಸುವಾಗ, ಇನ್ನೇನು ನಿದ್ದೆ ಬರುತ್ತದೆ ಎನ್ನುವಾಗ, ನಿದ್ದೆಯಿಂದ ಎಚ್ಚರವಾಗುವಾಗ ದೃಶ್ಯ–ಶ್ರವಣ ಭ್ರಮೆಗಳು– ಅಂದರೆ ಕಾಣುವ, ಕೇಳುವ ಭ್ರಮೆಗಳು ಸಾಮಾನ್ಯ. ಅಥವಾ ಕೆಲವೊಮ್ಮೆ ಹುಳವಿಲ್ಲದೆಯೂ ಮೈ ಮೇಲೆ ಏನೋ ಹುಳವೊಂದು ಹರಿದ ಸಂವೇದನೆ ಉಂಟಾಗಬಹುದು. ಇದು ಸ್ಪರ್ಶದ ಭ್ರಮೆ. ತುಂಬ ಅಪರೂಪವಾಗಿ ಯಾವುದೇ ಪ್ರಚೋದನೆಯಿಲ್ಲದೆಯೂ ನಾಲಿಗೆಗೆ ಬೇರೊಂದು ರುಚಿಯ, ಮೂಗಿಗೆ ಬೇರೊಂದು ವಾಸನೆಯ ಅನುಭವ ವುಂಟಾಗಬಹುದು. ಇವೆಲ್ಲವೂ ಪ್ರಚೋದನೆಯಿಲ್ಲದೆ ಅಂದರೆ ನೋಡಲು, ಕೇಳಲು, ವಾಸನೆ ನೋಡಲು, ರುಚಿ ನೋಡಲು, ಸ್ಪರ್ಶಿಸಲು ಯಾವುದೇ ಹೊರಗಿನ ವಸ್ತುವಿರದೆ ತನ್ನಿಂತಾನೇ ಉಂಟಾಗುವುದರಿಂದ 'ಭ್ರಮೆ' ಗಳಾಗುತ್ತವೆ. ಹಾಗಾಗಿ ಇವು ವ್ಯಕ್ತಿಯ 'ಸ್ವಂತ'ದ ಅನುಭವಗಳು. ನಮ್ಮ ನೋವನ್ನು ಹೇಗೆ ಇತರರಿಗೆ ಕಾಣಲು ಅಸಾಧ್ಯವೋ ಹಾಗೆಯೇ ಈ 'ಭ್ರಮೆ'ಗಳನ್ನೂ ಇತರರು ಅನುಭವಿಸುವುದು ಸಾಧ್ಯವಿಲ್ಲ. ಮೇಲೆ ವಿವರಿಸಿದಂತಹ ಅತಿ ಸಂತೋಷ–ಅತಿ ದುಃಖ, ಉದ್ವೇಗ, ಅತಿ ಅಧ್ಯಾತ್ಮದ ತಾದಾತ್ಮ್ಯತೆಯಲ್ಲಿ, ನಿದ್ರೆ ಬರುವಾಗ ಉಂಟಾಗುವ ಭ್ರಮೆಗಳು ನಮ್ಮೆಲ್ಲರಲ್ಲಿಯೂ ಯಾವಾಗಲಾದರೊಮ್ಮೆ ಉಂಟಾಗಲು ಸಾಧ್ಯವಿದೆ. ಆಗ ಅದು 'ಅನುಭವ' ವಷ್ಟೆ. ಆದರೆ 'ಅಸಹಜ' ಎನಿಸಲಾರದು. ಇದಕ್ಕೆ ಮಿದುಳಿನ ನರವಾಹಕಗಳ ತಾತ್ಕಾಲಿಕ ಏರುಪೇರು ಕಾರಣವೆನಿಸುತ್ತದೆ.

'ಸ್ಕಿಜೋಫ್ರಿನಿಯಾ' ದಿಂದ ನರಳುವ ವ್ಯಕ್ತಿಯಲ್ಲಿ ಮಿದುಳಿನಲ್ಲಿ ಇಂಥಹ ಏರುಪೇರು ಸತತವಾಗಿರುತ್ತದೆ. ಹಾಗಾಗಿಯೇ ಭ್ರಮೆಯ ವರ್ತುಲವನ್ನು ಮುರಿಯಲು, ರೋಗಿಯನ್ನು ಅದರಿಂದ ಹೊರಗೆ ಎಳೆಯಲು ಮಾತು, ಸಾಂತ್ವನ, ನಂಬಿಕೆ ಇವುಗಳಷ್ಟೇ ಸಾಕಾಗುವುದಿಲ್ಲ, ಬದಲಾಗಿ ಔಷಧಿಗಳು ಅಗತ್ಯವಾಗಿ ಬೇಕಾಗುತ್ತವೆ.

ಸ್ಕಿಜೋಫ್ರಿನಿಯಾದಲ್ಲಿ ಕೇಳುವ ಧ್ವನಿಗಳ ಭ್ರಮೆಯೂ ಅಷ್ಟೆ. ನಿರ್ದಿಷ್ಟವಾಗಿ ಗುರುತಿಸಲ್ಪಟ್ಟಿವೆ. ರೋಗಿಗಳ ಮಾತುಗಳಲ್ಲಿಯೇ ಹೇಳುವುದಾದರೆ "ಒಂದಷ್ಟು ಜನ,




ಗುಂಪಿನಲ್ಲಿ ನನ್ನ ಬಗ್ಗೆ ಇವಳ ಶೀಲ ಸರಿಯಿಲ್ಲ, ಇವಳು ಕೆಟ್ಟ ಹೆಂಗಸು, ಇವಳನ್ನು ಕೊಲ್ಲಬೇಕು ಎಂದು ಮಾತನಾಡುತ್ತಿರುತ್ತಾರೆ. ಕಿವಿಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡರೂ ಈ ಧ್ವನಿಗಳು ನಿಲ್ಲುವುದಿಲ್ಲ". ಇದು ಒಂದಷ್ಟು ಧ್ವನಿಗಳು ಚರ್ಚಿಸುವ ರೀತಿಯ ಭ್ರಮೆ. ಇನ್ನೊಂದು ರೀತಿಯಲ್ಲಿ ರೋಗಿ ಕೇಳುವ ಧ್ವನಿ ರೋಗಿಯ ಪ್ರತಿಯೊಂದು ಕ್ರಿಯೆಯ ಮೇಲೆ ಕ್ರಿಕೆಟ್ಟಿನಲ್ಲಿ ನಾವು ನೋಡುವಂತೆ 'ರನ್ನಿಂಗ್ ಕಾಮೆಂಟರಿ' ನೀಡುತ್ತದೆ. ನಮಗೆ ಇದ್ಯಾವುದೂ ಗೊತ್ತಿರದಿದ್ದರೆ, ಮಿದುಳಿಗೆ ರಾಸಾಯನಿಕಗಳ ಏರುಪೇರಿನ ಸಮಸ್ಯೆಯಿಂದ ಹೀಗೆ ಧ್ವನಿಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆಯೆಂದು ಅರಿವಿರದಿದ್ದರೆ 'ರೋಗಿ'ಯ ಅನುಭವ 'ವಿಚಿತ್ರ' ಎನಿಸುತ್ತದೆ. ಇವರು ತಮ್ಮಷ್ಟಕ್ಕೆ ತಾವೇ ಏಕೆ ಮಾತನಾಡಿಕೊಳ್ಳುತ್ತಾರೆ, ನಗುತ್ತಾರೆ ಎಂದು ಅಚ್ಚರಿ ಪಡುತ್ತೇವೆ. ಅವರಿಗೆ ಸ್ಕಿಜೋಫ್ರಿನಿಯಾದಿಂದ ನರಳುವ ವ್ಯಕ್ತಿಗಳು ಎಂದು ಕರೆಯುವುದರ ಬದಲು "ಸ್ಕಿಜೋಫ್ರಿನಿಕ್ಸ್" "ಹುಚ್ಚರು" "ತಲೆಕೆಟ್ಟವರು" ಎಂಬ ಹಣೆಪಟ್ಟಿ ಅಂಟಿಸುತ್ತೇವೆ. ಚಿಕಿತ್ಸೆ ಪಡೆಯುವ ಬದಲು ಹಿಂಜರಿದು ಜೀವನ ಕಳೆದುಕೊಳ್ಳುವಂತೆ ಮಾಡುತ್ತೇವೆ.

ಸ್ಕಿಜೋಫ್ರಿನಿಯಾದ ಧ್ವನಿಗಳಿಂದ ನರಳಿ, ಚಿಕಿತ್ಸೆ ಪಡೆದು ಜೀವನದಲ್ಲಿ ಯಶಸ್ವಿಯಾದ ಎಲೆನರ್ ಲ್ಯಾಂಗಡನ್ ತನ್ನ ಅನುಭವವನ್ನು ತೆರೆದಿಡುತ್ತಾ ಹೀಗೆ ಹೇಳುತ್ತಾಳೆ "ನಾನು ಈಗ ಎಲ್ಲವನ್ನೂ ತೆರೆದಿಡುತ್ತಿರುವುದು ಮೂರು ಕಾರಣಗಳಿಂದ. ಮೊದಲನೆಯದು ನನಗೆ ಅತ್ಯುತ್ತಮ ಚಿಕಿತ್ಸೆ ಸಿಕ್ಕಿರುವುದು. ಎರಡು, ನನಗಿರುವ ಆತ್ಮೀಯರ ಬೆಂಬಲ, ಮೂರನೆಯದು ನಾನು ಮಾಡುವ ವಕೀಲೆಯ ಕೆಲಸ. ಅದು ನನ್ನನ್ನು ಸದಾ ಬೌದ್ಧಿಕ ಪ್ರಚೋದನೆಯಿಂದ, ಚಟುವಟಿಕೆಯಿಂದ ಇರಿಸುತ್ತದೆ. ಇತ್ತೀಚೆಗೆ ನನ್ನ ಸ್ನೇಹಿತೆಯೊಬ್ಬಳು ಕೇಳಿದಳು. 'ಒಂದೇ ಒಂದು ಮಾತ್ರೆ ನಿನ್ನ ಈ ಕಾಯಿಲೆಯನ್ನು ಗುಣಪಡಿಸಬಹುದೆಂದರೆ ನೀನು ಅದನ್ನು ತೆಗೆದುಕೊಳ್ಳುವೆಯಾ?'. ಅಂಥ ಪವಾಡಗಳ ನಿರೀಕ್ಷೆ ನನಗಿಲ್ಲ. ನಾವೆಲ್ಲರೂ ಮಾನಸಿಕ ಕಾಯಿಲೆಗಳನ್ನು ಹಂಚಿಕೊಂಡಿಲ್ಲ ನಿಜ. ಆದರೆ ಮಾನವೀಯತೆಯನ್ನು?! ಮಾನಸಿಕ ಕಾಯಿಲೆಗಳಿಂದ ನರಳುವ ನಾವೂ ಬಯಸುವುದು ಇತರ 'ಮನುಷ್ಯ'ರು ಬಯಸುವುದನ್ನೇ. ಅದು ಮನೋವೈದ್ಯಕೀಯ ಪಿತಾಮಹ ಸಿಗ್ಮಂಡ್ ಫ್ರಾಯ್ಡ್ ಹೇಳಿದಂತೆ "to work and to love" ಅಂದರೆ, "ಕೆಲಸ ಮಾಡುವುದು ಮತ್ತು ಪ್ರೀತಿಸುವುದು!" ○



ವೈದ್ಯ ಸಂಪದ

ಕಾಯಿಲೆ-ಚಿಕಿತ್ಸೆ



**ಡಾ. ರಕ್ಷಾ ಯು. ರಾವ್**
ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ
ಶಿವಮೊಗ್ಗ

# ಗರ್ಭಾವಸ್ಥೆಯ ಮಧುಮೇಹ; ನಿಮಗಿದು ತಿಳಿದಿರಲಿ!!

ಇದನ್ನು ಗೆಸ್ಟೆಶನಲ್ ಡಯಾಬಿಟೀಸ್ (ಜಿ ಡಿ ಎಂ) ಎಂದು ಕರೆಯಲಾಗಿದ್ದು ಇದರಲ್ಲಿ ಗರ್ಭಿಣಿಯ ಇನ್ಸುಲಿನ್ ಹಾರ್ಮೋನಿನ ಪ್ರಮಾಣ ಸರಿಯಿದ್ದರೂ ದೇಹವು ಅದನ್ನು ಪರಿಣಾಮಕಾರಿಯಾಗಿ ಬಳಸುವುದಿಲ್ಲ. ಇದನ್ನು ಇನ್ಸುಲಿನ್ ರೆಜಿಸ್ಟೆನ್ಸ್ ಅಥವಾ ಇನ್ಸುಲಿನ್ ಪ್ರತಿರೋಧ ಎನ್ನಬಹುದು. ಜೀವ ಕೋಶಗಳಿಂದ ಹೀರಿಕೊಳ್ಳುವ ಬದಲು ಗ್ಲೂಕೋಸ್ ರಕ್ತದಲ್ಲಿಯೇ ಉಳಿಯುತ್ತದೆ. ಪ್ರಥಮ ಮಾದರಿ (ಟೈಪ್ 1) ಮಧುಮೇಹಕ್ಕಿಂತ ಗರ್ಭಾವಸ್ಥೆಯ ಮಧುಮೇಹ ವಿಭಿನ್ನ. ಇಲ್ಲಿ ಇನ್ಸುಲಿನ್ ಕೊರತೆ ಇರುವುದಿಲ್ಲ. ಗರ್ಭಾವಸ್ಥೆಯಲ್ಲಿ ಉಂಟಾಗುವ ಬದಲಾವಣೆಗಳು (ಕೆಲವು ಹಾರ್ಮೋನುಗಳು) ಇನ್ಸುಲಿನ್ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸಿ ಲಭ್ಯವಿರುವ ಇನ್ಸುಲಿನ್ ಕಡಿಮೆ ಪರಿಣಾಮಕಾರಿಯಾಗಿ ಮಾಡುತ್ತವೆ. ಗರ್ಭಾವಸ್ಥೆಯ ನಂತರ ಸಾಮಾನ್ಯವಾಗಿ ಮಧುಮೇಹದ ಲಕ್ಷಣಗಳು ಕಣ್ಮರೆಯಾಗುತ್ತವೆ. ಭಾರತದಲ್ಲಿ ಸುಮಾರು 5 ಮಿಲಿಯನ್ ಗರ್ಭಿಣಿಯರಲ್ಲಿ ಈ ಸ್ವರೂಪ ಕಂಡು ಬತುತ್ತದೆ.


**ಗರ್ಭಾವಸ್ಥೆಯ ಮಧುಮೇಹ ತರುವ ಅಪಾಯಕಾರಿ ಅಂಶಗಳು:**

1. ಅಧಿಕ ತೂಕ ಅಥವಾ ಬೊಜ್ಜು
2. ಕುಟುಂಬದ ಸದಸ್ಯತಲ್ಲಿ ಮಧುಮೇಹ ಇದ್ದರೆ
3. ಮೊದಲ ಗರ್ಭಾವಸ್ಥೆಯಲ್ಲಿ 4 ಕೆ ಜಿ ಗಿಂತ ಹೆಚ್ಚಿನ ತೂಕದ ಶಿಶುವಿಗೆ ಜನ್ಮ ನೀಡಿದ್ದರೆ
4. 25 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು
5. ಕೆಲವು ಜನಾಂಗಗಳು – ಏಷಿಯಾದ ಮಹಿಳೆಯರು

**ಗರ್ಭಾವಸ್ಥೆಯ ಮಧುಮೇಹವನ್ನು ಹೇಗೆ ನಿರ್ಧರಿಲಾಗುವುದು?**

ಈ ಪರೀಕ್ಷೆಯನ್ನು ಅಮೇರಿಕಾದ ಮಧುಮೇಹ ಸಂಸ್ಥೆ ಶಿಫಾರಸ್ಸು ಮಾಡಿದೆ. ಮಧುಮೇಹ ಅಪಾಯಕಾರಿ ಅಂಶಗಳನ್ನು ಹೊಂದಿದೆ ಮಹಿಳೆಯರಲ್ಲಿ ಮೊದಲ ತಪಾಸಣೆಗೆ ಬಂದಾಗ ಮತ್ತು ಈ ಅಪಾಯಕಾರಿ ಆಂಶಗಳನ್ನು ಹೊಂದಿರದ ಮಹಿಳೆಯರಲ್ಲಿ ಗರ್ಭಾವಸ್ಥೆಯ 24 – 28 ವಾರಗಳ ನಡುವೆ ಮಾಡಿಸಬೇಕು. ಗರ್ಭಾಆವಸ್ಥೆಯ ಮಧುಮೇಹ ಇರುವವರು ಪ್ರಸವದ ನಂತರ 6 ವಾರ ಹಾಗೂ 3 ತಿಂಗಳವರೆಗೂ ರಕ್ತದ ಸಕ್ಕರೆಯ ಪ್ರಮಾಣದ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು.

ಗರ್ಭಾವಸ್ಥೆಯ ಮಧುಮೇಹದ ಸ್ಕ್ರೀನಿಂಗ್ ಪರೀಕ್ಷೆಯನ್ನು ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸ್ಸಿನಂತೆ ಮೌಖಿಕ ಗ್ಲೂಕೋಸ್ ಸವಾಲು (oral glucose challenge test) ಪರೀಕ್ಷೆಯ ಮೂಲಕ ಪತ್ತೆ ಮಾಡಲಾಗುವುದು. 75 ಗ್ರಾಂ ಗ್ಲೂಕೋಸನ್ನು ಕುಡಿಸಿದ 2 ಗಂಟೆಯ ನಂತರ ರಕ್ತದಲ್ಲಿ ಗ್ಲೂಕೋಸ್ ಪ್ರಮಾಣವನ್ನು ಪರೀಕ್ಷಿಸಲಾಗುವುದು. 140 ಮಿಲಿ ಗ್ರಾಂ ಗಿಂತ ಹೆಚ್ಚು ಇದ್ದಲ್ಲಿ ಚಿಕಿತ್ಸೆಯನ್ನು ಆರಂಭಿಸಲಾಗುವುದು. ಆಹಾರದಲ್ಲಿ ಬದಲಾವಣೆ ಮತ್ತು ವ್ಯಾಯಾಮದ ಮೂಲಕ ಮಧುಮೇಹವನ್ನು ನಿಯಂತ್ರಿಸಲು ಪ್ರಯತ್ನಿಸಲಾಗುವುದು. ಖಾಲಿ ಹೊಟ್ಟೆಯಲ್ಲಿ ಮತ್ತು ಊಟದ 2 ಗಂಟೆಯ ನಂತರ ಗ್ಲೂಕೋಸ್ ಪರೀಕ್ಷೆಯನ್ನು ಮಾಡಿಸಿ ಹೆಚ್ಚಿದ್ದರೆ ಔಷಧ ಅಥವಾ ಇನ್ಸುಲಿನ್ ಮೂಲಕ ಚಿಕಿತ್ಸೆ ಪ್ರಾರಂಭ ಮಾಡಲಾಗುವುದು.





ಇನ್ಸುಲಿನ್ ಕೊರತೆಯಿಂದ ಉಂಟಾಗುವ ಪ್ರಥಮ ಮಾದರಿಯ ಮಧುಮೇಹದಿಂದ ಭ್ರೂಣದ ಮೇಲಾಗುವ ದುಷ್ಪರಿಣಾಮಗಳು ಸಾಮಾನ್ಯವಾಗಿ ಕಂಡು ಬರುವುದಿಲ್ಲ. ಏಕೆಂದರೆ ಹೆಚ್ಚಿನ ಗ್ಲೂಕೋಸ್ ಪರಿಣಾಮ ಗರ್ಭಾವಸ್ಥೆಯ 5 ತಿಂಗಳ ನಂತರ ಪ್ರಾರಂಭವಾಗುತ್ತದೆ. ಗರ್ಭಾವಸ್ಥೆಯ ಮಧುಮೇಹದ ತೊಡಕುಗಳನ್ನು ಸಾಮಾನ್ಯವಾಗಿ ನಿರ್ವಹಿಸಬಹುದು ಮತ್ತು ತಡೆಗಟ್ಟಬಹುದು.

**ಸಾಮಾನ್ಯವಾಗಿ ಕಂಡುಬರುವ ತೊಂದರೆಗಳು:**

**ಶಿಶುವಿನಲ್ಲಿ:** ಮೊದಲನೆಯದಾಗಿ ಹುಟ್ಟುವ ಶಿಶು ಮೊದಲ ಕೆಲವು ದಿನ ಹಲವಾರು ರಾಸಾಯನಿಕ ಅಸಮತೋಲನ, ಕಡಿಮೆ ಕ್ಯಾಲ್ಸಿಯಂ, ಮೆಗ್ನಿಸಿಯಂ ದಿಂದ ಬಳಲಬಹುಸು ಎರಡನೇಯ ಪ್ರಮುಖ ಸಮಸ್ಯೆ ಫೀಟಲ್ ಮ್ಯಾಕ್ರೋಜೋಮಿಯಾ – ಇದರ ಅರ್ಥ ಗಣನೀಯವಾಗಿ ದೊಟ್ಟದಾದ ಶಿಶು. ಸಹಜವಾಗಿ ಭ್ರೂಣವು ಎಲ್ಲಾ ಪೋಷಕಾಂಶಗಳನ್ನು ನೇರವಾಗಿ ತಾಯಿಯ ರಕ್ತದಿಂದ ಪಡೆಯುತ್ತದೆ. ತಾಯಿಯ ರಕ್ತದಲ್ಲಿ ಹೆಚ್ಚಿನ ಗ್ಲೂಕೋಸ್ ಇದ್ದರೆ ಭ್ರೂಣದ ಮೇದೋಜೀರಕ ಗ್ರಂಥಿ ಹೆಚಿನ ಗ್ಲೂಕೋಸ್ ಮಟ್ಟವನ್ನು ಗ್ರಹಿಸಿ ಅದನ್ನು ಬಳಸಲು ಹೆಚ್ಚಿನ ಇನ್ಸುಲಿನ್ ಉತ್ಪಾದಿಸುತ್ತದೆ. ಹೆಚ್ಚಿನ ಇನ್ಸುಲಿನ್ ಪ್ರಭಾವದಿಂದ ಭ್ರೂಣದಲ್ಲಿ ಕೊಬ್ಬಿನ ಸಂಯೋಜನೆ ಹೆಚ್ಚಾಗಿ ಬೆಳೆಯಲು ಕಾರಣವಾಗಿ ತೂಕ ವಿಪರೀತವಾಗಿ ಅಧಿಕವಾಗುತ್ತದೆ. ಸಾಮಾನ್ಯವಾಗಿ ಶಿಶುವಿನ ತೂಕ 4 ಕೆ ಜಿ ಗಿಂತಲೂ ಹೆಚ್ಚಿರುತ್ತದೆ.

ಮೂರನೇಯ ಮುಖ್ಯ ಸಮಸ್ಯೆ ಸಕ್ಕರೆಯ ಪ್ರಮಾಣ ಕಡಿಮೆಯಾಗುವುದು – ಹುಟ್ಟಿದ ಕೆಲ ಸಮಯದ ನಂತರ ಸಕ್ಕರೆಯ ಪ್ರಮಾಣ ಕಡಿಮೆಯಾಗುವುದು ಕಂಡು ಬರುತ್ತದೆ. ಗರ್ಭದಲ್ಲಿ ತಾಯಿಯಿಂದ ಅಧಿಕ ಸಕ್ಕರೆಯನ್ನು ಪಡೆಯುತ್ತಿದ್ದುದರಿಂದ ಅಧಿಕ ಪ್ರಮಾಣದಲ್ಲಿ ಇನ್ಸುಲಿನ್ ಉತ್ಪಾದನೆಯಾಗುತ್ತಿರುತ್ತದೆ. ಪ್ರಸವದ ನಂತರ ತಾಯಿಯಿಂದ ಪಡೆಯುತ್ತಿದ್ದ ಸಕ್ಕರೆಯ ಸರಬರಾಜು ನಿಲ್ಲುತ್ತದೆ. ಆದರೆ ಇನ್ಸುಲಿನ್ ಪ್ರಭಾವ ಕಡಿಮೆಯಾಗಿರುವುದಿಲ್ಲ. ಇದರಿಂದಾಗಿ ಶಿಶು ಪದೇ ಪದೇ ಕಡಿಮೆ ಸಕ್ಕರೆಯ ಪ್ರಭಾವದಿಂದ ಬಳಲುತ್ತದೆ. ಆದುದರಿಂದ 2– 3 ದಿನಗಳವರೆಗೆ ಮಗುವಿನ ರಕ್ತದಲ್ಲಿನ ಗ್ಲೂಕೋಸ್ ಪ್ರಮಾಣವನ್ನು ಕನಿಷ್ಟ 6 ಗಂಟೆಗೊಮ್ಮೆ ಪರೀಕ್ಷಿಸಬೇಕಾಗುತ್ತದೆ. ಕಡಿಮೆ ಕಂಡು ಬಂದಲ್ಲಿ ಗ್ಲೂಕೋಸ್ ನ್ನು ಚುಚ್ಚುಮದ್ದಿನ ಮೂಲಕ ನೀಡಬೇಕಾಗುತ್ತದೆ.

**ತಾಯಿಯಲ್ಲಿ:** ಭ್ರೂಣದ ಗಾತ್ರ ಹೆಚ್ಚಿರುವದರಿಂದ ದೀರ್ಘ ಕಾಲದ ಹೆರಿಗೆ, ಕಷ್ಟಕರವಾದ ಹೆರಿಗೆ, ಸೀಜೆರಿಯನ್ ಅವಶ್ಯಕತೆ, ಪ್ರಸವ ನಂತರದ ರಕ್ತಸ್ರಾವ, ನಂಜು ಇತ್ಯಾದಿ ಸಮಸ್ಯೆಗಳು ಹೆಚ್ಚಾಗಿ ಕಂಡು ಬರುತ್ತವೆ.

**ತಡೆಗಟ್ಟುವಿಕೆ:**

ಆರೋಗ್ಯಕರ ಆಹಾರ ಸೇವನೆ

ಪ್ರತಿ ನಿತ್ಯ ನಿಯಮಿತ ವ್ಯಾಯಾಮ

ಅಪಾಯದ ಅಂಶಗಳು ಇದ್ದರೆ ತಪಾಸಣೆ ಮಾಡಿಸಿಕೊಳ್ಳುವುದು.







**ಮೇಜರ್ ಡಾ. ಕುಶವಂತ ಕೋಳಿಬೈಲು**
ಮಕ್ಕಳ ತಜ್ಞ ವೈದ್ಯರು, ಮಡಿಕೇರಿ

ವೈದ್ಯೇತರ....

# ತಡವಾಗಿ ಬಂದ ಪಾಸು



**ಡಾ ಶಿವಾನಂದ ಕುಬಸದ**
**ವಿಭಾಗೀಯ ಸಂಪಾದಕರು**
**ಕುಬಸದ ಆಸ್ಪತ್ರೆ, ಯಾದವಾಡ ರಸ್ತೆ, ಮುಧೋಳ**

ಚೆಂಡನ್ನು ಗೋಲ್ ಪೋಸ್ಟಿನೊಳಗೆ ತಳ್ಳಿದವನಿಗೆ ಆ ಗೋಲಿನ ಶ್ರೇಯ ಸಿಕ್ಕರೂ ಪ್ರತಿಯೊಂದು ಗೋಲಿನ ಹಿಂದೆ ಇಡೀ ತಂಡದ ಶ್ರಮ ಮತ್ತು ಹೊಂದಾಣಿಕೆಯ ಆಟವಿರುತ್ತದೆ. ಸರಿಯಾದ ಸಮಯದಲ್ಲಿ ಸರಿಯಾದ ಆಟಗಾರನಿಗೆ ನಿಖರವಾದ ಪಾಸ್ ಸಿಕ್ಕಿದರೆ ಮಾತ್ರ ಗೋಲು ಮತ್ತು ಗೆಲುವು ಎರಡನ್ನೂ ಸಾಧಿಸಬಹುದು. ಪ್ರತಿಯೊಬ್ಬ ಆಟಗಾರನಿಗೂ ಅತನದೇ ಆದ ವೈಶಿಷ್ಟ್ಯಗಳು, ಸಾಮರ್ಥ್ಯಗಳೂ ಮತ್ತು ಕುಂದು ಕೊರತೆಗಳಿರುತ್ತವೆ. ಹಾಗಾಗಿ ತಂಡದಲ್ಲಿ ಯಾರಾದರು ಒಬ್ಬ ಆಟಗಾರ ಚೆಂಡನ್ನು ಪಾಸು ಮಾಡಲು ತಡವರಿಸಿದರೆ ಅಥವಾ ಚೆಂಡಿನೊಂದಿಗೆ ಕಾಲಹರಣ ಮಾಡಿದರೆ ಇಡೀ ತಂಡದ ಗೆಲ್ಲುವ ಅವಕಾಶಗಳು ಕ್ಷೀಣಿಸುತ್ತದೆ. ಈ ಮಾತುಗಳನ್ನು ನಾನು ಕಾಲೇಜಿನ ಕ್ರೀಡಾಂಗಣದಲ್ಲಿ ಕೇಳಿದ್ದಕ್ಕಿಂತ ಜಾಸ್ತಿ ಬಾರಿ ಪೀಡಿಯಾಟ್ರಿಕ್ ವಿಭಾಗದ ಮುಖ್ಯಸ್ಥರಾಗಿದ್ದ ನಮ್ಮ ಭಾರತೀಯ ನೇವಿಯ ಹಿರಿಯ ಮಕ್ಕಳ ತಜ್ಞ ಕಮಡೋರ್ ಕೃಷ್ಣಮೂರ್ತಿ ಅಧಿಕಾರಿಯವರ ಬಾಯಲ್ಲಿ ಕೇಳಿದ್ದೇನೆ. ಹಳ್ಳಿ ಮೂಲೆಯಿಂದ ಹಿಡಿದು ನಗರದಲ್ಲಿರುವ ಅತ್ಯುನ್ನತ ಆಸ್ಪತ್ರೆಗೆ ರೋಗಿಯನ್ನು ಸರಿಯಾದ ಸಮಯಕ್ಕೆ ಸರಿಯಾದ ರೀತಿಯಲ್ಲಿ ತಲುಪಿಸುವ ಅಗತ್ಯತೆಯ ಬಗ್ಗೆ ವಿವರಿಸಲು ಅವರು ಈ ಉದಾಹರಣೆ ಕೊಡುತ್ತಿದ್ದರೇ ಹೊರತು ಅವರಿಗೆ ಪುಟ್ಬಾಲ್ ಅಥವಾ ಹಾಕಿಯಲ್ಲಿ ವಿಶೇಷ ಅಸಕ್ತಿಯಿರಲಿಲ್ಲ.

ಇತ್ತೀಚಿಗೆ ಮಗುವೊಂದನ್ನು ನೋಡಿದಾಗ ಅವರ ಮಾತು ಅಕ್ಷರಶಃ ಸತ್ಯವೆನಿಸಿತು. ಹೆಚ್ಚಿನ ನವಜಾತ ಶಿಶುಗಳಿಗೆ ಹುಟ್ಟಿ ಮೂರು ನಾಲ್ಕು ದಿನದ ನಂತರ ದೇಹದಲ್ಲಿ ಜಾಂಡೀಸ್ ಉಂಟಾಗುವುದು ಸಹಜ. ದೇಹದಲ್ಲಿ ಬಿಲಿರುಬಿನ್ ಎಂಬ ವಸ್ತುವಿನ ಪ್ರಮಾಣ ಜಾಸ್ತಿಯಾದಾಗ ದೇಹ ಹಳದಿ ಬಣ್ಣಕ್ಕೆ ತಿರುಗುತ್ತದೆ. ಈ ಏರುತ್ತಿರುವ ಬಿಲಿರುಬಿನ್ ಕಣವನ್ನು ಕಡಿಮೆ ಮಾಡಲು ಮನುಷ್ಯನ ಪಿತ್ತಜನಕಾಂಗದಲ್ಲಿ ವಿವಿಧ ಪ್ರಕ್ರಿಯೆಗಳಿವೆ. ನವಜಾತ ಶಿಶುವಿನ ಪಿತ್ತಜನಕಾಂಗ ಸ್ವಲ್ಪ ಎಳಸಾಗಿರುವ ಕಾರಣಕ್ಕಾಗಿ ಅವಕ್ಕೆ ಬಿಲಿರುಬಿನ್ ಅಂಶವನ್ನು ಕಡಿಮೆ ಮಾಡಲು ಶಕ್ತಿಯಿರುವುದಿಲ್ಲ. ಹಾಗಾಗಿ ನವಜಾತ ಶಿಶುವನ್ನು ಉಪಚರಿಸುವ ಫೋಟೋಥೆರಪಿ ಕ್ರಮವನ್ನೂ ನೀವು ನೋಡಿರಬಹುದು. ಆ ಫೋಟೋಥೆರಪಿಯ ಕ್ರಮದಿಂದ ಬಿಲಿರುಬಿನ್ ಅಂಶವು ಕರಗಿ ಮೂತ್ರದ ಮೂಲಕ ಮತ್ತು ಮಲದ ಮೂಲಕ ದೇಹದಿಂದ ಹೊರಗೆ ಹೋಗುತ್ತದೆ. ನವಜಾತ ಶಿಶುವಲ್ಲಿ ಮೊದಲ ಹದಿನಾಲ್ಕು ದಿನದಲ್ಲಿ ಸಾಮಾನ್ಯವಾಗಿ ಕಂಡು ಬರುವ ಈ ಜಾಂಡೀಸ್ ಪಿತ್ತಜನಕಾಂಗ ಸ್ವಲ್ಪ ಬೆಳವಣಿಗೆ ಹೊಂದಿ ಶಕ್ತಿಶಾಲಿಯಾದ



ನಂತರಕಂಡುಬರುವುದಿಲ್ಲ. ಗ್ರಾಮೀಣ ಭಾಗದಲ್ಲಿ ಈಗಲೂ ಮಕ್ಕಳನ್ನು ಮುಂಜಾವಿನ ಬಿಸಿಲಿಗೆ ಹಿಡಿಯುವ ಕ್ರಮವಿದೆ. ಅದರಿಂದ ಯಾವ ಉಪಯೋಗವಿಲ್ಲವೆಂದು ಸಾಬೀತಾಗಿದ್ದರೂ ತಪ್ಪು ತಿಳುವಳಿಕೆಯಿಂದಾಗಿ ಜನರು ಹಾಗೆ ಮಾಡುತ್ತಾರೆ.

ಮಗು ಹುಟ್ಟಿ ಹದಿನಾಲ್ಕು ದಿನದ ನಂತರವೂ ಜಾಂಡೀಸ್ ಇದ್ದಲ್ಲಿ ಅದು ಬೇರೆ ಯಾವುದೋ

ಗಂಭೀರವಾದ ಕಾಯಿಲೆಯ ಲಕ್ಷಣ. ಇಂತಹ ಮಕ್ಕಳಲ್ಲಿ ಪಿತ್ತಜನಕಾಂಗದೊಳಗೆ ಸಂಕೀರ್ಣ ಸಮಸ್ಯೆಗಳಿರುತ್ತದೆ ಅಥವಾ ಪಿತ್ತರಸ ಪಿತ್ತಜನಕಾಂಗದಿಂದ ಹರಿದು ಹೋಗಿ ಕರುಳನ್ನು ಸೇರುವ ದಾರಿಯ ನಡುವೆ ಕೆಲವು ದೈಹಿಕ ಅಡಚಣೆಗಳಿರುತ್ತವೆ. ಹಾಗಾಗಿ ಅಂತಹ ಅಡಚಣೆಗಳನ್ನು ಮತ್ತು ಪಿತ್ತಜನಕಾಂಗದ ಗಂಭೀರವಾದ ಕಾಯಿಲೆಗಳನ್ನು ಶ್ರೀಘ್ರವಾಗಿ ಪತ್ತೆಹಚ್ಚಿ , ಪಿತ್ತರಸ ಸುಲಲಿತವಾಗಿ ಹರಿದುಹೋಗುವಂತೆ ಶಸ್ತ್ರಚಿಕಿತ್ಸೆ ಮಾಡಬೇಕು. ಇಲ್ಲವಾದಲ್ಲಿ ಈ ಬಿಲಿರುಬಿನ್ ಪ್ರಮಾಣವು ಏರುತ್ತಾ ಹೋಗಿ, ಪಿತ್ತರಸದ ಒತ್ತಡ ಮತ್ತು ಹಾನಿಕಾರಕ ಗುಣಗಳಿಂದಾಗಿ ಪಿತ್ತಜನಕಾಂಗ ಸೊರಗಿ ಕೊನೆಗೆ ಸಂಪೂರ್ಣ ನಿಷ್ಕ್ರಿಯವಾಗಬಹುದು. ಒಮ್ಮೆ ಪಿತ್ತಜನಕಾಂಗ ನಿಷ್ಕ್ರಿಯವಾದಲ್ಲಿ ದೇಹದಲ್ಲಿ ತೀವ್ರ ಪ್ರಮಾಣದ ಏರುಪೇರು ಉಂಟಾಗುತ್ತದೆ. ಅಂತಹ ಮಕ್ಕಳಲ್ಲಿ ಪಿತ್ತಜನಕಾಂಗದ ಕಸಿ (ಲಿವರ್‌ಟ್ರಾನ್ಸ್ ಪ್ಲಾಂಟ್) ಮಾಡುವುದೊಂದೇ ಏಕೈಕ ಪರಿಹಾರವಾಗಬಹುದು. ಲಕ್ಷಾಂತರ ಹಣ ವೆಚ್ಚವಾಗುವ ಆ ಚಿಕಿತ್ಸೆ ಶ್ರೀ ಸಾಮಾನ್ಯರ ಕೈಗೆ ಎಟುಕುವುದಿಲ್ಲ, ಜೊತೆಗೆ ದಾನಿಗಳು ಕಡಿಮೆಯಿರುವ ಕಾರಣ ತಮ್ಮ ಪಿತ್ತಜನಕಾಂಗದ ಕಸಿಗಾಗಿ ದೀರ್ಘಕಾಲ ಕಾಯಬೇಕಾಗಿ ಬರುತ್ತದೆ. ಗ್ರಾಮೀಣ ನಿವಾಸಿಗಳು ಜಾಸ್ತಿಯಿರುವ  ಭಾರತದಂತಹ ದೇಶದಲ್ಲಿ ಗಂಭೀರವಾದ ಪಿತ್ತಜನಕಾಂಗದ ಸಮಸ್ಯೆಯಿರುವ  ಸಾವಿರಾರು ಮಕ್ಕಳು ಸರಿಯಾದ ಸಮಯದಲ್ಲಿ ತಲುಪಬೇಕಾದ ಜಾಗ ತಲುಪುವುದಿಲ್ಲ. ಸರಳ ಶಸ್ತ್ರಚಿಕಿತ್ಸೆಯ ಮೂಲಕ ಪಿತ್ತರಸ ಹರಿದು ಹೋಗುವ ದಾರಿಯನ್ನು ದುರಸ್ತಿ ಮಾಡಿ ಪಿತ್ತಜನಕಾಂಗವನ್ನು ಸಂರಕ್ಷಿಸುವ  ವೈದ್ಯಕೀಯ ವ್ಯವಸ್ಥೆಗಳಿವೆ. ಆದರೂ ಗ್ರಾಮೀಣ ಜನ ಮೂಢ ನಂಬಿಕೆಗಳನ್ನು ಪಾಲಿಸುತ್ತಾ  ಸೂಕ್ತ ತಪಾಸಣೆಗಳನ್ನು ಮಾಡದೆ  ನಾಟಿ ಔಷಧಿಗಳ ಮೊರೆ ಹೋಗುತ್ತಾರೆ. ಕೊನೆಗೆ ಅವರಿವರ ಮಾತುಕಟ್ಟಿಕೊಂಡು ಗುಣಪಡಿಸಲಾಗದ ಅವಸ್ಥೆಯಲ್ಲಿ ತಡವಾಗಿ ತಜ್ಞ ವೈದ್ಯರ ಬಳಿಗೆ ಮಕ್ಕಳನ್ನು ತಂದಾಗ ಸಮಯ ಮೀರಿಹೋಗಿರುತ್ತದೆ.



ಗಾಳಿಬೀಡಿನ ಮಹಿಳೆಯೊಬ್ಬಳು ಇತ್ತೀಚೆಗೆ ಆರು ತಿಂಗಳ ಮಗುವಿನೊಂದಿಗೆ ನನ್ನ ಕೊಠಡಿಯನ್ನು ಪ್ರವೇಶಿಸಿದಳು. ಆ ಮಗುವಿನ ಹಳದಿ ಕಣ್ಣುಗಳ ನೋಟ ಈಟಿಯಂತೆ ನನ್ನ ಹೃದಯವನ್ನು ಚುಚ್ಚಿದವು. ಅವಳು ಆ ಮಗುವಿನೊಂದಿಗೆ ನಡೆದು ಬಂದು ಕುರ್ಚಿಯಲ್ಲಿ ಕುಳಿತ ಸಮಯದೊಳಗೆ ಆ ಮಗುವಿನ ಆರೋಗ್ಯದ ಕುರಿತಾದ ದೀರ್ಘವಾದ ನಿಟ್ಟುಸಿರೊಂದು ನನ್ನಿಂದ ಹೊರಬಿತ್ತು. ಆರು ತಿಂಗಳಿಂದ ಮಗುವಿಗೆ ಜಾಂಡೀಸ್ ಇದ್ದರೂ ಅವರಿಗೆ ಆ ಸಮಸ್ಯೆಯ ಗಂಭೀರತೆಯ ಅರಿವಿರದೆ ನಿಶ್ಚಿಂತರಾಗಿದ್ದರು.

"ನಾವು ಎಷ್ಟು ಬಿಸಿಲಿಗೆ ಹಿಡಿದರೂ ಹಳದಿ ಬಣ್ಣ ಕಮ್ಮಿಯಾಗಲೇ ಇಲ್ಲ" ಎನ್ನುತ್ತ ತಮ್ಮ ಕಥೆಯನ್ನು ಹೇಳತೊಡಗಿದರು. ಒಂದೆರಡು ಕಡೆ ಮಗುವನ್ನು ತೋರಿಸಿಕೊಂಡಿದ್ದ ಚೀಟಿಯನ್ನೂ ನನ್ನ ಮೇಜಿನ ಮೇಲಿಟ್ಟರು. ಅಪಾಯದ ಸುಳಿವು ಎಷ್ಟು ಗಾಢವಾಗಿ ನನ್ನನ್ನು ಕಾಡುತ್ತಿತ್ತೆಂದರೆ ನನಗೆ ಸುಮ್ಮನೆ ಕುಳಿತುಕೊಳ್ಳಲಾಗಲಿಲ್ಲ. ನನ್ನ ಆತಂಕಕ್ಕೆ ಸ್ಪಂದಿಸಿದ ಪಕ್ಕದ ಕೊಠಡಿಯಲ್ಲಿದ್ದ ನನ್ನ ರೇಡಿಯಾಲಜಿಸ್ಟ್ ಮಿತ್ರ ಮಗುವಿನ ಹೊಟ್ಟೆಯ ಮೇಲೆ ತನ್ನ ಅಲ್ಟ್ರಾ ಸೌಂಡಿನ ಹಿಡಿಯನ್ನು ಓಡಿಸುತ್ತಾ ಮಗುವಿನ ಪಿತ್ತಕೋಶಕಾಣಿಸುತ್ತಿಲ್ಲವೆಂಬ ಗಂಭೀರ ವಿಷಯವನ್ನು ತಿಳಿಸಿದ. ಆ ಮಗುವಿಗೆ ರಕ್ತ ಪರೀಕ್ಷೆ ಕೂಡ ಪಿತ್ತಜನಕಾಂಗದ ಚಿಂತಾಜನಕ ಪರಿಸ್ಥಿತಿಗೆ ಕನ್ನಡಿ ಹಿಡಿಯಿತು. ಆ ರೀತಿ ಕಾಯಿಲೆಗಳಿಗೆ  ಶೀಘ್ರವಾಗಿ ಶಸ್ತ್ರಚಿಕಿತ್ಸೆಯಾದಲ್ಲಿ ಮಾತ್ರ ಮಗು ಸಂಪೂರ್ಣ ಅರೋಗ್ಯವಂತನಾಗಿ ಬಾಳುವ ಸಾಧ್ಯತೆಯಿತ್ತು.

ನನ್ನ ಬಳಿಗೆ ಚೆಂಡು ಬಂದು ತಲುಪಿದಾಗ ಕೊಂಚ ತಡವಾಗಿತ್ತು. ಸರಿಯಾದ ಆಟಗಾರನಿಗೆ ಶೀಘ್ರವಾಗಿ ಪಾಸ್‌ಕೊಡುವುದು ಇಂತಹ ಗಂಭೀರವಾದ ಕಾಯಿಲೆಗಳನ್ನು ಸೋಲಿಸುವುದರಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಅ ಮಗುವಿನ ಪಿತ್ತಜನಕಾಂಗದ  ಹೆಚ್ಚಿನ ವಿವರಗಳಿಗಾಗಿ ಬೇರೆ ಆಧುನಿಕ ಪರೀಕ್ಷೆಗಳ ಅವಶ್ಯಕತೆಯಿತ್ತು. ಜೊತೆಗೆ ಮಕ್ಕಳ ಪಿತ್ತಕೋಶದ ಮೇಲೆ ಶಸ್ತ್ರಚಿಕಿತ್ಸೆ ಮಾಡಿ ಅನುಭವವಿರುವರಿಗೆ ತುರ್ತಾಗಿ ಪಾಸು ಕೊಡುವ ಅಗತ್ಯವಿತ್ತು. ಅವರಿಗೆ ಆಯುಷ್ಮಾನ್ ಭಾರತ್ ವ್ಯವಸ್ಥೆಯಿದ್ದ ಕಾರಣ ಅವರು ಬಡವರಾಗಿದ್ದರೂ ಐದು ಲಕ್ಷದತನಕ ಉಚಿತ ಚಿಕಿತ್ಸೆ ಪಡೆಯಬಲ್ಲರೆಂಬುದು ಮಾತ್ರ ನನಗೆ  ಅಲ್ಲಿ ಕಂಡು ಬಂದ ಏಕೈಕ ಸಕಾರಾತ್ಮಕ ಅಂಶ. ಇನ್ನೂ ಸ್ವಲ್ಪ ಬೇಗ ಪಾಸ್ ಬಂದಿದ್ದರೆ , ಮಗುವಿಗೆ ಎಷ್ಟು ಒಳಿತಾಗುತ್ತಿತ್ತು ಎನ್ನುವ ವಿಷಾದ ಮಾತ್ರ ಅವರು ಹೋದ ಮೇಲೂ ನನ್ನೊಳಗಿತ್ತು. ನಾನು ಸರಿಯಾದ ಜಾಗಕ್ಕೆ ಪಾಸ್‌ಕೊಟ್ಟಿದ್ದರೂ ಅದು ಎಷ್ಟರ ಮಟ್ಟಿಗೆ ಸಫಲವಾಗುವುದೆಂಬ ಅನುಮಾನವಿದ್ದ ಕಾರಣ, ಪೆನಾಲ್ಟಿ ಶೂಟೌಟಿನಲ್ಲಿ ವಿಫಲನಾದ ಆಟಗಾರನಂತೆ ನಾನು ನಿಸ್ತೇಜನಾಗಿಕೂತಿದ್ದೆ. ಮಗುವಿನ ವಿಷಯ ಗಂಭೀರವಾಗಿದೆಯೆಂದು ಹೇಳಿದಾಗ ಮಗುವನ್ನು ಬಿಸಿಲಿಗೆ ಹಿಡಿಯುತ್ತಿದ್ದ ಅಜ್ಜಿಯ ಮುಖ ಕೂಡ ಬಿಸಿಲಿಗೆ ಬಾಡಿದಂತಿತ್ತು. ○







**ಡಾ.ಅಶೋಕ ಗೋಧಿ**
ಶಸ್ತ್ರ ಚಿಕಿತ್ಸಾ ಪ್ರಾಧ್ಯಾಪಕರು, ವಿಶ್ರಾಂತ ಪ್ರಾಂಶುಪಾಲರು
ಜ. ನೆ. ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾವಿ

ವೈದ್ಯೇತರ....

# ವಿಶ್ವಾಸ ಮತ್ತು ವೈದ್ಯಕೀಯ ವೃತ್ತಿ

ಸಾಮಾಜಿಕ ಜೀವನದ ಅನೇಕ ಕ್ಷೇತ್ರಗಳಲ್ಲಿ ಕಂಡು ಬರುವ ವಿಶ್ವಾಸಾರ್ಹತೆಯ ಕೊರತೆ ವೈದ್ಯಕೀಯ ಕ್ಷೇತ್ರವನ್ನೂ ಕೂಡ ಆವರಿಸಿಕೊಂಡಿದೆ. ವಿಶ್ವಾಸದ ಪ್ರಯೋಜನಗಳು ಮತ್ತು ಅದರ ದುರುಪಯೋಗ, ಅವಿಶ್ವಾಸದ ಕಾರಣಗಳು ಮತ್ತು ಪರಿಣಾಮಗಳು ಹೀಗೆ ವಿಶ್ವಾಸದ ವಿವಿಧ ಮುಖಗಳನ್ನು ವೈದ್ಯಕೀಯ ಕ್ಷೇತ್ರದಲ್ಲಿ ಕಾಣಬಹುದು. ರೋಗಿಯ ಉಪಚಾರದಲ್ಲಿ ವಿಶ್ವಾಸ ಅತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ವಿಶ್ವಾಸ ಒದಗಿಸುವ ಧನಾತ್ಮಕ ಮಾನಸಿಕ ಶಕ್ತಿಯ ಸಹಾಯದಿಂದ ಶಸ್ತ್ರ ಚಿಕಿತ್ಸಕರು ಅನೇಕ ರೋಗಗಳನ್ನು ವಾಸಿ ಮಾಡುತ್ತಾರೆ.  ಇಷ್ಟು ಪ್ರಯೋಜನಕಾರಿಯಾದ ವಿಶ್ವಾಸದ ಕೊರತೆಗೆ ಕಾರಣಗಳೇನು ಮತ್ತು ಇದನ್ನು ಸರಿಪಡಿಸುವ ಉಪಾಯಗಳೇನು ಇವೇ ಮುಂತಾದ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನದ ಫಲ ಈ ಲೇಖನ.



ಮೊದಲನೆಯದಾಗಿ ವೈದ್ಯಕೀಯದ ಬಗೆಗೆ ಜನಸಾಮಾನ್ಯರಲ್ಲಿ ಮನೆ ಮಾಡಿದ ತಪ್ಪು ಗ್ರಹಿಕೆಗಳು. ವೈದ್ಯರಿಗೆ ಅಪರಿಮಿತ ತಾಳ್ಮೆ ಉಂಟು. ಎಲ್ಲ ರೋಗಗಳನ್ನು ಪ್ರಥಮ ಭೆಟಿಯಲ್ಲಿಯೇ ಗುರುತಿಸಬೇಕು. ಹೆಚ್ಚು ಕಡಿಮೆ ಎಲ್ಲ ರೋಗಗಳನ್ನು ಸಂಪೂರ್ಣ ಗುಣಪಡಿಸಲು ಸಾಧ್ಯ. ಉಪಚಾರದಲ್ಲಿ ಉದ್ಭವಿಸುವ ಎಲ್ಲ ಅಡ್ಡ ಪರಿಣಾಮಗಳಿಗೆ ವೈದ್ಯರ ಅಚಾತುರ್ಯ ಅಥವಾ ನಿಷ್ಕಾಳಜಿಯೇ ಕಾರಣ. ಎಲ್ಲ ಗೊತ್ತಿದ್ದರೂ ವೈದ್ಯರು ವಿವರಗಳನ್ನು ಬಚ್ಚಿಡುತ್ತಾರೆ. ಇವೇ ಮುಂತಾದ ಮಿತಿಮೀರಿದ ನಿರೀಕ್ಷೆಗಳಿಂದೊಡಗೂಡಿದ ತಪ್ಪು ಗ್ರಹಿಕೆಗಳು ಸರ್ವೇ ಸಾಮಾನ್ಯ. ವೈದ್ಯರೂ ಕೂಡ ಮನುಷ್ಯರೇ, ಮನುಷ್ಯರಲ್ಲಿರುವ ಇತಿ ಮಿತಿಗಳು ವೈದ್ಯರಲ್ಲಿಯೂ ಉಂಟು. ಅವರ ತಾಳ್ಮೆಗೂ ಮಿತಿಯಿದೆ. ಕೆಲವು ರೋಗ ರುಜಿನಗಳನ್ನು ಸುಲಭವಾಗಿ ಗುರುತಿಸಿ ಸಂಪೂರ್ಣ ಗುಣಪಡಿಸಬಹುದಾದರೂ, ಇನ್ನು ಕೆಲವನ್ನು ಗುರುತಿಸುವದು ಮತ್ತು ಗುಣಪಡಿಸುವದು ಕಷ್ಟ ಸಾಧ್ಯ. ಮಾನವನ ಶರೀರ ಅತ್ಯಂತ ನಿಗೂಢ ಮತ್ತು ವಿಸ್ಮಯಕಾರಿ ರಹಸ್ಯಗಳನ್ನೊಳಗೊಂಡಿದ್ದು ವೈದ್ಯ ವಿಜ್ಞಾನಿಗಳಿಗೂ ಇದು ಸಂಪೂರ್ಣ ಅರ್ಥವಾಗಿಲ್ಲ. ಕಾರಣ ತಮಗೆ ಗೊತ್ತಿದ್ದಷ್ಟನ್ನು ಮಾತ್ರ ವೈದ್ಯರು ವಿವರಿಸಬಲ್ಲರೇ ವಿನ: ಯಕ್ಷ ಪ್ರಶ್ನೆಗಳಿಗೆ ಉತ್ತರಿಸಲಾರರು. ಒಂದೇ ವ್ಯಾಧಿಯಿದ್ದ ಇಬ್ಬರು ರೋಗಿಗಳಿಗೆ ಒಬ್ಬನೇ ವೈದ್ಯ ಒಂದೇ ವಿಧದಲ್ಲಿ ಉಪಚರಿಸಿದರೂ ರೋಗಿಗಳು ಬೇರೆ ಬೇರೆ ರೀತಿಯಲ್ಲಿ ಸ್ಪಂದಿಸುತ್ತಾರೆ. ಒಬ್ಬರು ಗುಣಮುಖವಾದರೆ ಇನ್ನೊಬ್ಬರು ಅಡ್ಡ ಪರಿಣಾಮಗಳಿಂದ ಬಳಲಬಹುದು.

ವಿಶ್ವಾಸಾರ್ಹತೆಯ ಕೊರತೆಯಿಂದಾಗುವ ಪರಿಣಾಮಗಳನ್ನು ವೈದ್ಯರಷ್ಟೇ ರೋಗಿಗಳೂ ಅನುಭವಿಸಬೇಕಾಗುತ್ತದೆ. ವಾದ ವಿವಾದ, ಜಗಳ, ಆಸ್ಪತ್ರೆಗಳ ಮೇಲೆ ಹಲ್ಲೆ, ವೈದ್ಯರೊಂದಿಗೆ ಹೊಡೆದಾಟ ಬಡೆದಾಟ ಇವು ಜನ ಸಾಮಾನ್ಯರ ಆಕ್ರೋಶ ಮತ್ತು ಅವಿಶ್ವಾಸವನ್ನು ಪ್ರತಿಬಿಂಬಿಸುತ್ತವೆ. ಗ್ರಾಹಕರ ವೇದಿಕೆಗಳಲ್ಲಿ ವೈದ್ಯರ ವಿರುದ್ಧ ನಡೆಯುತ್ತಿರುವ ಅನೇಕ ವ್ಯಾಜ್ಯಗಳೂ ಕೂಡ ಇದನ್ನೇ ಸೂಚಿಸುತ್ತವೆ.



ಅವಿಶ್ವಾಸ ಸಂಶಯಕ್ಕೆಡೆ ಮಾಡಿಕೊಡುತ್ತದೆ. ರೋಗಿಗೆ ಮನದಟ್ಟು ಮಾಡಿಕೊಡುವದಕ್ಕೋಸ್ಕರ ಹೆಚ್ಚಿನ ತಪಾಸಣೆಗೆ ಒಳಪಡಿಸುವದು ಇಲ್ಲವೇ ಇನ್ನೊಬ್ಬ ತಜ್ಞ ವೈದ್ಯರ ಅಭಿಪ್ರಾಯ ಪಡೆಯುವದು, ಇವು ರೋಗಿಗಳ ಸಂಶಯ ನಿವಾರಣೆಗೆ ವೈದ್ಯರು ಅನುಸರಿಸಬೇಕಾದ ಕೆಲವು ವಿಧಾನಗಳು. ಇವುಗಳಿಂದ ವೆಚ್ಚ ಹೆಚ್ಚಿ ಚಿಕಿತ್ಸೆಯಲ್ಲಿ ವಿಳಂಬವಾಗುವ ಸಂಭವ ಇರುತ್ತದೆ. ಇನ್ನು ಕೋರ್ಟ ಕಚೇರಿಗಳಲ್ಲಿ ಮೊಕದ್ದಮೆ ಹೂಡುವ ಆಸಕ್ತಿಯ ಲಕ್ಷಣಗಳನ್ನು ಹೊಂದಿದ ರೋಗಿಗಳ ಚಿಕಿತ್ಸೆ ಮಾಡುವ ವೈದ್ಯರಿಗೆ ತಮ್ಮ ತಮ್ಮ ಅತ್ಮ ರಕ್ಷಣೆಯ ಕಡೆಗೆ ಗಮನ ಹರಿಸಬೇಕಾದ ಅನಿವಾರ್ಯತೆ ಇರುತ್ತದೆ.

ಮಾಧ್ಯಮವೂ ಕೂಡ ವೈದ್ಯಕೀಯದ ಬಗೆಗಿನ ಜನಸಾಮಾನ್ಯರ ಅಭಿಪ್ರಾಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ವೈದ್ಯಕೀಯ ವಿಜ್ಞಾನದ ಆವಿಷ್ಕಾರಗಳನ್ನು ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅಪರೂಪಕ್ಕೊಮ್ಮೆ ಘಟಿಸುವ ಅಪಘಾತಗಳನ್ನು ಬಿತ್ತರಿಸುವಾಗ ಮಾಧ್ಯಮಗಳು ಸಂಯಮದಿಂದ ವರ್ತಿಸಬೇಕು. ತಿರುಚಿದ, ಅರ್ಧಂಬರ್ಧ ತನಿಖೆ ಮಾಡಿದ ಅತಿರಂಜಿತ ವರದಿಗಳಿಂದ, ವೀಕ್ಷಕರನ್ನು/ಶ್ರೋತೃಗಳನ್ನು ಆಕರ್ಷಿಸಲು ವಿವಿಧ ತಂತ್ರಗಳನ್ನು ಬಳಸುವ ಮಾಧ್ಯಮಗಳು ಮುಗ್ಧ ಜನಸಾಮಾನ್ಯರ ಮೇಲೆ ಸಂಭವಿಸುವ ಪರಿಣಾಮಗಳ ಕಡೆಗೆ ಸ್ವಲ್ಪ ಗಮನ ಹರಿಸಬೇಕು. ಇಂಥ ವರದಿಗಳು ಲಕ್ಷಾಂತರ ವೈದ್ಯರ ಮಾನವೀಯ ಸೇವೆಗೆ ಅಪಚಾರವಲ್ಲವೇ.

ವೈದ್ಯಕೀಯದ ವಿಶ್ವಾಸಾರ್ಹತೆಯನ್ನು ಗಳಿಸಿ, ಉಳಿಸಿ ಬೆಳೆಸುವಲ್ಲಿ ವೈದ್ಯರು ಮತ್ತು ಜನಸಾಮಾನ್ಯರು ಸಹಭಾಗಿಗಳು. ವೈದ್ಯಕೀಯದ ಇತಿಮಿತಿಗಳನ್ನರಿತು, ಮಿತಿಮೀರಿದ ನಿರೀಕ್ಷೆಗಳನ್ನು ಇಟ್ಟುಕೊಳ್ಳದೆ, ವೈದ್ಯರೊಂದಿಗೆ ಚರ್ಚಿಸಿ, ರೋಗದ ಮತ್ತು ಚಿಕಿತ್ಸೆಯ ಬಗೆಗೆ ಸರಿಯಾಗಿ ತಿಳಿದುಕೊಳ್ಳುವದು ರೋಗಿಗಳ ಜವಾಬ್ದಾರಿ. ರೋಗದ ಬಗೆಗೆ ಸರಿಯಾದ ಮಾಹಿತಿ ಕೊಡುವದು, ತಮ್ಮ ಜ್ಞಾನದ ಮತ್ತು ಕೌಶಲ್ಯದ ಮಿತಿಯನ್ನು ಮೀರದಿರುವದು, ರೋಗಿಗಳ ಹಕ್ಕುಗಳಿಗೆ ಗೌರವ ತೋರಿಸುವದು, ಸುಳ್ಳು ಆಶ್ವಾಸನೆಗಳನ್ನು ಕೊಡದಿರುವದು, ಅನೈತಿಕ ವ್ಯವಹಾರದಲ್ಲಿ ತೊಡಗದೆ, ವೃತ್ತಿಧರ್ಮವನ್ನು ಕಾಪಾಡುವದು ಇವೆಲ್ಲ ವೈದ್ಯರ ಜವಾಬ್ದಾರಿಗಳು.

ಪರಸ್ಪರ ವಿಶ್ವಾಸ, ವಿಶ್ವಾಸವನ್ನು ದ್ವಿಗುಣಗೊಳಿಸುತ್ತದೆ. ಅದೇ ರೀತಿ ಅವಿಶ್ವಾಸ ಕೂಡ. ವಿಶ್ವಾಸಗಳಿಸಲು ಬಹಳ ಸಮಯ ಬೇಕು. ಅದನ್ನು ಉಳಿಸಿಕೊಳ್ಳಲು ಸತತ ಪ್ರಯತ್ನದ ಅವಶ್ಯಕತೆಯಿದೆ. ಗಳಿಸಿದ ವಿಶ್ವಾಸವನ್ನು ಕ್ಷಣಾರ್ಧದಲ್ಲಿ ಕಳೆದುಕೊಳ್ಳಬಹುದು. ಕಳೆದು ಹೋದ ವಿಶ್ವಾಸವನ್ನು ಮತ್ತೆ ಗಳಿಸುವದು ಕಷ್ಟ ಸಾಧ್ಯ. ವೈದ್ಯಕೀಯ ವೃತ್ತಿಯ ಮೇಲಿನ ಜನಸಾಮಾನ್ಯರ ವಿಶ್ವಾಸ ಮತ್ತು ರೋಗಿ ಮತ್ತು ವೈದ್ಯರ ಮಧ್ಯವಿರಬೇಕಾದ ವಿಶ್ವಾಸದ ಮಹತ್ವವನ್ನರಿತು ನಡೆದರೆ ಎಲ್ಲರಿಗೂ ಕ್ಷೇಮ.

"ನಂಬರು, ನೆಚ್ಚರು, ಬರಿದೆ ಕರೆವರು,

ನಂಬಲರಿಯರೀ ಲೋಕದ ಮನುಜರು,

ನಂಬಿ ಕರೆದಡೆ ಓ ಎನ್ನನೆ ಶಿವನು

ನಂಬದೆ ನೆಚ್ಚದೆ ಬರಿದೆ ಕರೆವರ

ಕೊಂಬ ಮೆಟ್ಟಿ ಕೂಗೆಂದ ಕೂಡಲ ಸಂಗಮದೇವ"







**ಡಾ. ಮಂಜುನಾಥ ಜಿ.ಎ.**
ಗಣೇಶ ನೇತ್ರಾಲಯ, ಸಿರಸಿ

ವೈದ್ಯೇತರ....

# ೫೦ರ ನಂತರ – ನಿರಂತರ

## (ಬದುಕಿನ ಒಂದು ಚಿಂತನೆ)

ಮನುಷ್ಯನ ಜೀವನ ಚಕ್ರವು 12 ಪ್ರಮುಖ ಹಂತಗಳಲ್ಲಿ ಸಾಗುತ್ತದೆ. ಪೂರ್ವಜನ್ಮ, ಜನ್ಮಾವಸ್ಥೆ, ಶೈಶವಾವಸ್ಥೆ, ಆರಂಭಿಕ ಬಾಲ್ಯ, ಮಧ್ಯ ಬಾಲ್ಯ, ತಡವಾದ ಬಾಲ್ಯಾವಸ್ಥೆ, ಹದಿಹರೆಯ, ಆರಂಭಿಕ ಹರೆಯತನ, ಮಧ್ಯಾವಸ್ಥೆ, ತಡವಾದ ಪ್ರೌಢಾವಸ್ಥೆ, ವೃದ್ಧಾಪ್ಯ ಮತ್ತು ಮರಣ, ಇದರಲ್ಲಿ ಯಾವ ಹಂತ ಅತ್ಯಂತ ಪ್ರಮುಖ ? ಜೀವನದ ಪ್ರತಿ ಹಂತವೂ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ, ಸತ್ಯವೇನೆಂದರೆ ಎಲ್ಲಾ ಹಂತಗಳು ಮಾನವೀಯತೆಯ ಏಳಿಗೆಗೆ ಅತ್ಯಾವಶ್ಯಕ.
ಈ ಲೇಖನದಲ್ಲಿ 50 ರ ನಂತರ ದ ಬದುಕಿನ ಆಗುಹೋಗುಗಳ ವಿಮರ್ಶೆಯ ಪ್ರಯತ್ನ ಮಾಡಲಾಗಿದೆ.



50 ರ ನಂತರದ ಘಟ್ಟ – ಇದು ನೀವು ಕೂಡಿಟ್ಟ ಹಣವನ್ನು ಉಪಯೋಗಿಸುವ ಸಮಯ. ಉಪಯೋಗಿಸಿ ಮತ್ತು ಆನಂದಿಸಿ. ನಿಮ್ಮ ತ್ಯಾಗದ ಅರಿವಿರದವರಿಗೆ ಶೇಖರಿಸಬೇಡಿ. ನೀವು ಕಷ್ಟಪಟ್ಟು ದುಡಿದ ಹಣದ ಬಗ್ಗೆ ಬಾಧ್ಯಸ್ಥರು ದುರುದ್ದೇಶ ಹೊಂದಿದ್ದರೆ ಅದಕ್ಕಿಂತ ಭಯಾನಕ ಸಂಗತಿ ಮತ್ತೊಂದಿಲ್ಲ.

ಎಚ್ಚರಿಕೆ : ಆಕರ್ಷಕವಾದರೂ ಹೂಡಿಕೆಗೂ ಇದು ಸರಿಯಾದ ಸಮಯವಲ್ಲ, ಅವು ಸಮಸ್ಯೆಗಳನ್ನು ತಂದೊಡ್ಡುತ್ತದೆ, ಇದು ಶಾಂತಿ – ನೆಮ್ಮದಿ ಬಯಸುವ ಸಮಯ.

ಮಕ್ಕಳ – ಮೊಮ್ಮಕ್ಕಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಆಲೋಚನೆ ಮಾಡಬೇಡಿ, ನಿಮ್ಮ ಸ್ವಂತಕ್ಕೆ ಖರ್ಚು ಮಾಡಲು ಹಿಂಜರಿಯಬೇಡಿ. ನೀವು ಇಷ್ಟು ವರ್ಷ ಸಾಕಷ್ಟು ಅವರ ಕಾಳಜಿ ಮಾಡಿದ್ದೀರಿ. ಒಳ್ಳೆಯ ಶಿಕ್ಷಣ, ಸಂಸ್ಕಾರ, ಸಹಕಾರ, ಆಶ್ರಯ ನೀಡಿದ್ದೀರಿ, ಇದೀಗ ಸಂಪಾದನೆ ಮಾಡುವುದು ಅವರ ಜವಾಬ್ದಾರಿ.

ಈ ವಯಸ್ಸಿನಲ್ಲಿ ಸರಿಯಾದ ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯವಶ್ಯಕ. ಒಳ್ಳೆಯ ಆಹಾರ ಸೇವನೆ, ಲಘು ವ್ಯಾಯಾಮ (ವಾಕಿಂಗ್), ಸರಿಯಾದ ಸಮಯದಲ್ಲಿ ಸಾಕಷ್ಟು ನಿದ್ರೆ ನಿಮ್ಮನ್ನು ಆರೋಗ್ಯವಾಗಿರಿಸಲು ಸಹಕಾರಿಯಾಗುತ್ತವೆ. ಆದ್ದರಿಂದ ದೈಹಿಕ ಸಮತೋಲನವನ್ನು ಕಾಪಾಡಿಕೊಳ್ಳಿ, ದೈಹಿಕ ಮತ್ತು ಮಾನಸಿಕ ಆರೋಗ್ಯದ ಕಾಳಜಿ ವಹಿಸಿ, ಕಾಲಕಾಲಕ್ಕೆ ವೈದ್ಯರನ್ನು ಸಂಪರ್ಕಿಸಿ, ಅವಶ್ಯವಿರುವ ತಪಾಸಣೆಯನ್ನು ಮಾಡಿಸಿ.

ನಿಮ್ಮ ಸಂಗಾತಿಯೊಂದಿಗೆ ಸಂತೋಷದಿಂದ ಪರಸ್ಪರರಿಗೆ ಅವಶ್ಯಕವಿರುವ ಸುಂದರವಾದ ವಸ್ತುಗಳನ್ನು ಖರೀದಿಸಿ ಆನಂದಿಸಿ. ಏಕೆಂದರೆ ಒಂದಲ್ಲ ಒಂದು ದಿನ ನಿಮ್ಮಿಬ್ಬರಲ್ಲಿ ಒಬ್ಬರು ಅಗಲುವುದು ನಿಶ್ಚಿತ. ಆಗ ಹಣದಿಂದ ನೆಮ್ಮದಿ ಸಿಗುವುದಿಲ್ಲ, ಆದ್ದರಿಂದ ಜೊತೆಯಾಗಿ ಇಬ್ಬರೂ ಆಹ್ಲಾದಿಸಿ.

ಸಣ್ಣಪುಟ್ಟ ವಿಚಾರಗಳ ಬಗ್ಗೆ ಆಲೋಚನೆ ಬೇಡ, ಈಗಾಗಲೇ ಸಾಕಷ್ಟು ಜೀವನದಲ್ಲಿ ಅನುಭವಿಸಿದ್ದೀರಿ, ಸಿಹಿ ಮತ್ತು ಕಹಿ ನೆನಪುಗಳು ಸಾಕಷ್ಟಿವೆ, ಆದರೆ ಪ್ರಸ್ತುತ ಸಮಯ ಬಹಳ ಮುಖ್ಯ, ಗತಕಾಲದ ಬಗ್ಗೆ ಆಲೋಚಿಸದಿರಿ, ಭವಿಷ್ಯದ ಬಗ್ಗೆಯೂ ಹೆಚ್ಚು ಆತಂಕ ಬೇಡ ವರ್ತಮಾನದಲ್ಲಿ ನೆಮ್ಮದಿಯಿಂದ ಬದುಕಲು ಕಲಿಯಿರಿ.

ವಯಸ್ಸಿನ ಮಿತಿಯಿಲ್ಲದೆ ಸದಾ ಪ್ರೀತಿಯಿಂದ ಬದುಕಲು ಕಲಿಯಿರಿ. ಬಾಳಸಂಗಾತಿಯನ್ನು ಪ್ರೀತಿಸಿ. ಸ್ನೇಹಿತರನ್ನು ಪ್ರೀತಿಸಿ. ನೆರೆಹೊರೆಯವರನ್ನು ಪ್ರೀತಿಸಿ. ನಿಮ್ಮನ್ನು ನೀವು ಪ್ರೀತಿಸಿ. ನೆನಪಿಡಿ "ಜಾಣ್ಮೆ ಮತ್ತು ಒಲುಮೆ ಇರುವಷ್ಟು ದಿವಸ ನಿಮಗೆ ವೃದ್ಧಾಪ್ಯ ಬರುವುದಿಲ್ಲ"

ಅಂತರಾಳ ಮತ್ತು ಬಾಹ್ಯ ಜಗತ್ತಿನ ಬಗ್ಗೆ ಹೆಮ್ಮೆಯಿಂದಿರಿ. ನಿಮ್ಮ ದೈಹಿಕ ಸೌಂದರ್ಯದ ಬಗ್ಗೆ

ಗಮನವಿರಲಿ. ಸುಗಂಧ ತೈಲ, ಅಂಗ ಲೇಪನಗಳನ್ನು ಶೇಖರಿಸಿಡಿ. ಸದೃಢ ಬಾಹ್ಯ ಸೌಂದರ್ಯ ನಿಮ್ಮನ್ನು ಧೈರ್ಯದಿಂದ ಮತ್ತು ಹೆಮ್ಮೆಯಿಂದಿರಲು ಸಹಕಾರಿಯಾಗುತ್ತದೆ.

ನಿಮ್ಮ ವಯಸ್ಸಿನ ರೀತಿ–ರಿವಾಜುಗಳ ಬಗ್ಗೆ ನಿಗಾವಹಿಸಿ. ನಿಮ್ಮ ಧಾಟಿಯನ್ನು ಬಿಡಬೇಡಿ. ಯುವಕರ ನಡುವೆ ಪ್ರಸ್ತುತ ಶೈಲಿಯನ್ನು ಬಳಸುವುದರಿಂದ ಹಿಂಜರಿಯಬೇಡಿ. ನಿಮ್ಮ ಧಾಟಿಯ ಬಗ್ಗೆ ಹೆಮ್ಮೆ ಇರಲಿ. ಸದಾ ನಿಮ್ಮನ್ನು ನೀವು ಪರಿಷ್ಕರಣೆ ಮಾಡುತ್ತಿರಿ. ದಿನಪತ್ರಿಕೆಗಳನ್ನು ಓದಿರಿ, ವಾರ್ತೆಗಳನ್ನು ನೋಡಿರಿ. ಜಗತ್ತಿನ ಆಗುಹೋಗುಗಳ ಬಗ್ಗೆ ಮಾಹಿತಿಯನ್ನು ಪಡೆಯಿರಿ. ನಿಮ್ಮ ಇ– ಮೇಲ್ ಖಾತೆಯನ್ನು ಪ್ರತಿನಿತ್ಯ ಬಳಸಿ. ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿ. ನಿಮ್ಮ ಹಳೆಯ ಗೆಳೆಯರ ಭೇಟಿ ಆಶ್ಚರ್ಯ ತರಬಹುದು, ಆನಂದವನ್ನು ಕೊಡಬಹುದು .

ಯುವ ಪೀಳಿಗೆಯನ್ನು ಮತ್ತು ಅವರ ಅನಿಸಿಕೆಗಳನ್ನು ಗೌರವಿಸಿ, ನಿಮ್ಮ ಆಲೋಚನೆಗಳು ಬೇರೆ ಆದರೂ, ಅವರೇ ಭವಿಷ್ಯದ ಜಗತ್ತನ್ನು ಮುನ್ನಡೆಸುವವರು. ಉಪದೇಶ ಮಾಡಿರಿ. ತೆಗಳಿಕೆ, ಟೀಕೆ ಬೇಡ ಅನುಭವದ ವಿವೇಕ ಇಂದಿಗೂ ಉಪಯುಕ್ತ ಎಂದು ತಿಳಿಹೇಳಿ. "ನಮ್ಮ ಕಾಲದಲ್ಲಿ" ಎಂಬ ಪದವನ್ನು ಎಂದಿಗೂ ಬಳಸಬೇಡಿ, ಇದೂ ನಿಮ್ಮ ಸಮಯವೇ! ಈ ಸಮಯದ ಭಾಗವಾಗಿದ್ದೀರಿ, ನೀವು ಜೀವಂತವಿರುವತನಕ ಇದೇ ಸಮಯದಲ್ಲಿ ಬದುಕಬೇಕು.

ಕೆಲವರು ತಮ್ಮ ಸುವರ್ಣ ವರ್ಷಗಳನ್ನು ಆಲಂಗಿಸುತ್ತಾರೆ, ಇನ್ನು ಕೆಲವರು ಬೇಸರ ಪಡುತ್ತಾರೆ. ನಿಮ್ಮ ಸಮಯವನ್ನು ಕ್ರಿಯಾಶೀಲ, ಧನಾತ್ಮಕ ಮತ್ತು ಉತ್ಸಾಹಿ ಜನರೊಂದಿಗೆ ಕಳೆಯಿರಿ. ಇದರಿಂದ ನೀವು ಹೆಚ್ಚಿನ ಸಂತೋಷವನ್ನು ಪಡೆಯಬಹುದು. ನಿರಾಸಕ್ತರ ಸಂಘ ನಿಮ್ಮನ್ನು ಇನ್ನಷ್ಟು ವಯಸ್ಕರನ್ನಾಗಿ ಮಾಡುತ್ತದೆ. ಜೀವನ ಬಹಳ ಚಿಕ್ಕದು. ನಿಮ್ಮ ಸಮಯ ಅತ್ಯಮೂಲ್ಯ ಅದನ್ನು ವ್ಯರ್ಥ ಮಾಡಬೇಡಿ.

ಸುತ್ತಲೂ ನಮ್ಮ ಕುಲದವರು ಇದ್ದರೆ ಹೆಚ್ಚು ಸುರಕ್ಷಿತ ಇದೆಯೆಂದು ಎನಿಸಬಹುದು, ಆದರೆ ನಮ್ಮ ಏಕಾಂತ ಬಹಳ ಮುಖ್ಯ. ಮಕ್ಕಳು ಮೊಮ್ಮಕ್ಕಳೊಂದಿಗೆ ಬದುಕಬೇಕು ಎಂಬ ಶರಣಾಗತಿಯ ಭಾವನೆ ಹೊಂದದಿರಿ ( ಆರ್ಥಿಕವಾಗಿ ಸ್ವತಂತ್ರರಾಗಿರಿ). ಪ್ರತಿಯೊಬ್ಬರಿಗೂ ಜೀವನದಲ್ಲಿ ವಿವಿಧತೆ ಅವಶ್ಯ. ನಿಮಗೆ ಅವರ ಸಹಾಯದ ಅವಶ್ಯಕತೆ ಇದ್ದರೆ ಮತ್ತು ನೀವು ಅವರೊಂದಿಗೆ ಬದುಕಬೇಕೆಂದರೆ ನಿರ್ಧಾರವನ್ನು ನೀವು ಮಾಡಿ .

ಹವ್ಯಾಸವನ್ನು ತ್ಯಜಿಸದಿರಿ, ಹವ್ಯಾಸ ಇಲ್ಲವಾದರೆ ಹೊಸದನ್ನು ಕಲಿಯಿರಿ. ಪ್ರಯಾಣ, ದೂರ ನಡಿಗೆ, ಅಡಿಗೆ, ನೃತ್ಯ, ಓದುವುದು, ಇತ್ಯಾದಿಗಳನ್ನು ಮಾಡಬಹುದು. ಬೆಕ್ಕು ಅಥವಾ ನಾಯಿಯನ್ನು ಸಾಕಿರಿ ಕೈತೋಟ ಮಾಡಿ. ಚದುರಂಗ, ಇಸ್ಪೀಟ್, ಕೇರಂ ಬೋರ್ಡ್, ಆಟಗಳನ್ನು ಆಡಬಹುದು. ಕಾಲಕಾಲಕ್ಕೆ ಮನೆಯಿಂದ ಹೊರ ಬನ್ನಿ, ಜನರೊಂದಿಗೆ ಸಂಭಾಷಣೆ ಮಾಡಿ. ಬಹಳ ಸಮಯದಿಂದ ಭೇಟಿಯಾಗದಿರುವ ವ್ಯಕ್ತಿಗಳನ್ನು ಬೇಟಿ ಮಾಡಿ. ವಾಯುವಿಹಾರ ಮಾಡಿ. ವಸ್ತು ಸಂಗ್ರಹಾಲಯಕ್ಕೆ, ದೇವಸ್ಥಾನಕ್ಕೆ ಭೇಟಿ ಕೊಡಿ. ಒಟ್ಟಿನಲ್ಲಿ ಮನೆಯಿಂದ ಹೊರ ಬರುವುದು ಬಹಳ ಮುಖ್ಯ.

ಸಭ್ಯರಾಗಿರಿ, ಅನಾವಶ್ಯಕ ದೂರುಗಳನ್ನು, ಖಂಡನೆಯನ್ನು ಮಾಡಬೇಡಿ. ಸ್ಥಿತಿಗತಿಗಳನ್ನು ಆದಷ್ಟು ಇದ್ದಹಾಗೆ ಒಪ್ಪಿಕೊಳ್ಳಿ. ಯಾತನೆ ಮತ್ತು ಅಸ್ವಸ್ಥತೆ ಜೊತೆಜೊತೆಯಾಗಿ ಇರುತ್ತದೆ. ಅವುಗಳನ್ನು ನಿಮ್ಮ ಜೀವನದ ಭಾಗವಾಗಿ ಸ್ವೀಕರಿಸಿ . ನಿಮ್ಮನ್ನು ಯಾರಾದರೂ ಅವಮಾನಿಸಿದ್ದರೆ ಅವರನ್ನು ಕ್ಷಮಿಸಿಬಿಡಿ, ನೀವು ಯಾರನ್ನಾದರೂ ಅವಮಾನಿಸಿದರೆ ಕ್ಷಮೆಯನ್ನು ಯಾಚಿಸಿ. ಅಪ್ರಸನ್ನತೆಯನ್ನು ನಿಮ್ಮೊಂದಿಗೆ ಎಳೆಯಬೇಡಿ, ಇವು ನಿಮ್ಮನ್ನು ಇನ್ನಷ್ಟು ದುಃಖಿತರನ್ನಾಗಿ ಮಾಡುತ್ತವೆ. ಮಹಾತ್ಮರು ಹೇಳಿದ್ದಾರೆ "ದ್ವೇಷವೆಂಬುದು ವಿಷವನ್ನು ನಮ್ಮೊಳಗೆ ಇಟ್ಟುಕೊಂಡು ನಾವು ಬೇರೆಯವರಿಗೆ ಮೃತ್ಯು ಬಯಸಿದ ಹಾಗೆ" ಅಂತಹ ವಿಷದಿಂದ ದೂರವಿರಿ. ಕ್ಷಮಿಸುವಂತವರಾಗಿ, ಕೆಟ್ಟದ್ದನ್ನು ಮರೆತು ಜೀವನದಲ್ಲಿ ಮುಂದೆ ಸಾಗಿರಿ.

ಯಾವಾಗಲೂ ನಗುತ್ತಾ ಎಲ್ಲಾ ತಳಮಳಗಳನ್ನು ದೂರಮಾಡಿ. ನೆನಪಿಡಿ, ನೀವೇ ಅದೃಷ್ಟವಂತರು ಜೀವನದಲ್ಲಿ ಇಷ್ಟು ದೂರ ಸಾಗಿ ಬಂದಿದ್ದೀರಿ, ಅದೆಷ್ಟೋ ಜನರಿಗೆ ಇದರ ಅನುಭವ ಸಿಗದು ಮತ್ತು ಜೀವನದ ಈ ಹಂತ ನೋಡುವ ಅವಕಾಶ ಸಿಗದು!!. ಆದ್ದರಿಂದ ಸಾಧ್ಯವಾದಷ್ಟು ಕ್ರಿಯಾಶೀಲರಾಗಿ, ಸಂತೋಷದಿಂದ, ಆರೋಗ್ಯದಿಂದ ಪ್ರಸ್ತುತ ಸ್ಥಿತಿಗತಿಗಳನ್ನು ಬಂದಹಾಗೆ ಇದ್ದಹಾಗೆ ಒಪ್ಪಿಕೊಂಡು ಮುಂದೆಸಾಗಿರಿ.

ಕೊನೆಯದಾಗಿ, ನಿಮ್ಮ ಜೊತೆಗಿರುವವರ ಆತ್ಮೀಯರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತದೆ. ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ ಸಮಾಜದಲ್ಲಿ ನಿಮ್ಮ ಪ್ರಾಮುಖ್ಯತೆ ಕಾಲಕ್ರಮೇಣ ಕ್ಷೀಣಿಸುತ್ತದೆ. ಆಯಾಚಿತ ಅತಿಥಿಗಳಾಗಿ ಅನಾರೋಗ್ಯಗಳು ನಿಮ್ಮ ಮನೆಗೆ ಬರುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಆರ್ಥಿಕ ಸ್ಥಿತಿಗತಿಗಳ ಪೂರ್ವಸಿದ್ಧತೆಗಳೊಂದಿಗೆ ಆರ್ಥಿಕವಾಗಿ ಸದಾ ಸ್ವತಂತ್ರರಾಗಿರಿ. ನಿವೃತ್ತಿ ಜೀವನದ ಅರ್ಥಪೂರ್ಣ ಸುಂದರ ಕ್ಷಣಗಳಿಗೆ ನಿಮ್ಮನ್ನು ಇಂದಿನಿಂದಲೇ ಅಣಿಗೊಳಿಸಿ.







**ಡಾ ಶಿವಾನಂದ ಕುಬಸದ**
ಕುಬಸದ ಆಸ್ಪತ್ರೆ, ಯಾದವಾಡ ರಸ್ತೆ,
ಮುಧೋಳ


ವ್ಯಕ್ತಿ ವಿಷಯ

# ಶತಮಾನದ ಸಾಧಕ ಡಾ. ಬಸವರಾಜ ಕೆರೂಡಿ



**ಡಾ. ದಿವ್ಯಾ ಕೆ. ಎನ್**
**ವಿಭಾಗೀಯ ಸಂಪಾದಕರು**
**ಬಳ್ಳಾರಿ**

ಶತಮಾನಕ್ಕೊಬ್ಬರು ಸಿಗುತ್ತಾರೆ, ತನ್ನ ಸುತ್ತಲಿದ್ದವರದಲ್ಲದೇ ದೂರವಿದ್ದವರ ಬದುಕನ್ನೂ ಸಹ್ಯಗೊಳಿಸುವಂಥವರು. ಕೋಟಿಗೊಬ್ಬರು ದೊರಕುತ್ತಾರೆ, ತನ್ನಿಡೀ ಬದುಕನ್ನೇ ಬೇರೆಯವರ ಸುಖ, ಸಂತೋಷಕ್ಕೆ ಧಾರೆಯೆರೆದು ಧನ್ಯತೆಯ ಪಡೆವವರು. ಅವರಂತಾಗದಿದ್ದರೂ ಅವರ ಒಡನಾಟ ದೊರಕಿದ್ದು, ಅವರ ಕಾಲಘಟ್ಟದಲ್ಲಿ ನಾವಿರುವುದೇ ನಮಗೆ ಹೆಮ್ಮೆ ನೀಡುವಂಥ ಅನ್ಯಾದೃಶ ವ್ಯಕ್ತಿತ್ವ ಪಡೆದಿರುತ್ತಾರೆ. ಅಂಥ ಅನ್ಯಾದೃಶ ವ್ಯಕ್ತಿಯೇ ಅಪ್ರತಿಮ ಸಾಧಕ, ದಣಿವರಿಯದ ವೈದ್ಯ, ನಿತ್ಯ ಕಾಯಕನಿರತ, ಪ್ರತಿಭಾ ಸಂಪನ್ನ ಶಸ್ತ್ರಚಿಕಿತ್ಸಕ, ಬಾಗಲಕೋಟೆಯನ್ನು ವೈದ್ಯಕೀಯ ಸೇವೆಗಳ ಕೇಂದ್ರವಾಗಲು ಕಾರಣಿಕರ್ತರಾದ ಡಾ. ಬಸವರಾಜ ಕೆರೂಡಿ.



ಡಾ. ಕೆರೂಡಿಯವರನ್ನು ನಾನು ಹಲವು ದಶಕಗಳಿಂದ ಬಲ್ಲೆ. 1981ರಲ್ಲಿ ವಿಜಯಪುರದ ಜಿಲ್ಲಾ ಅಸ್ಪತ್ರೆಯಲ್ಲಿ ಅವರು ಅಸಿಸ್ಟಂಟ್ ಸರ್ಜನ್ ಆಗಿದ್ದಾಗ ನಾನು ಅವರ ಮಾರ್ಗದರ್ಶನದಲ್ಲಿ ಹೌಸ್‌ಮನ್‌ಶಿಪ್ ಮಾಡಿದ್ದೆ. ಆಗಿನಿಂದ ಈ ದಿನದವರೆಗೂ ಹಲವು ಬಾರಿ ಅವರೊಂದಿಗೇ ಇದ್ದು, ಹಲವು ಬಾರಿ ಅವರ ಸಮೀಪವಿದ್ದು, ಇನ್ನೂ ಕೆಲವೊಂದು ಬಾರಿ ದೂರವಿದ್ದೂ ಸಾಮೀಪ್ಯವನ್ನನುಭವಿಸಿ ಅವರನ್ನು ಅರಿತಿದ್ದೇನೆ, ಆರಾಧಿಸಿದ್ದೇನೆ. ಅತೀ ಸಾದಾ ಸಾಮಾಜಿಕ, ಶೈಕ್ಷಣಿಕ ಹಾಗೂ ಗ್ರಾಮೀಣ ಹಿನ್ನೆಲೆಯಿಂದ ಬಂದ ವ್ಯಕ್ತಿಯೊಬ್ಬರು ಈ ಮಟ್ಟದ ಸಾಧನೆ ಮಾಡಿದ್ದನ್ನು ಗಮನಿಸಿ 'ಇದು ಸಾಧ್ಯವೇ' ಅಚ್ಚರಿಗೊಂಡಿದ್ದೇನೆ. ಸಾಧ್ಯವಾದದ್ದನ್ನು ಕಣ್ಣಾರೆ ಕಂಡು 'ಇವ ನಮ್ಮವ' ಎಂದು ಹೆಮ್ಮೆ ಪಟ್ಟಿದ್ದೇನೆ. ಸಾಧಾರಣ ವ್ಯಕ್ತಿಯೊಬ್ಬ ಅಸಾಧಾರಣ ಶಕ್ತಿಯಾಗಿ ಬೆಳೆದಿದ್ದನ್ನು, ಸಾಮಾನ್ಯ ಮನುಷ್ಯನೊಂದು ಸಂಸ್ಥೆಯಾಗಿ ತಲೆಯೆತ್ತಿ ನಿಂತಿದ್ದನ್ನು ನೋಡಿದ್ದೇನೆ. ಡಾ.ಕೆರೂಡಿಯವರ ಬದುಕೇನೂ ಸರಳ ಸೋಪಾನವಾಗಿರಲಿಲ್ಲ. ಕಲ್ಲಿನ ಮೇಲೆ ಕಲ್ಲು ಪೇರಿಸಿ, ಶ್ರಮವೆಂಬ ಸಿಮೆಂಟು ಅಂಟಿಸಿ, ಅವಿರತ ಪ್ರಯತ್ನವೆಂಬ ನಿಚ್ಚಣಿಕೆಯನಿಟ್ಟು ಕಟ್ಟಿದ ಸಮಾಜೋಪಯೋಗಿ ಮಹಲು, ಅವರದು.

1965ರಲ್ಲಿ ಆರ್ಥಿಕ, ಕೌಟುಂಬಿಕ ಸಂಕಷ್ಟದಲ್ಲಿಯೂ ಬಂಗಾರದ ಪದಕದೊಂದಿಗೆ ಎಮ್.ಬಿ.ಬಿ.ಎಸ್. ಮುಗಿಸಿದ ಬಸವರಾಜರಿಗೆ ದೊರೆತದ್ದು ಏನೂ ಸೌಲಭ್ಯಗಳಿಲ್ಲದ ಇಟಗಿ ಎಂಬ ಸಣ್ಣ ಗ್ರಾಮದಲ್ಲಿನ ಸರಕಾರೀ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯಾಧಿಕಾರಿ ಹುದ್ದೆ. ಆಗ ಕೆರೂಡಿಯವರಿಗೆ 22ರ ಹರೆಯ. ಹುಮ್ಮಸ್ಸು, ಸೇವಾ ಮನೋಭಾವವಿದ್ದ ವೈದ್ಯನಿಗೆ ಹಳ್ಳಿಯೇನು, ದಿಲ್ಲಿಯೇನು. ಹಗಲಿರುಳೂ ರೋಗಿಗಳ ಸೇವೆಯನ್ನೇ ಮೂಲಮಂತ್ರವಾಗಿಸಿಕೊಂಡ ವೈದ್ಯ ಜನಾನುರಾಗಿಯಾಗಲು ಸಮಯ ಬೇಕಾಗಲಿಲ್ಲ. ಯಾವುದೇ ಫಲಾಪೇಕ್ಷೆಯಿಲ್ಲದೇ ಮಾಡಿದ ಸೇವೆ, ಅವರಿಗೆ ದೊಡ್ಡ ಹೆಸರನ್ನು ತಂದಿತ್ತಿತು. ಒಂದು ವೈದ್ಯಕೀಯ ವಿದ್ಯಾಲಯಕ್ಕಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಿದ ಅವರ ಇಂದಿನ ಆಸ್ಪತ್ರೆ ಇದ್ದಾಗ್ಯೂ ಅವರು ಈಗಲೂ ಕೂಡ ಇಟಗಿಯನ್ನು ನೆನೆಯುತ್ತಾರೆಂದರೆ ಅವರು ಸೇವೆಗೆ ನೀಡಿದ ಮಹತ್ವದ ಅರಿವಾಗುತ್ತದೆ.

ವೈದ್ಯ ಸಂಪದ

ಅವರು ಅಲ್ಲಿದ್ದಾಗಲೇ ಬಾಳಸಂಗಾತಿಯಾಗಿ, ಸಾಧನೆಗೆ ಜೊತೆಯಾಗಿ ಒದಗಿದವರು ಡಾ. ಅನಸೂಯ ಮೇಡಂ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಶರಣರ ಮಾತಿನಂತೆ, ಬದುಕಿನಾದ್ಯಂತ ಪತಿಗೆ ಜೊತೆಯಾಗಿ, ಸರಿಸಮನಾಗಿ ಬೆರೆತವರು.

ಸರಕಾರಿ ಸೇವೆ ಮಾಡುತ್ತಲೇ ಎಮ್. ಎಸ್. ಮುಗಿಸಿದ ಡಾ.ಕೆರೂಡಿಯವರು ಆಮೇಲೆ ತಿರುಗಿ ನೋಡಿದ್ದೇ ಇಲ್ಲ. ಶಸ್ತ್ರಚಿಕಿತ್ಸೆ ಅವರ ಆತ್ಮಕ್ಕೆ ಹತ್ತಿರವಾದ ವಿಷಯ. ಹೀಗಾಗಿಯೇ ಅವರ ವೈದ್ಯಕೀಯ ಬದುಕಿನುದ್ದಕ್ಕೂ ವೈದ್ಯಕೀಯವನ್ನು ಒಂದು ತಪಸ್ಸಿನಂತೆ ಕಂಡರು. ಸರಕಾರೀ ವೈದ್ಯರಾಗಿ ಅವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಮಾಡಿದ ಲೆಕ್ಕವಿಲ್ಲದಷ್ಟು ಶಸ್ತ್ರಚಿಕಿತ್ಸೆಗಳು ಬಡರೋಗಿಗಳ ನೋವು ಶಮನದ ಮಾರ್ಗಗಳು ಹೇಗೋ ಹಾಗೇ ಕೆರೂಡಿಯವರ ತಪಸ್ಸಿನ ಭಾಗವಾಗಿದ್ದವು. ಹಗಲಿರುಳೆನ್ನದೇ ಸುತ್ತಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಭೇಟ್ಟಿ ನೀಡುತ್ತ ಅವರು ಮಾಡುತ್ತಿದ್ದ ನೂರಾರು ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳನ್ನು ಅವರ ಜೊತೆಗೆ ಇರುತ್ತಿದ್ದ ನಾನು ಗಮನಿಸಿದ್ದೇನೆ. ಸರಕಾರಿ ನೌಕರಿಯನ್ನು ಅವರೆಂದೂ ಸಮಯದ ಚೌಕಟ್ಟಿನಲ್ಲಿ ಬಂಧಿಸಿದವರಲ್ಲ. 'ರೋಗಿಗಳು ವಿಶ್ರಾಂತಿ ನೀಡಿದರೆ ಮಾತ್ರ ನನಗೆ ವಿಶ್ರಾಂತಿ, ಇಲ್ಲದಿದ್ದರೆ ನನ್ನದು ಅವಿರತ ಕರ್ತವ್ಯ' ಎಂಬುದು ಅವರ ಜೀವನದ ಧ್ಯೇಯವಾಕ್ಯ.



ವಿಜಯಪುರದಿಂದ ಬಾಗಿಲುಕೋಟೆಗೆ ವರ್ಗವಾಗಿದ್ದು ಅವರ ಜೀವನದ ಮಹತ್ವದ ತಿರುವುಗಳಲ್ಲೊಂದು. ಅದು ಕೆರೂಡಿಯವರಿಗೆ ಕರ್ಮಭೂಮಿಯನ್ನು ಒದಗಿಸುವುದರೊಂದಿಗೆ ಬಾಗಿಲುಕೋಟೆಯ ಹಾಗೂ ಸುತ್ತಲಿನ ಭಾಗದ ರೋಗಿಗಳಿಗೆ ಭಾಗ್ಯವನ್ನೇ ತೆರೆದಿತ್ತು. ಬಾಗಿಲುಕೋಟೆಯ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಲೇ ಆ ಭಾಗದ ಜನರಿಗೆ ಅವಶ್ಯವಾದ ಸುಸಜ್ಜಿತ ಆಸ್ಪತ್ರೆ ಕಟ್ಟಬೇಕೆಂಬ ಕನಸಿಗೆ ರೆಕ್ಕೆಗಳು ಮೂಡಿದವು. ಸರಕಾರೀ ಸೇವೆಗೆ ರಾಜೀನಾಮೆ ಕೊಟ್ಟು ತಮ್ಮದೇ ಒಂದು ಆಸ್ಪತ್ರೆ ನಿರ್ಮಾಣ ಮಾಡಿ ಬಡವರ ಸೇವೆಗೆ ಸಿದ್ಧವಾಗಿ ನಿಂತರು. ಹಗಲಿರುಳೂ ದುಡಿಯುವ ಹುಮ್ಮಸ್ಸು, ಹೊಸದನ್ನೆಲ್ಲ ಕಲಿಯುವ ಮನಸ್ಸು, ಮುಟ್ಟಿದ ರೋಗಿಗಳೆಲ್ಲ ಗುಣವಾಗುವ ಸಿದ್ಧಹಸ್ತ, ಮಾನವತೆಗಾಗಿ ಮಿಡಿಯುವ ಹೃದಯ ಇರಲು ಅವರ ವೈದ್ಯಕೀಯ ಬದುಕು ಯಶಸ್ಸಿನ ದಾರಿಯಲ್ಲಿ ಸಾಗಿದ್ದು ಆಶ್ಚರ್ಯವಲ್ಲ. ವೈದ್ಯಕೀಯವೆಂಬುದು ನಿಂತ ನೀರಲ್ಲ. ಅದು ದಿನೇ ದಿನೇ ಹೊಸ ಆವಿಷ್ಕಾರಗಳನ್ನು ಪಡೆಯುತ್ತ ಸಾಗುವ ಜ್ಞಾನಗಂಗೆ, ಎಂಬುದನ್ನು ಅರಿತಿದ್ದ ಹಾಗೂ ಹೊಸ ಆವಿಷ್ಕಾರಗಳನ್ನು ತಮ್ಮ ವೃತ್ತಿಯಲ್ಲಿ ಅಳವಡಿಸುವ ಸ್ವಭಾವ ಹೊಂದಿದ ಕೆರೂಡಿಯವರು ಎಲ್ಲ ಆಧುನಿಕ ಸೌಲಭ್ಯಗಳನ್ನೂ ತಮ್ಮ ಆಸ್ಪತ್ರೆಯಲ್ಲಿ ಅಳವಡಿಸತೊಡಗಿದರು.

ಬಾಡಿಗೆಗೆ ಪಡೆದ ಕಟ್ಟಡ ತಮ್ಮ ಸೇವೆಯ ವೈಶಾಲ್ಯತೆಗೆ ಸಾಲದಾದಾಗ ಸುಸಜ್ಜಿತವಾದ, ಅಂದಿನ ದಿನದ ಎಲ್ಲ ಹೊಸ ಯಂತ್ರೋಪಕರಣಗಳನ್ನು ಹೊಂದಿದ ಭವ್ಯವಾದ "ಕೆರೂಡಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ" ವೆಂಬ 'ಸಮಾಜ ಸೇವಾ ಕೇಂದ್ರ' ದಂಥ ಆಸ್ಪತ್ರೆ 1994ರಲ್ಲಿ ತಲೆ ಎತ್ತಿ ನಿಂತದ್ದು ಉತ್ತರ ಕರ್ನಾಟಕದ ವೈದ್ಯಕೀಯ ಇತಿಹಾಸದಲ್ಲಿ ಮರೆಯಲಾಗದ ಅಧ್ಯಾಯದ ಪ್ರಾರಂಭ. ಆ ದಿನಗಳಲ್ಲೇ ಸುಸಜ್ಜಿತ ಆಪರೇಶನ್ ಥಿಯೇಟರ್, ಆಧುನಿಕ ಪ್ರಯೋಗಾಲಯ, ಅಲ್ಟ್ರಾಸೌಂಡ್, ಎಂಡೋಸ್ಕೋಪಿ, ಎಕ್ಸ್ ರೇ, ಲೆಪರೋಸ್ಕೋಪಿ, ಐ.ಸಿ.ಯು. ಗಳು ಒಂದೇ ಸೂರಿನಡಿ ದೊರಕತೊಡಗಿದ್ದು ರೋಗಿಗಳಿಗೊಂದು ವರವಾಗಿ ಪರಿಣಮಿಸಿತು. ಜೊತೆಗೇ ಪತಿಪತ್ನಿಯರಿಬ್ಬರೂ ಜೊತೆಯಾಗಿ ರೋಗಿಗಳ ಬಗೆಗೆ ತೋರುತ್ತಿದ್ದ ವೈಯಕ್ತಿಕ ಕಾಳಜಿ, ನಿಖರವಾದ ರೋಗನಿದಾನ, ನೈಪುಣ್ಯದಿಂದ ಕೂಡಿದ ಶಸ್ತ್ರಚಿಕಿತ್ಸೆ ಮೇಲಾಗಿ ಜೇಬಿಗೆ ಭಾರವಾಗದ ಶುಲ್ಕ ಇತ್ಯಾದಿಗಳು ಆಸ್ಪತ್ರೆಯ ಬೆಳವಣಿಗೆಗೆ ಕಾರಣವಾದವು. ನಿತ್ಯದ ಆವಿಷ್ಕಾರಗಳಿಗೆ ತಮ್ಮನ್ನು ತೆರೆದುಕೊಳ್ಳುವ ಕೆರೂಡಿಯವರು ಬೆಳೆಯುತ್ತಲೇ ಹೋದರು, ಇನ್ನೂ ಬೆಳೆಯುತ್ತಲೇ ಇದ್ದಾರೆ.

ಉತ್ಕೃಷ್ಟವಾದುದನ್ನು ತನ್ನ ಜನರಿಗೆ ತಲುಪಿಸುವ ಪ್ರತಿಜ್ಞೆಗೆ ಬದ್ಧರಾದವರಂತೆ ಅವರು ಏನೆಲ್ಲವನ್ನೂ ತಮ್ಮ ಸಂಸ್ಥೆಯ ಅಡಿಯಲ್ಲಿ ನಿರ್ಮಿಸಿದ್ದಾರೆ. ಹೃದಯರೋಗ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ, ಕಿಡ್ನಿ ಫೌಂಡೇಶನ್, ರಕ್ತ ಭಂಡಾರ, ಸಿ.ಟಿ. ಸ್ಕ್ಯಾನ್, ಎಮ್.ಆರ್.ಐ. ಇತ್ಯಾದಿಗಳನ್ನು ಒಂದಾದ ಮೇಲೊಂದರಂತೆ ಒದಗಿಸಿದರು. ಇಲ್ಲಿ ಹೆಸರಿಸಿದ ಯಾವ ಸೌಲಭ್ಯವೂ ನಾಮಕಾವಾಸ್ತೆ ಮಾಡಿದ್ದಲ್ಲ, ರೋಗಿಗಳ ಸೇವೆಯ ಬದ್ಧತೆಗೆ ಜೋತುಬಿದ್ದು ಮನಃಪೂರ್ವಕವಾಗಿ ನಿರ್ಮಿಸಿದವುಗಳು. ಎಲ್ಲಾ ವಿಭಾಗಗಳಲ್ಲೂ ಪರಿಣಿತರನ್ನು ನೇಮಿಸಿ, ಅವರಿಗೂ ತಕ್ಕುದಾದ ಸೇವಾಸೌಲಭ್ಯಗಳನ್ನು ಒದಗಿಸಿ ಅವರನ್ನೆಂದೂ ತಮ್ಮ ಕೈಕೆಳಗಿನ ಸಿಬ್ಬಂದಿಯಂತೆ ಕಾಣದೇ ಅವರಿಗೇ ಪೂರ್ಣಸ್ವಾತಂತ್ರ್ಯವನ್ನು ನೀಡುವ ಉದಾತ್ತ ಗುಣದವರು.

ಅವರಿಗೆ ಈತನಕ ದೊರೆತ ಪ್ರಶಸ್ತಿಗಳು, ಪ್ರಮಾಣಪತ್ರಗಳು ಅಗಣಿತ. ಅವರು ಎಮ್.ಬಿ. ಬಿ.ಎಸ್. ಕಲಿಯುವಾಗ ದೊರೆತ ಚಿನ್ನದ ಪದಕದಿಂದ ಪ್ರಾರಂಭವಾದ ಗೌರವದ ಜೊತೆಗೆ, ಕರ್ನಾಟಕ ರಾಜ್ಯ ಶಸ್ತ್ರಚಿಕಿತ್ಸಕರ ಸಂಘದಿಂದ 'ಶ್ರೇಷ್ಠ ಗ್ರಾಮೀಣ ವೈದ್ಯ', ಕರ್ನಾಟಕ ವೈದ್ಯಕೀಯ ವಿದ್ಯಾಲಯ ಸುವರ್ಣ ಮಹೋತ್ಸವದ 'ಅತ್ಯುತ್ತಮ ಹಳೆಯ ವಿದ್ಯಾರ್ಥಿ' ಪ್ರಶಸ್ತಿ, ಕರ್ನಾಟಕ ರಾಜ್ಯ ಶಸ್ತ್ರಚಿಕಿತ್ಸಕರ ಸಂಘ ನೀಡಿದ 'ವೃತ್ತಿ ಸಾಧನೆ ಜೀವಮಾನ ಪ್ರಶಸ್ತಿ' , ಪ್ರೊ. ಆರ್.ಎಚ್.ಎನ್. ಶೆಣಾಯ್ ' ವೃತ್ತಿ ಶ್ರೇಷ್ಠತೆ' ಪ್ರಶಸ್ತಿ, ಮುಂತಾದವುಗಳಲ್ಲದೇ ಇವೆಲ್ಲಕ್ಕೂ ಮುಕುಟಪ್ರಾಯವಾಗಿ 2010ರಲ್ಲಿ ಕರ್ನಾಟಕ ಸರಕಾರದ 'ರಾಜ್ಯೋತ್ಸವ ಪ್ರಶಸ್ತಿ' ದೊರೆತದ್ದು. ಆದರೆ ಇವೆಲ್ಲವುಗಳನ್ನು ಹೊಂದಿಯೂ ಕೆರೂಡಿಯವರ ಮುಖದಲ್ಲಿ ಸದಾ ಕಾಣುವ ನಮ್ರತೆ, ಯಾವ ಬಿಂಕೂ ಇಲ್ಲದ ನಡೆ, 'ಎನಗಿಂತ ಕಿರಿಯರಿಲ್ಲ' ಎಂಬ ಸ್ವಭಾವ ಅವರ ಸಾಧನೆಗಳಿಗೆ ಗೌರವಪೂರ್ಣ ಮೆರುಗು ನೀಡುತ್ತವೆ. ಕೋಟಿ ಜನರಲ್ಲಿ ಇವರೊಬ್ಬ ಬೇರೇನೇ, ಎನಿಸುವಂಥ ಭಾವ ಮೂಡಿಸುತ್ತವೆ. ಇವೆಲ್ಲ ಇದ್ದೂ ಕೂಡ ಗುಣಮುಖರಾದ ರೋಗಿಗಳ ತೃಪ್ತಿ ಹಾಗೂ ತಮಗೆ ದೊರೆಯುವ ಆತ್ಮತೃಪ್ತಿಯಲ್ಲದೇ ಬೇರೇನೂ ಬಯಸದವರು ಡಾ. ಬಸವರಾಜ ಕೆರೂಡಿ.

ಇವೆಲ್ಲವುಗಳ ಜೊತೆಗೇ ಅವರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರು ಮಾಡಿದ ಉಚಿತ ಶಸ್ತ್ರಚಿಕಿತ್ಸೆಗಳು ಲೆಕ್ಕವಿಲ್ಲದಷ್ಟು. ಅವರ ಆಸ್ಪತ್ರೆಯ ಅನೇಕ ಹಾಸಿಗೆಗಳನ್ನು ಅವರು ಉಚಿತ ಸೇವೆಗಾಗಿಯೇ ಮೀಸಲಿಟ್ಟಿದ್ದಾರೆ. ಪ್ರತಿವರ್ಷ ಅನೇಕ ಉಚಿತ ಸೇವಾಶಿಬಿರಗಳನ್ನು ಏರ್ಪಡಿಸುವುದು ಅವರ ನಿರಂತರ ಸೇವಾಕಾರ್ಯ. ಹೊಸದಾಗಿ ಬಂದ ವೈದ್ಯರಿಗೆ ಕೆರೂಡಿಯವರಂಥ ಗುರು ಇನ್ನೊಬ್ಬರಿಲ್ಲ. ಹೊಸ ಸರ್ಜನ್‌ಗಳಿಗೆ ಧೈರ್ಯ ತುಂಬಿ ಅವರಿಗೆ ಶಸ್ತ್ರಚಿಕಿತ್ಸೆ ಕಲಿಸುವುದು ಅವರ ಹವ್ಯಾಸಗಳಲ್ಲೊಂದು. ಹೀಗೆ ಅವರಿಂದ ಕಲಿತು ಯಶಸ್ವಿ ವೈದ್ಯರಾದವರ ಪಟ್ಟಿಯೇ ಇದೆ. ಅವರಲ್ಲಿ ನಾನೂ ಒಬ್ಬ ಎಂಬ ಹೆಮ್ಮೆ ನನ್ನದು. ಬಾಗಿಲುಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದವರು ವೈದ್ಯಕೀಯ ವಿದ್ಯಾಲಯಕ್ಕೆ ಅನುಮತಿ ಕೇಳಿದಾಗ ಇನ್ಸ್‌ಪೆಕ್ಶನ್‌ಗೆ ಬಂದ ಮೆಡಿಕಲ್ ಕೌನ್ಸಿಲ್‌ನವರಿಗೆ ತಮ್ಮ ಖಾಸಗಿ ಆಸ್ಪತ್ರೆಗೇ ಬಸವೇಶ್ವರ ಸಂಘದ ಆಸ್ಪತ್ರೆ, ಎಂದು ಬೋರ್ಡ ಹಾಕಿ ತೋರಿಸಿ ತಮ್ಮ ಉದಾತ್ತತೆಯನ್ನು ಮೆರೆದವರು. ಕೌನ್ಸಿಲ್ನವರು ಹಾಗೆ ಬಾಂಡ್ ಬರೆದುಕೊಡಿ, ಎಂದರೆ ಯಾವುದೇ ಹಿಂಜರಿಕೆಯಿಲ್ಲದೇ ತಮ್ಮ ಆಸ್ಪತ್ರೆಯನ್ನೇ ಸಂಘಕ್ಕೇ ಬಿಟ್ಟುಕೊಟ್ಟ ಹಾಗೆ ಬಾಂಡ್ ನೀಡಿಬಿಟ್ಟಿದ್ದರು, ಅದೂ ತಮ್ಮ ಆಸ್ಪತ್ರೆಗೇ ಪ್ರತಿಸ್ಪರ್ಧಿಯಾಗಬಹುದಾದ ವೈದ್ಯಕೀಯ ವಿದ್ಯಾಲಯಕ್ಕೇ!! ಅದಕ್ಕೇ ಖ್ಯಾತ ಗ್ಯಾಸ್ಟ್ರೋಎಂಟರಾಲಾಜಿಸ್ಟ್ ಡಾ. ನಾಗೇಶ್ವರರೆಡ್ಡಿಯವರು ಬಾಗಿಲುಕೋಟೆಗೆ ಬಂದಾಗ ' ಡಾ.ಕೆರೂಡಿಯವರು ಬಾಗಿಲುಕೋಟೆಗೆ ದೇವರು ಕೊಟ್ಟ ಮಹಾನ್ ವರ..!!' ಎಂದು ಉದ್ಗರಿಸಿದ್ದರು. ನಮ್ಮ ಹೆಮ್ಮೆಯ ವೈದ್ಯ ಡಾ. ಸ.ಜ. ನಾಗಾಲೋಟಿಮಠರವರು ' ಡಾ. ಕೆರೂಡಿಯವರನ್ನು ವೈದ್ಯಕೀಯ ಉಪಕರಣಗಳೇ ಹಿಂಬಾಲಿಸುತ್ತವೆ' ಅಂದಿದ್ದರು. ಹೀಗೆ ತಮ್ಮ ನಿಸ್ವಾರ್ಥ ಸೇವೆ, ಪ್ರಾಮಾಣಿಕ ನಿಲುವು, ಕರ್ತವ್ಯ ಪ್ರಜ್ಞೆ , ಸಹೃದಯತೆ, ಮೃದು ನುಡಿ, ಅಪ್ರತಿಮ ನಡೆ, ವೈದ್ಯಕೀಯ ಸಂಶೋಧನೆಗಳಿಂದ ಜನರ ಹೃದಯ ಗೆದ್ದವರು, ಡಾ.ಬಸವರಾಜ ಕೆರೂಡಿಯವರು.

ಈಗ ಒಂದು ವಾರದ ಹಿಂದೆ ಅವರನ್ನು ಕಾಣಲು ಹೋಗಿದ್ದೆ. ಮೊನ್ನೆ ತಾನೇ ತಮ್ಮ 79ನೆಯ ಜನ್ಮದಿನವನ್ನಾಚರಿಸಿದ ಕೆರೂಡಿಯವರು ಓ.ಪಿ.ಡಿ.ಯಲ್ಲಿ ರೋಗಿಗಳ ಮಧ್ಯೆ ಕುಳಿತಿದ್ದರು. ಒಮಿಕ್ರಾನ್‌ನ ಹೆದರಿಕೆಯಿಂದ ಅರವತ್ತು ತುಂಬಿದ ಅನೇಕ ವೈದ್ಯರು ಮನೆಯಲ್ಲಿ ಕುಳಿತಿರುವಾಗ ಹಲವು ದಶಕ ಹಗಲಿರುಳೂ ದುಡಿದ ಇವರು ರೋಗಿಗಳ ನೋವು ಅರಿಯಲು ಕುಳಿತಿದ್ದು ಅವರ ಕಾಯಕನಿಷ್ಠೆಗೆ ಸಾಕ್ಷಿಯಾಗಿತ್ತು. ಅವರ ಬದ್ಧತೆಗೆ ನಮಿಸಿ ನಿಂತೆ

## ಪದಕೋಶ:

**ಬುಲೀಮಿಯಾ:** ಹಸಿವು ಹೆಚ್ಚಾಗುವ ರೋಗ, ಇತಿ ಮಿತಿ ಇಲ್ಲದೆ ಆಹಾರವನ್ನು ಸೇವಿಸುತ್ತಾನೆ.

**ಕೈರೊಪೊಡಿ:** ಪಾದ ಚಿಕಿತ್ಸೆ, ಪಾದಕ್ಕೆ ಸಂಬಂಧ ಪಟ್ಟ ಕಾಯಿಲೆ.

**ಅರ್ಭಕ:** ಕೂಸು, ಮರಿ.

**ಅರ್ಬುದ:** ಕರುಳು ಹುಣ್ಣು, ಹಲ್ಲು ಬೇನೆ ಚುಚ್ಚುಗ ಹಾವು ಹತ್ತು ಕೋಟಿ.



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

### ವೈದ್ಯ ಲೋಕದ ವಿಸ್ಮಯಗಳು...

# ಮಕ್ಕಳ ಹೆಣಗಳ ಮೇಲೆ ಶ್ರೀಮಂತರಾದವರ ಕಥೆ

ನನ್ನಮ್ಮ ಸತ್ತಾಗ ನಾನಿನ್ನು ಬಲುಬಲು ಚಿಕ್ಕವ

ತೊದಲುವ ನನ್ನ ಮಾರಿದ ನನ್ನಪ್ಪ ಬಿಡಿಗಾಸಿಗೆ

ಗುಡಿಸುವೆ ಗುಡಿಸುವೆ ಚಿಮಣಿಯ ಗುಡಿಸುವೆ

ಮಸಿಯಲ್ಲೇ ಮಲಗುವೆ ಕನಸನು ಕಾಣುವೆ

ಸುಂದರ ಗುಂಗುರು ಕೂದಲ ತಮ್ಮನ

ಬೋಳಿಸಿ ಬಿಟ್ಟರು...



ಇದು ವಿಲಿಯಂ ಬ್ಲೇಕ್ (1757–1827) ಬರೆದ ಕವನ 'ದಿ ಚಿಮ್ನಿ ಸ್ವೀಪರ್'. ಬ್ಲೇಕ್ ಇದನ್ನು ಎರಡು ಭಾಗಗಳಲ್ಲಿ ಬರೆದ. 1789ರಲ್ಲಿ ಬರೆದ 'ಸಾಂಗ್ಸ್ ಆಫ್ ಇನ್ನೋಸೆನ್ಸ್' ಎನ್ನುವ ಸಂಕಲನದಲ್ಲಿ ಮೊದಲನೆ ಭಾಗವು ಹಾಗೂ 1794ರಲ್ಲಿ ಪ್ರಕಟವಾದ 'ಸಾಂಗ್ಸ್ ಆಫ್ ಎಕ್ಸ್ ಪೀರಿಯನ್ಸ್' ಎನ್ನುವ ಸಂಕಲನದಲ್ಲಿ ಎರಡನೆಯ ಭಾಗವು ಪ್ರಕಟವಾಯಿತು. ಇವು 17–18ನೆಯ ಶತಮಾನದ ಲಂಡನ್ ನಗರದ ಬದುಕಿನ ಸ್ಪಷ್ಟ ಚಿತ್ರವನ್ನು ನೀಡುವ ಅಪರೂಪದ ಕವನಗಳು.

ಲಂಡನ್ ನಗರದ ಉಷ್ಣತೆಯು ಸಾಮಾನ್ಯವಾಗಿ 9 ಡಿಗ್ರೀ – 23 ಡಿಗ್ರಿಗಳ ನಡುವೆ ಇರುತ್ತದೆ. ಡಿಸೆಂಬರಿನಿಂದ ಫೆಬ್ರವರಿವರೆಗಿನ ಚಳಿಗಾಲದಲ್ಲಿ ಉಷ್ಣತೆಯು ಮತ್ತಷ್ಟು ಕಡಿಮೆಯಾಗಬಹುದು. ಹಾಗಾಗಿ ಪ್ರತಿಯೊಂದು ಮನೆಯಲ್ಲಿ, ಇಡೀ ಮನೆಯನ್ನು ಬೆಚ್ಚಗಿಡಲು ಒಂದು ಗೂಡೊಲೆ/ಅಗ್ಗಿಷ್ಟಿಕೆ ಇರುತ್ತಿತ್ತು. ಈ ಗೂಡೊಲೆಯಲ್ಲಿ ಕಲ್ಲಿದ್ದಲನ್ನು ಸುಡುತ್ತಿದ್ದರು. ಕಲ್ಲಿದ್ದಿಲಿನಿಂದ ಹೊರಬರುತ್ತಿದ್ದ ಶಾಖವು ಮನೆಯನ್ನು ಬೆಚ್ಚಗೆ ಇಡುತ್ತಿತ್ತು. ಕಲ್ಲಿದ್ದಲನ್ನು ಉರಿಸುತ್ತಿದ್ದಾಗ ಹೊರಬರುತ್ತಿದ್ದ ಹೊಗೆಯನ್ನು ಹೊರಗೆ ಸಾಗಿಸಲು ಎತ್ತರದ ಹೊಗೆಗೂಡು ಅಥವ ಚಿಮಣಿಗಳನ್ನು ಕಟ್ಟಿಸಿದ್ದರು.

ಹೊಗೆ ಚಿಮಣಿಗಳು ಎತ್ತರವಾಗಿದ್ದು ಹೊಗೆಯನ್ನು ಹೊರ ಸಾಗಿಸುತ್ತಿದ್ದವಾದರೂ, ಆ ಚಿಮಣಿಗಳ ವ್ಯಾಸ ಮಾತ್ರ ಬಹಳ ಕಿರಿದಾಗಿರುತ್ತಿದ್ದವು. ಹಾಗಾಗಿ ಆಗಾಗ್ಗೆ ಈ ಚಿಮಣಿಗಳಲ್ಲಿ ಕಲ್ಲಿದ್ದಲ ಮಸಿ ಕಟ್ಟಿಕೊಳ್ಳುತ್ತಿತ್ತು. ಈ ಮಸಿಯನ್ನು ತೆಗೆಯುವುದು ತುಂಬಾ ಕಷ್ಟದ ಕೆಲಸವಾಗಿತ್ತು. ಹಾಗಾಗಿ ಹೊಗೆಗೂಡುಗಳಲ್ಲಿ ಕಟ್ಟಿದ್ದ ಮಸಿಯನ್ನು ಹೆರೆದು ತೆಗೆಯುವ ಒಂದು ಹೊಸ ಉದ್ಯೋಗವು ಸೃಷ್ಟಿಯಾಯಿತು. ಗೂಡುಗಳ ಒಳಗೆ ಇಳಿದು ಮಸಿಯನ್ನು ಹೆರೆಯಬೇಕಾಗಿದ್ದ ಕಾರಣ, ಗುತ್ತಿಗೆದಾರರು 5–6 ವರ್ಷದ ಬಡ ಹುಡುಗ–ಹುಡುಗಿಯರನ್ನು ಮಾರುಕಟ್ಟೆಯಲ್ಲಿ ಕೊಳ್ಳುತ್ತಿದ್ದರು. ಹೌದು. ಕೊಳ್ಳುತ್ತಿದ್ದರು. ದಿ ಚಿಮ್ನಿ ಸ್ವೀಪರ್ ಕವನದ ನಾಯಕನಾಗಿರುವ ಹುಡುಗನೇ ಹೇಳುವ ಹಾಗೆ, ಅವನಮ್ಮ ಸತ್ತಕೂಡಲೇ, ಅವನಪ್ಪ ಈ ಹುಡುಗನನ್ನು ಮಾರಿಬಿಟ್ಟನಂತೆ! ಇಂತಹ ಹುಡುಗರನ್ನು ಕೊಳ್ಳುತ್ತಿದ್ದ ಗುತ್ತಿಗೆದಾರರು ಮಕ್ಕಳ ತಲೆಯನ್ನು ಬೋಳಿಸಿ, ಮೈಮೇಲಿನ ಉಡುಪನ್ನೆಲ್ಲ ಕಳಚಿ, ಅವರನ್ನು ನಗ್ನವಾಗಿಸಿ, ಹೊಗೆ ಗೂಡುಗಳ ಒಳಗೆ ಇಳಿಬಿಡುತ್ತಿದ್ದರು. ಆ ಮಕ್ಕಳು ಮಸಿಯನ್ನೆಲ್ಲ ಹೆರೆದು ಹೆರೆದು ತೆಗೆಯಬೇಕಾಗಿತ್ತು. ಹೀಗೆ ಹೆರೆಯುವಾಗ ಅಕಸ್ಮಾತ್ ಜಾರಿ ಬಿದ್ದರೆ, ಅವರು ಸಾಯುವುದು ಅನಿವಾರ್ಯವಾಗಿತ್ತು. ಹಾಗೆ ಸತ್ತವರು ಹಲವರು. ಕೆಲವು ಸಲ ಮಸಿ ತುಂಬಿಕೊಂಡು ಉಸಿರುಕಟ್ಟಿ ಸಾಯುತ್ತಿದ್ದರು. ಹಾಗೆ ಸತ್ತ ಹುಡುಗರನ್ನು ಗುತ್ತಿಗೆದಾರರು ಎಳೆದು ಆ ಕಡೆ ಎಸೆಯುತ್ತಿದ್ದರು. ಮತ್ತಷ್ಟು ಹುಡುಗರನ್ನು ಕೊಂಡುಕೊಳ್ಳುತ್ತಿದ್ದರು. ಹಣವನ್ನು ಮಾಡಿಕೊಳ್ಳುತ್ತಿದ್ದರು. ಹೀಗೆ ಹುಡುಗರ ಹೆಣಗಳ ಮೇಲೆ ಶ್ರೀಮಂತರಾಗುತ್ತಿದ್ದರು.

ಬೆಳಿಗ್ಗೆಯಿಂದ ಸಂಜೆಯವರೆಗೆ ಹೊಗೆಗೂಡನ್ನು ಸ್ವಚ್ಛಮಾಡಿದ ಮೇಲೆ, ಈ ಮಕ್ಕಳಿಗೆ ಸ್ನಾನ ಮಾಡಲು ಅವಕಾಶವಿರುತ್ತಿರಲಿಲ್ಲ. ಹಾಗಾಗಿ ಅವರು ಆ ಮಸಿಯಲ್ಲಿಯೇ ಮಲಗಬೇಕಾಗಿತ್ತು. ಹೀಗೆ ಕಲ್ಲಿದ್ದಲ ಮಸಿಯು ಆ ಹುಡುಗರ ಮೈಮೇಲೆ ತಿಂಗಳುಗಟ್ಟಲೆ, ವರ್ಷಗಟ್ಟಲೇ ಇರುತ್ತಿದ್ದ ಕಾರಣ, ಅದು ತನ್ನ ದುಷ್ಪ್ರಭಾವವನ್ನು ಬೀರುತ್ತಿತ್ತು. ಇದರಿಂದ ಆ ಮಕ್ಕಳ ಮೂಗು ಮತ್ತು ಬೀಜಚೀಲಗಳ ಮೇಲೆ ಗಂಟುಗಳು ಏಳುತ್ತಿದ್ದವು. ಹುಣ್ಣಾಗುತ್ತಿದ್ದವು. ಆ ಹುಣ್ಣಿನಲ್ಲಿ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳು ಬೆಳೆದು ಕೊಳೆಯುತ್ತಿದ್ದವು. ಯಾವುದೇ ಚಿಕಿತ್ಸೆಗೆ ಬಗ್ಗದ ಈ ಹುಣ್ಣುಗಳು ಆ ಹುಡುಗರನ್ನು ಬಲಿ ತೆಗೆದುಕೊಳ್ಳುತ್ತಿದ್ದವು. ಯಥಾಪ್ರಕಾರ ಗುತ್ತಿಗೆದಾರರು ಮತ್ತಷ್ಟು ಹುಡುಗರನ್ನು ಕೊಂಡುಕೊಂಡು ತಮ್ಮ ವೃತ್ತಿಯನ್ನು ಮುಂದುವರೆಸುತ್ತಿದ್ದರು.



ಚಿಮಣಿ ಸ್ವಚ್ಛಗೊಳಿಸುವ ಬಾಲಕರ ಬೀಜಚೀಲದಲ್ಲಿ ಯಾಕೆ ಗಂಟುಗಳು ಕಾಣಿಸಿಕೊಳ್ಳುತ್ತವೆ, ಯಾಕೆ ಅವು ಗುಣವಾಗುವುದಿಲ್ಲ, ಯಾಕೆ ಅವು ಮಕ್ಕಳ ಸಾವಿಗೆ ಕಾರಣವಾಗುತ್ತವೆ ಎಂಬ ವಿಚಾರವಾಗಿ ಯಾರೂ ತಲೆಯನ್ನು ಕೆಡಿಸಿಕೊಂಡಿರಲಿಲ್ಲ. ಕೊನೆಗೆ ಲಂಡನ್ನಿನ ಸೈಂಟ್ ಬಾರ್ಥಲೋಮ್ಯೂ ಆಸ್ಪತ್ರೆಯ ಪರ್ಸಿವಾಲ್ ಪಾಟ್ (1714–1788) ಎನ್ನುವ ಇಂಗ್ಲಿಷ್ ಸರ್ಜನ್ ಇದನ್ನು ಗಮನಿಸಿದ. ಆತನು ಈ ಬೀಜಚೀಲ ಗಂಟಿನ ಬಗ್ಗೆ ವಿಶೇಷವಾಗಿ ಅಧ್ಯಯನವನ್ನು ಮಾಡಿದ. ಈ ಗಂಟು ಕ್ಯಾನ್ಸರ್ ಎನ್ನುವುದನ್ನು ನಿರೂಪಿಸಿದ. ಇದನ್ನು 'ಚಿಮ್ನಿ ಸ್ವೀಪರ್ಸ್ ಕ್ಯಾನ್ಸರ್/ಕಾರ್ಸಿನೋಮ' ಎಂದು ಕರೆದ. ಕಲ್ಲಿದ್ದಲ ಮಸಿಯು ಒಂದು ಪ್ರಬಲ 'ಕ್ಯಾನ್ಸರ್ ಕಾರಕ' (ಕಾರ್ಸಿನೋಜೆನಿಕ್) ಎನ್ನುವುದಕ್ಕೆ ಋಜುವಾತನ್ನು ಒದಗಿಸಿದ. ಎಳೆಯ ಮಕ್ಕಳನ್ನು ಚಿಮಣಿ ಸ್ವಚ್ಛಗೊಳಿಸಲು ಬಳಸಿಕೊಳ್ಳುವುದು ಅಮಾನವೀಯ ಎಂದ. ಮಕ್ಕಳನ್ನು ಇಂತಹ ಕೆಲಸಗಳಿಗೆ ಬಳಸಿಕೊಳ್ಳದಂತೆ ತಡೆಗಟ್ಟುವ ಹೊಸ ಕಾನೂನನ್ನು ತರುವುದರಲ್ಲಿ ಯಶಸ್ವಿಯಾದ.

ಪರ್ಸಿವಾಲ್ ಪಾಟ್, ಹೀಗೆ ಜಗತ್ತಿನ ಮೊತ್ತಮೊದಲ ವೃತ್ತಿಸಂಬಂಧಿತ ಕ್ಯಾನ್ಸರ್ (ಆಕ್ಯುಪೇಷನಲ್ ಕ್ಯಾನ್ಸರ್) ಕಂಡುಹಿಡಿದ. ಆನಂತರ, ವೃತ್ತಿಗೆ ಸಂಬಂಧಿಸಿದ ಹಲವು ಕ್ಯಾನ್ಸರ್‌ಗಳ ಜೊತೆಯಲ್ಲಿ ವೃತ್ತಿ ಸಂಬಂಧಿತ ಅನಾರೋಗ್ಯಗಳ ಬಗ್ಗೆ ಒಂದು ಹೊಸ ಜಾಗೃತಿಯು ಬೆಳೆಯಲು ಕಾರಣನಾದ. ಔದ್ಯೋಗಿಕ ವೈದ್ಯಕೀಯಕ್ಕೆ ಹೆಚ್ಚು ಹೆಚ್ಚು ಮಾನ್ಯತೆಯು ದೊರೆಯಿತು. ಅದೊಂದು ಪ್ರತ್ಯೇಕ ವೈದ್ಯಕೀಯ ಶಾಖೆಯಾಗಿ ಬೆಳೆಯಿತು. ○

ವೈದ್ಯಸಂಪದ



ವಿದ್ಯಾರ್ಥಿ ಲೋಕ

# ಪ್ರತಿಭಾ ಪಲಾಯನ

**ಆಶಿಕಾ**
ವೈದ್ಯಕೀಯ ವಿದ್ಯಾರ್ಥಿನಿ (ದ್ವಿತೀಯ ವರುಷ)
ಎಸ್ ಎಸ್ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ,, ದಾವಣಗೆರೆ.



**ಡಾ ಉಮಾಮಹೇಶ್ವರಿ**
ವಿಭಾಗೀಯ ಸಂಪಾದಕರು
ಬಳ್ಳಾರಿ

ರಾಜನಾದವನಿಗೆ ತನ್ನ ರಾಜ್ಯದಲ್ಲಿ ಮಾತ್ರ ಗೌರವ ಸಿಗುತ್ತದೆ. ಆದರೆ ವಿದ್ಯಾವಂತರಿಗೆ ಸರ್ವತ್ರ ಮಾನ್ಯತೆ ಇರುತ್ತದೆ.

ಹಿಂದಿನ ವಿದ್ಯಾಭ್ಯಾಸಕ್ಕೂ ಇಂದಿನ ವಿದ್ಯಾಭ್ಯಾಸಕ್ಕೂ ಬಹಳಷ್ಟು ಅಂತರವಿದೆ, ಉದ್ದೇಶದಲ್ಲೂ ವ್ಯತ್ಯಾಸವಿದೆ ಹಿಂದೆ ಗುರುಕುಲ ಪದ್ಧತಿ ಇತ್ತು. ಜ್ಞಾನಾರ್ಜನೆಗಾಗಿ ವಿದ್ಯೆ ಕಲಿಯುತ್ತಿದ್ದನ್ನು ನಾವು ರಾಮಾಯಣ, ಮಹಾಭಾರತದಲ್ಲಿ ಕಾಣುತ್ತೇವೆ. ಇಂದು ಹಣ ಸಂಪಾದನೆಗಾಗಿ ವಿದ್ಯೆ ಕಲಿಯಲಾಗುತ್ತಿದೆ. ವಿದ್ಯಾವಂತರು ತಮ್ಮ ದೇಶದಿಂದ ಬೇರೆ ದೇಶಕ್ಕೆ ಹಣ ಸಂಪಾದನೆಯ ನೆಪದಲ್ಲಿ ವಲಸೆ ಹೋಗುವದನ್ನು 'ಪ್ರತಿಭಾ ಪಲಾಯನ' ಎನ್ನುತ್ತಾರೆ. ಇದರಲ್ಲಿ ಹೆಚ್ಚಿನವರು ಬುದ್ಧಿವಂತರು, ಪರಿಣಿತರು, ಸಂಶೋಧನೆಯಲ್ಲಿ ತೊಡಗಿರುವವರು, ತಂತ್ರಜ್ಞರು, ವೈದ್ಯರು, ಅರ್ಥಶಾಸ್ತ್ರಜ್ಞರು ಮುಂತಾದ ಉನ್ನತ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಇಂತಹ ಜನರ ಅವಶ್ಯಕತೆ ಇರುವುದರಿಂದ ಆ ರಾಷ್ಟ್ರಗಳು ಈ ವರ್ಗದ ಜನರನ್ನು ಸ್ವಾಗತಿಸುತ್ತವೆ. ಇದರ ಪರಿಣಾಮವನ್ನು ಯೋಚಿಸಿದಾಗ ಒಮ್ಮೆ ಹೆಮ್ಮೆ ಎನಿಸಿದರು, ಯಾವ ದೇಶದಿಂದ ಈ ಬಗೆಯ ಜನರು ವಲಸೆ ಹೋಗುತ್ತಾರೋ ಆ ದೇಶಕ್ಕೆ ಅಪಾರ ನಷ್ಟ ಸಂಭವಿಸಿದಂತೆಯೇ ಸರಿ. ಒಂದು ದೇಶಕ್ಕೆ ನಷ್ಟ ಇನ್ನೊಂದು ದೇಶಕ್ಕೆ ಲಾಭ.

ನಮ್ಮ ದೇಶದಲ್ಲಿ ಮೇಧಾವಿಗಳಿಗೆ ಸರಿಯಾದ ಅವಕಾಶ ಹಾಗೂ ಕೆಲಸ ಮಾಡಲು ಸ್ವಾತಂತ್ರ್ಯವೂ, ಉದ್ಯೋಗಕ್ಕೆ ಅವಕಾಶವೂ ಬಹಳಷ್ಟು ಜನರಿಗೆ ಸಿಗುತ್ತಿಲ್ಲ. ತಮ್ಮ ಅರ್ಹತೆಗೆ ಯೋಗ್ಯ ವಾತಾವರಣವಿರುವ ಹಾಗೂ ತೃಪ್ತಿ ಕೊಡುವ ಉದ್ಯೋಗವನ್ನು ಅವರು ಹುಡುಕುತ್ತಾರೆ. ತಮ್ಮ ಕುಶಲತೆಯಿಂದ ಏನನ್ನಾದರೂ ಸಾಧಿಸುವ ಹಾಗೂ ವಿಶೇಷ ಜ್ಞಾನ ಸಂಪಾದಿಸುವ ಹಂಬಲ ಹೊಂದಿರುತ್ತಾರೆ. ಇಲ್ಲಿ ಅವಕಾಶ ಸಿಗದೆ ವಿದೇಶಕ್ಕೆ ತೆರಳುತ್ತಾರೆ. ಇನ್ನೊಂದೆಡೆ ವಿದೇಶಗಳಲ್ಲಿಯ ಐಶಾರಾಮಿ ಜೀವನ, ಉತ್ತಮ ಆರ್ಥಿಕ ಪರಿಸ್ಥಿತಿ ಅತ್ತ ಸೆಳೆಯುವಂತೆ ಮಾಡುತ್ತವೆ. ಇಲ್ಲಿ ಅವಕಾಶಗಳ ಕೊರತೆ, ಜಾತಿಯತೆ, ಮೀಸಲಾತಿ, ಹಣದ ಆಮಿಶ್ಯದಿಂದ ಅನರ್ಹ ವ್ಯಕ್ತಿಗಳಿಗೆ ಪ್ರಾಶಸ್ತ್ಯ ಇಂತಹ ಪರಿಸ್ಥಿತಿಯಿಂದ ಬೇಸತ್ತು ಹೋದವರು ಅಲ್ಲಿಯೇ ನೆಲೆಸಲು ಇಷ್ಟಪಡುತ್ತಾರೆ. ವಿದೇಶ ವ್ಯಾಸಂಗ ಒಂದೆಡೆ ಪ್ಯಾಶನ್ ಹಾಗೂ ಗೌರವಯುತ ಉದ್ಯೋಗವು ಆಗಿದೆ.






ವಿದ್ಯಾಭ್ಯಾಸಕ್ಕಾಗಿ ಸರಕಾರ ಜನರಿಂದ ಸಂಗ್ರಹಿಸಿದ ತೆರಿಗೆಯನ್ನು ಖರ್ಚು ಮಾಡುತ್ತದೆ. ನ್ಯಾಯವಾಗಿ ಈ ವರ್ಗದ ಜನರು ತಮ್ಮ ದೇಶಕ್ಕೆ ಸೇವೆ ಸಲ್ಲಿಸಿ ಪ್ರಜೆಗಳ ತೆರಿಗೆಯಿಂದ ತಾವು ಪಡೆದ ವಿದ್ಯೆಯ ಋಣವನ್ನು ತೀರಿಸಬೇಕು ಹಾಗೂ ದೇಶ ಸೇವೆ ಮಾಡಿದ ಖ್ಯಾತಿಗಳಿಸಬೇಕು. ಆದರೆ ಹಾಗಾಗುತ್ತಿಲ್ಲ, ಇದಕ್ಕೆ ಕಾರಣವೂ ಇಲ್ಲದಿಲ್ಲ ಇಂತಹವರಿಗೆ ದೇಶಪ್ರೇಮ ಇಲ್ಲ ಅನ್ನುವ ಹಾಗೆ ಇಲ್ಲಾ ನಮ್ಮ ದೇಶದಲ್ಲಿ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಮಾನವ ಶಕ್ತಿಯ ಸದುಪಯೋಗವಾಗುತ್ತಿಲ್ಲ, ಭೌತಿಕ ಸಂಪತ್ತಿನ ನಷ್ಟಕ್ಕಿಂತ ಅತ್ಯಧಿಕ ನಷ್ಟ ಭೌದ್ಧಿಕ ಪಲಾಯನದಿಂದ ಉಂಟಾಗುತ್ತಿದೆ. ತಾಂತ್ರಿಕ ಜಾಗತಿಕರಣದಿಂದಾಗಿ ಐ.ಟಿ.ಕಂಪನಿಗಳಿಗೆ ಲಕ್ಷಾಂತರ ಜನರು ಉದ್ಯೋಗ ಅರಸಿ ವಿದೇಶಗಳಿಗೆ ಹೋಗುತ್ತಿದ್ದಾರೆ. ಇದು ಒಂದೆಡೆ ಹೆಮ್ಮೆಯ ವಿಷಯವಾದರೂ ಇದೊಂದು ರಾಷ್ಟ್ರೀಯ ದುರಂತವೆಂದು ಭಾವಿಸಬಹುದು. ಈ ಸಮಸ್ಯೆಯ ಮೂಲ ಉದ್ಯೋಗ ಸೃಷ್ಟಿಯಲ್ಲಿದೆ. ಸರ್ಕಾರ ವೈಜ್ಞಾನಿಕ ಸಂಶೋಧನೆಗೆ ಪ್ರಾಮುಖ್ಯತೆ ಕೊಡಬೇಕು. ರಾಜಕೀಯ ಪ್ರಭಾವಕ್ಕೆ ಒಳಗಾಗದೆ ಅರ್ಹತೆಗೆ ಮಾತ್ರ ಅವಕಾಶ ಕೊಡುವಂತಾಗಬೇಕು. ವಿಜ್ಞಾನ, ತಂತ್ರಜ್ಞಾನ, ಗಣಕಯಂತ್ರ ಸುಧಾರಣೆ, ಔಷಧ ವಿಜ್ಞಾನ, ಕೈಗಾರಿಕೆ, ಗ್ರಾಮೀಣ ಕೈಗಾರಿಕೆ, ಕೃಷಿ ಆಧಾರಿತ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ನಮ್ಮ ಯುವ ಪ್ರತಿಭೆಗಳು ನಮ್ಮ ದೇಶದಲ್ಲಿಯೇ ನೆಲೆಯೂರಲು ಪ್ರೋತ್ಸಾಹಿಸಬೇಕು. ಹೊರದೇಶಕ್ಕೆ ವಿಶೇಷ ಅಧ್ಯಯನಕ್ಕೆಂದು ಹೋಗುವವರಿಗೆ ನಮ್ಮ ದೇಶದಲ್ಲಿ ಉದ್ಯೋಗಾವಕಾಶ ಕೊಡುವ, ಉತ್ತಮ ಸಂಬಳ ಕೊಡುವ ಭರವಸೆ ನೀಡಬೇಕು. ಎಲ್ಲಾ ವೈದ್ಯರಿಗೂ, ವಿಜ್ಞಾನಿಗಳಿಗೂ, ಇಂಜಿನೀಯರುಗಳಿಗೆ ಉತ್ತಮ ಸೌಕರ್ಯ ಸಿಗುವ ಭರವಸೆ ಕೊಟ್ಟು ಅವರೆಲ್ಲಾ ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಅವರನ್ನು ಆಕರ್ಷಿಸಬೇಕು ವಿಜ್ಞಾನಿಗಳಿಗೆ ಖಾಸಗಿಯಾಗಿ ಸಂಶೋಧಿಸಲು ಅವಕಾಶ ನೀಡಬೇಕು. ಹೀಗಾದಲ್ಲಿ ಪ್ರತಿಭಾ ಪಲಾಯನವನ್ನು ತಡೆಗಟ್ಟುವುದರಲ್ಲಿ ಸ್ವಲ್ಪಮಟ್ಟಿಗೆ ಪ್ರಗತಿ ಸಾಧಿಸಬಹುದು.

ಒಂದು ಅಂದಾಜಿನ ಪ್ರಕಾರ 38% ಅಮೇರಿಕದಲ್ಲಿರುವ ವೈದ್ಯರು ಭಾರತೀಯರು. 36% ನಾಸಾದಲ್ಲಿರುವ ವಿಜ್ಞಾನಿಗಳು ಭಾರತೀಯರು. 34% ಮೈಕ್ರೋಸಾಫ್ಟ್‌ನ ಇ ಕೆಲಸಗಾರರು ಭಾರತೀಯರು. 28% ಐಬಿಎಂ ಕೆಲಸಗಾರರು ಭಾರತೀಯರು. 27% ಇಂಟೆಲ್ ಕೆಲಸಗಾರರು ಭಾರತೀಯರು. 37% ಅಮೇರಿಕಾದ ಎಲ್ಲಾ ವಿಜ್ಞಾನಿಗಳು ಭಾರತೀಯರು.

ಇಷ್ಟು ಜನರ ಪ್ರತಿಭೆ, ಬುದ್ಧಿಮತ್ತೆ ಜಾಣತನವನ್ನು ನಮ್ಮ ದೇಶದ ಅಭಿವೃದ್ಧಿಗೆ ಉಪಯೋಗಿಸಿದರೆ ಜಗತ್ತಿನಲ್ಲಿಯೇ ಮುಂದುವರೆದ ಅಗ್ರಮಾನ್ಯ ದೇಶ ನಮ್ಮದಾಗುವುದರಲ್ಲಿ ಸಂಶಯವೇ ಬೇಡ.

ವೈದ್ಯ ಸಂಪದ

ಅನಿವಾಸಿ ಲೋಕ

# ಬ್ರಿಟನ್ನಿನ ವೈದ್ಯಕೀಯ ವ್ಯಾಸಂಗದ ಕಿರುನೋಟ



**ಡಾ. ರಾಮಶರಣ ಲಕ್ಷ್ಮೀನಾರಾಯಣ**
ರುಮೆಟಾಲಜಿ ತಜ್ಞರು, ಬರ್ಟನ್ ಮತ್ತು
ಡಾರ್ಬಿ, ಎನ್.ಎಚ್.ಎಸ್. ಆಸ್ಪತ್ರೆಗಳು, ಇಂಗ್ಲೆಂಡ್



**ಡಾ ಕೇಶವ ಕುಲಕರ್ಣಿ**
ವಿಭಾಗೀಯ ಸಂಪಾದಕರು

(ಲೇಖಕಕರ ಪರಿಚಯ: ಹುಬ್ಬಳ್ಳಿಯಲ್ಲಿ ಎಂ.ಬಿ.ಬಿ.ಎಸ್ ಮಾಡಿ, ಮುಂಬೈಯಲ್ಲಿ ಎಂ.ಡಿ (ಮೆಡಿಸಿನ್) ಮುಗಿಸಿ, ತದನಂತರ ಇಂಗ್ಲೆಂಡಿನಲ್ಲಿ ರುಮೆಟಾಲಜಿಯಲ್ಲಿ ವ್ಯಾಸಂಗ ಮತ್ತು ತರಬೇತಿಗಳನ್ನು ಪೂರೈಸಿ, ಕಳೆದೆರೆಡು ದಶಕಗಳಿಂದ ಇಂಗ್ಲೆಂಡಿನಲ್ಲಿ ನೆಲೆಸಿರುವ ಡಾ. ರಾಮಶರಣ ಲಕ್ಷ್ಮೀನಾರಾಯಣ ಅವರು ಎನ್.ಎಚ್.ಎಸ್ ಆಸ್ಪತ್ರೆಯಲ್ಲಿ ಕನ್ಸಲ್ಟಂಟ್ ಆಗಿ ಕೆಲಸಮಾಡುತ್ತಿದ್ದಾರೆ, ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ಮತ್ತು ಪರೀಕ್ಷೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.)

ಕಳೆದ ಎರಡು ಮೂರು ದಶಕಗಳ ಕಾಲಘಟ್ಟದಲ್ಲಿ ವೈದ್ಯಕೀಯ ಕಾರ್ಯಕ್ಷೇತ್ರದ ಹೊಳವು–ವಿಸ್ತಾರ, ಸಮಾಜದ ಯೋಚನಾ ಲಹರಿ, ಮಾನದಂಡಗಳು ಬದಲಾಗಿವೆ. ಅದಕ್ಕೆ ಅನುಗುಣವಾಗಿ ಬ್ರಿಟನ್ನಿನ ವೈದ್ಯಕೀಯ ವ್ಯಾಸಂಗವೂ ಬದಲಾಗಿದೆ. ಈ ಲೇಖನದಲ್ಲಿ ಶಾಲಾ ವಿದ್ಯಾರ್ಥಿಯಿಂದ ಪೂರ್ಣಪ್ರಮಾಣದ ವೈದ್ಯನಾ(ಳಾ)ಗುವವರೆಗಿನ ಪ್ರಯಾಣದ ಪರಿಚಯವಿದೆ. ಈ ಲೇಖನ ಭಾರತೀಯ ವೈದ್ಯಕೀಯ ವ್ಯಾಸಂಗದ ಜೊತೆ ತುಲನೆ ಮಾಡಲು ಸಹಾಯಕವಾಗಬಹುದು.

**ಶಾಲಾ ಶಿಕ್ಷಣ:**

ಇಂಗ್ಲೆಂಡಿನಲ್ಲಿ ವೈದ್ಯರಾಗಲು ಬಯಸುವವರ ಸಿದ್ಧತೆ 10ನೇ ಇಯತ್ತೆಯಲ್ಲಿ ಓದಲು ಆಯ್ಕೆ ಮಾಡಿಕೊಳ್ಳುವ ವಿಷಯಗಳೊಂದಿಗೆ ಆರಂಭವಾಗುತ್ತದೆ. ಇಂಗ್ಲೆಂಡಿನಲ್ಲಿ 10ನೇ ಇಯತ್ತೆ ಭಾರತದ 9ನೇ ಇಯತ್ತೆಗೆ ಸಮ. ಇಲ್ಲಿನ 10 ಮತ್ತು 11ನೇ ಇಯತ್ತೆಗಳನ್ನು ಸೇರಿಸಿ GCSE ಎನ್ನುತ್ತಾರೆ, ಅಂದರೆ ಎರಡು ವರ್ಷ SSLC ಓದಿದಂತೆ. ವೈದ್ಯಕೀಯ ಶಿಕ್ಷಣ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು



GCSEಯಲ್ಲಿ ಗಣಿತ, ರಸಾಯನ, ಭೌತ ಹಾಗೂ ಜೀವ ಶಾಸ್ತ್ರಗಳನ್ನು ಆಯ್ಕೆಮಾಡಿಕೊಳ್ಳಲೇಬೇಕು. ಜೊತೆಗೆ ಧರ್ಮಶಾಸ್ತ್ರವನ್ನು ಆಯ್ದುಕೊಳ್ಳುವುದು ಸೂಕ್ತವೆನ್ನುತ್ತಾರೆ. ಧರ್ಮಶಾಸ್ತ್ರದಲ್ಲಿ ಕಲಿಸುವ ನೀತಿಶಾಸ್ತ್ರ ವೈದ್ಯವೃತ್ತಿಗೆ ಪೂರಕ ಎಂಬುದು ಇದರ ಹಿಂದಿನ ಆಶಯ.

ನಮ್ಮ ರಾಜ್ಯದಲ್ಲಿ SSLC ರಾಜ್ಯಮಟ್ಟದ ಪರೀಕ್ಷೆಯಾದರೆ, GCSE ರಾಷ್ಟ್ರಮಟ್ಟದ ಪರೀಕ್ಷೆ. ಈ ಪರೀಕ್ಷೆಯಲ್ಲಿ 0 ಯಿಂದ 9ರ ವರೆಗೆ ಗ್ರೇಡ್‌ಗಳನ್ನು ಕೊಡುತ್ತಾರೆ; ವೈಜ್ಞಾನಿಕ ವಿಷಯಗಳಲ್ಲಿ 8 ಅಥವಾ 9 ಗ್ರೇಡ್ ಬಂದರೆ ವೈದ್ಯಕೀಯ ಪ್ರವೇಶಿಸಲು ಅನುಕೂಲವೆಂಬ ಭಾವನೆಯಿದೆ. ಪೋಷಕರಿಗೆ ಅಥವಾ ವಿದ್ಯಾರ್ಥಿಗೆ ವೈದ್ಯಕೀಯ ಶಿಕ್ಷಣ ಮಾಡುವ ಉಮೇದು ಇದ್ದರೂ, 8 ಅಥವಾ 9 ಗ್ರೇಡ್ ಬಂದಿರದಿದ್ದರೆ ಶಾಲೆಯವರೇ ವಿದ್ಯಾರ್ಥಿಗಳನ್ನು ಬೇರೆ ವಿಷಯಗಳೆಡೆ ಗಮನ ಹರಿಸಲು ಸೂಚನೆ ನೀಡುತ್ತಾರೆ.

**ಪದವಿಪೂರ್ವ ಕಾಲೇಜು ಶಿಕ್ಷಣ:**

ನಂತರ 12–13ನೇ ಇಯತ್ತೆಗಳು 'A' ಲೆವೆಲ್, ಕರ್ನಾಟಕದ PUC ತರಹ. ಇಲ್ಲಿನ A ಲೆವೆಲ್ಲಿನಲ್ಲಿ ಸಾಮಾನ್ಯವಾಗಿ ಮೂರು ವಿಷಯಗಳನ್ನು ಮಾತ್ರ ಅಭ್ಯಸಿಸುತ್ತಾರೆ. ವೈದ್ಯಕೀಯ ಆಕಾಂಕ್ಷಿಗರು 'A' ಲೆವೆಲ್ಲಿನಲ್ಲಿ ರಸಾಯನಶಾಸ್ತ್ರವನ್ನು ಕಡ್ಡಾಯವಾಗಿ ಅಭ್ಯಸಿಸಲೇಬೇಕು. ಹೆಚ್ಚಿನವರು ಎರಡನೇ ವಿಷಯವಾಗಿ ಜೀವಶಾಸ್ತ್ರ ಅಥವಾ ಭೌತಶಾಸ್ತ್ರವನ್ನು ಅಭ್ಯಸಿಸುತ್ತಾರೆ. ಜೀವಶಾಸ್ತ್ರದ ಅಧ್ಯಯನ ಈ ಹಂತದಲ್ಲಿ ರಸಾಯನಶಾಸ್ತ್ರದಂತೆ ಕಡ್ಡಾಯವಲ್ಲ ಎನ್ನುವುದನ್ನು ಗಮನಿಸಬೇಕು. ಮೂರನೇ ಐಚ್ಛಿಕ ವಿಷಯವಾಗಿ ಇನ್ನೊಂದು ವಿಜ್ಞಾನದ ವಿಷಯ, ಗಣಿತ ಅಥವಾ ಸಂಗೀತ, ಅರ್ಥಶಾಸ್ತ್ರ ಅಥವಾ ಇಂಗ್ಲೀಷ್, ಹೀಗೆ ವೈದ್ಯಕೀಯಕ್ಕೆ ಸಂಬಂಧಿಸದೇ ಇರುವ ವಿಷಯವನ್ನೂ ತೆಗೆದುಕೊಳ್ಳಬಹುದು.

**ವೈದ್ಯಕೀಯ ಕಾಲೇಜುಗಳ ಅರ್ಜಿ:**

ಬ್ರಿಟನ್ನಿನಲ್ಲಿ 164 ವಿಶ್ವವಿದ್ಯಾಲಯಗಳಿದ್ದರೂ ಕೇವಲ 37 ವೈದ್ಯಕೀಯ ಶಾಲೆಗಳಿವೆ. ಪ್ರತಿ ವರ್ಷ ಸುಮಾರು 30,000 ಆಕಾಂಕ್ಷಿಗಳಲ್ಲಿ 9500 ವಿದ್ಯಾರ್ಥಿಗಳಿಗೆ ವೈದ್ಯಕೀಯ ಅಭ್ಯಾಸದ ಅವಕಾಶವಿದೆ. 13ನೇ ಇಯತ್ತೆಯ ಆರಂಭದಲ್ಲಿ ಆಕಾಂಕ್ಷಿಗಳು ವಿಶ್ವವಿದ್ಯಾಲಯಗಳಿಗೆ ಅರ್ಜಿ ಗುಜರಾಯಿಸಬೇಕು. ಕೇವಲ ನಾಲ್ಕು ಕಾಲೇಜುಗಳಿಗೆ ಮಾತ್ರ ಒಬ್ಬ ವಿದ್ಯಾರ್ಥಿ ಅರ್ಜಿ ಸಲ್ಲಿಸಲು ಅವಕಾಶ. ತಮಗೆ ಬೇಕಾದ ವಿಶ್ವವಿದ್ಯಾಲಯಕ್ಕನುಗುಣವಾಗಿ ಸ್ಪರ್ಧಾಳುಗಳು ಎರಡು ಬಗೆಯ (UCAT ಮತ್ತು GMAT) ಪ್ರವೇಶ ಪರೀಕ್ಷೆಗಳನ್ನು ಆರಿಸಿಕೊಳ್ಳಬಹುದು (ಭಾರತದ NEET ತರಹ).

ಅರ್ಜಿಯಲ್ಲಿ ತಾವು ಏಕೆ ವೈದ್ಯವೃತ್ತಿಗೆ ಅರ್ಹರು ಎನ್ನುವುದನ್ನು ಬರೆಯಬೇಕು. ವೈದ್ಯವೃತ್ತಿಗೆ ಪೂರಕವಾದ ಸ್ವಯಂಸೇವೆಯ ಕಾರ್ಯಾನುಭವ (ಆಸ್ಪತ್ರೆ, ಪ್ರಾಥಮಿಕ ವೈದ್ಯ ಕೇಂದ್ರ, ಶುಶ್ರೂಷಾ ಗೃಹಗಳಲ್ಲಿ ಕೆಲಸ ಮಾಡಿದ ಅನುಭವ, ಗ್ರಾಹಕ ಸೇವೆಯ ಅನುಭವ ಇತ್ಯಾದಿ) ಹಾಗೂ ಪಠ್ಯೇತರ ಚಟುವಟಿಕೆಗಳ ಸಾಧನೆ (ಆಟೋಟ, ಲಲಿತಕಲೆ ಇತ್ಯಾದಿ)ಗಳು ಸೇರಿರುತ್ತವೆ. ಇದರೊಟ್ಟಿಗೆ 12ನೇ ವರ್ಷದ ಶಾಲಾ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಅವರ ಅಭ್ಯಾಸದ ಪರಿಯನ್ನು ಆಧರಿಸಿ ಶಿಕ್ಷಕರು 13ನೇ ವರ್ಷದ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆಯಬಹುದಾದ ಅಂಕಗಳ ವರದಿಯನ್ನು ವೈದ್ಯಕೀಯ ಕಾಲೇಜಿನ ವಿಶ್ವವಿದ್ಯಾಲಯಗಳಿಗೆ ಕಳಿಸುತ್ತಾರೆ. ಈ ಎಲ್ಲ ಮಾಹಿತಿಗಳನ್ನಾಧರಿಸಿ ಸೂಕ್ತ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುತ್ತಾರೆ. ಸಂದರ್ಶನದಲ್ಲಿ ಅವರ ವ್ಯಕ್ತಿತ್ವ, ಸ್ವಯಂಸೇವೆ, ವೈದ್ಯನಾಗುವ ಮನೋಭಾವ ಮತ್ತು, ಸೇವಾ ತತ್ಪರತೆಗಳನ್ನು ಅಳೆಯುವ ಪ್ರಶ್ನೆಗಳಿರುತ್ತವೆ. ಯಶಸ್ವಿಯಾದ ಅಭ್ಯರ್ಥಿಗಳಿಗೆ 13ನೇ ಇಯತ್ತೆಯಲ್ಲಿ ಇಂತಿಷ್ಟು ಅಂಕಗಳನ್ನು ಗಳಿಸಲೇಬೇಕೆಂಬ ನಿಬಂಧನೆಯ ಮೇರೆಗೆ ವೈದ್ಯಕೀಯ ಸೀಟನ್ನು ಕೊಡಲಾಗುತ್ತದೆ.

**ವೈದ್ಯಕೀಯ ಸ್ನಾತಕ ಶಿಕ್ಷಣ:**

ವೈದ್ಯಕೀಯ ವಿದ್ಯಾಭ್ಯಾಸದ ಅವಧಿ ಸರಾಸರಿ 5 ವರ್ಷಗಳು. ಮಧ್ಯದಲ್ಲಿ ಹೆಚ್ಚುವರಿ ಪದವಿಗಳಿಸುವ ಒಂದು ವರ್ಷದ ಅಧಿಕ ಅವಕಾಶದಲ್ಲಿ ಹಲವರು ಸಂಶೋಧನೆಯ ಅನುಭವ ಪಡೆಯುತ್ತಾರೆ. ವೈದ್ಯಕೀಯ ಕೋರ್ಸಿನ ಶುಲ್ಕ ಪ್ರತಿವರ್ಷ £9250 (ಕಲೆ ಮತ್ತು ವಾಣಿಜ್ಯ ಕೋರ್ಸುಗಳಷ್ಟೇ). MBBS / MBChB ಪದವಿಯ ನಂತರ ಭಾರತದಲ್ಲಿ ಒಂದು ವರ್ಷ ಇಂಟರ್ನ್ಶಿಪ್ ಇರುವಂತೆ ಇಲ್ಲಿ ಎರಡು ವರ್ಷಗಳ 'ಫೌಂಡೇಷನ್' ತರಬೇತಿಯನ್ನು ಕಡ್ಡಯವಾಗಿ ಮಾಡಲೇಬೇಕು. ಈ ತರಬೇತಿಗೆ ರಾಷ್ಟ್ರದಾದ್ಯಂತ ಯಾವುದೇ ಆಸ್ಪತ್ರೆಯಲ್ಲಿ ಕೆಲಸ ಮಾಡಬೇಕಾಗಬಹುದು.

**ಸ್ನಾತಕೋತ್ತರ ತರಬೇತಿ:**

ಎರಡು ವರ್ಷದ ಫೌಂಡೇಶನ್ ವೈದ್ಯರಾಗಿ ಕೆಲಸ ಮಾಡಿದ ಮೇಲೆ, ಸ್ನಾತಕೋತ್ತರ ಪದವಿಯ ವ್ಯಾಸಾಂಗ. ಫ್ಯಾಮಿಲಿ ವೈದ್ಯರಾಗಲು (ಜನರಲ್ ಪ್ರಾಕ್ಟೀಶನರ್) ಇನ್ನೂ ಮೂರು ವರ್ಷದ ಸ್ನಾತಕೋತ್ತರ ತರಬೇತಿಯನ್ನು

ಪಡೆಯಬೇಕಾಗುತ್ತದೆ.

ಮೆಡಿಕಲ್ ಮತ್ತು ಸರ್ಜಿಕಲ್ ಕ್ಷೇತ್ರಗಳಲ್ಲಿನ ಸ್ನಾತಕೋತ್ತರ ವ್ಯಾಸಾಂಗ ಮಾಡುವುದಾದರೆ ಎರಡು ವರ್ಷದ ಫೌಂಡೇಶನ್ ಮುಗಿದ ಮೇಲೆ, ಮತ್ತೆ 5 ರಿಂದ 10 ವರ್ಷ. 2–3 ವರ್ಷಗಳ ಜನರಲ್ ಮೆಡಿಸಿನ್ ಅಥವಾ ಜನರಲ್ ಸರ್ಜರಿ ತರಬೇತಿಯಲ್ಲಿ ಪದವಿ ಪಡೆದು, ಮತ್ತೊಮ್ಮೆ ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚಿನ ವಿಶೇಷತೆ(subspecialty or superspecialty)ಯ ತರಬೇತಿಗೆ ಪ್ರವೇಶ ಪಡೆಯಬೇಕಾಗುತ್ತದೆ. ಈ ಹಂತದಲ್ಲಿ ಕನ್ಸಲ್ಟಂಟ್ ಹುದ್ದೆಗೆ ಸಿದ್ಧರಾಗಿದ್ದರೆಂದು ಪ್ರಮಾಣ ಪತ್ರ ಪಡೆಯುತ್ತಾರೆ. ತರಬೇತಿಯ ಮಧ್ಯ ಹೆಚ್ಚಿನ ಸಂಶೋಧನೆ ಅಥವಾ ವಿದೇಶದಲ್ಲಿ ತರಬೇತಿಗೆ ಹೋಗುವ ಅವಕಾಶ ಇರುತ್ತದೆ. ಸ್ನಾತಕೋತ್ತರ ಪದವಿಯ ಪಠ್ಯಕ್ರಮ, ಮಾನದಂಡ ಹಾಗೂ ಅರ್ಹತಾ ಪರೀಕ್ಷೆಯನ್ನು ನಿರ್ಧರಿಸುವುದು ಆಯಾ ವಿಶೇಷತೆಯ ರಾಯಲ್ ಕಾಲೇಜುಗಳೇ ಹೊರತು ವಿಶ್ವವಿದ್ಯಾಲಯಗಳಲ್ಲ ಎನ್ನುವುದನ್ನು ಗಮನಿಸಬೇಕು.



**ಹೊರದೇಶದವರಿಗೆ ವೈದ್ಯಕೀಯ ಶಿಕ್ಷಣ ಮತ್ತು ಸ್ನಾತಕೋತ್ತರ ತರಬೇತಿ:**

ಬ್ರಿಟನ್ನಿನಲ್ಲಿ ಹೊರ ದೇಶದ ವಿದ್ಯಾರ್ಥಿಗಳಿಗೂ ಸ್ನಾತಕ ಹಾಗು ಸ್ನಾತಕೋತ್ತರ ವೈದ್ಯಕೀಯ ಅಧ್ಯಯನದ ಅವಕಾಶಗಳಿವೆ. MBBS ಓದಲು ಇಚ್ಛಿಸುವವರು IB ಅಥವಾ 'A' ಲೆವೆಲ್ ನ ಪರೀಕ್ಷೆ ಕೊಟ್ಟಿರಬೇಕು. ರಸಾಯನ ಶಾಸ್ತ್ರದೊಟ್ಟಿಗೆ ಇನ್ನೊಂದು ವಿಜ್ಞಾನದ ವಿಷಯವನ್ನು ಓದಿರಬೇಕು. ಇದರೊಟ್ಟಿಗೆ ಇಂಗ್ಲಿಷ್ ಪ್ರಥಮ ಭಾಷೆಯಲ್ಲದವರಿಗೆ IELTS ಪರೀಕ್ಷೆ ಅಥವಾ ಮಾನ್ಯವಾದ ಇತರ ಇಂಗ್ಲಿಷ್ ಪರೀಕ್ಷೆ (ಟೋಫೆಲ್, ಕೇಂಬ್ರಿಜ್) ಕಡ್ಡಾಯ. ವಿದ್ಯಾರ್ಥಿಗಳು ಸೇರಬಯಸುವ ಕಾಲೇಜಿಗನುಗುಣವಾಗಿ UCAT/GMAT ಪ್ರವೇಶ ಪರೀಕ್ಷೆಯನ್ನೂ ಬರೆಯಬೇಕು. ಶೈಕ್ಷಣಿಕ ಶುಲ್ಕ ವರ್ಷಕ್ಕೆ ಸುಮಾರು £35000 ರಿಂದ 38,000. ವಿದ್ಯಾರ್ಥಿಗಳಿಗೆ ಬೇಕಾದದ್ದು 4ನೇ ಸ್ತರದ (Tier 4) ವೀಸಾ. ಬ್ರಿಟನ್ನಿನ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶವಿದೆ. ವಿದೇಶಿ ವಿದ್ಯಾರ್ಥಿಗಳು ಸ್ಥಳೀಯ ವಿದ್ಯಾರ್ಥಿಗಳ ಜೊತೆಗೇ ತರಬೇತಿ ಪಡೆಯುತ್ತಾರೆ. ವಿದೇಶಿ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನದ ಸೌಲಭ್ಯವಿದೆ.

ಸ್ನಾತಕೋತ್ತರ ತರಬೇತಿಯನ್ನು ಬಯಸುವವರು MBBS ಆದ ಮೇಲೆ ಯಾವಾಗಲಾದರೂ ಬರಬಹುದು. ಭಾರತದಲ್ಲೇ ಸ್ನಾತಕೋತ್ತರ ಪದವಿ ಪಡೆದವರಿಗೂ ಈ ಮಾರ್ಗ ಅನ್ವಯವಾಗುತ್ತದೆ. ವಿದೇಶಿ ವೈದ್ಯರು ತರಬೇತಿಯ ಮೊದಲು ಜನರಲ್ ಮೆಡಿಕಲ್ ಕೌನ್ಸಿಲ್ (GMC)ನಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಭಾರತೀಯರೆಲ್ಲರೂ IELTS (ಶೈಕ್ಷಣಿಕ ಆವೃತ್ತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ನಂತರ ವೈದ್ಯಕೀಯ ಜ್ಞಾನವನ್ನು ಒರೆಗೆ ಹಚ್ಚುವ PLAB ಪರೀಕ್ಷೆಯಲ್ಲಿ ಪಾಸಾಗಬೇಕು. ಈ ಪರೀಕ್ಷೆಯ ಪ್ರಶ್ನೆಗಳಿರುವ ಮೊದಲನೇ ಭಾಗವನ್ನು ಭಾರತದಲ್ಲೇ ಮುಗಿಸಬಹುದು. ಎರಡನೇ ಭಾಗವಾದ ಕ್ಲಿನಿಕಲ್ ಪರೀಕ್ಷೆಯನ್ನು ಬ್ರಿಟನ್ನಿನ ವಿವಿಧೆಡೆ ತೆಗೆದುಕೊಳ್ಳಬಹುದು. ಉತ್ತೀರ್ಣರಾದಮೇಲೆ ಅಭ್ಯರ್ಥಿಗಳು GMC ಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಾಗುತ್ತಾರೆ. ಇದಕ್ಕೆ ಬೇಕಾದ ಮಾಹಿತಿ GMC ಜಾಲತಾಣದಲ್ಲಿದೆ. GMCಯಲ್ಲಿ ನೋಂದಾಯಿತರಾದವರು ಆಸ್ಪತ್ರೆಗಳಲ್ಲಿ ಲಭ್ಯವಿರುವ ಹುದ್ದೆಗಳಲ್ಲಿ ಕೆಲಸ ಮಾಡುತ್ತ ಇಲ್ಲಿನ ವೈದ್ಯರಂತೆ ತಮಗೆ ಇಷ್ಟವಿರುವ ಕ್ಷೇತ್ರದಲ್ಲಿ ತರಬೇತಿ ಪಡೆಯಬಹುದು. ವಿದೇಶದಿಂದ ಬಂದ ವೈದ್ಯರಿಗೆ ಇಲ್ಲಿನ ವೈದ್ಯರಿಗೆ ಸಿಗುವ ಎಲ್ಲ ಸವಲತ್ತುಗಳನ್ನು ತಾರತಮ್ಯವಿಲ್ಲದೇ ಕೊಡುತ್ತಾರೆ.

**ಕೊಂಡಿಗಳು:**

- ಬ್ರಿಟನ್ನಿನ್ನಲ್ಲಿ ವೈದ್ಯಕೀಯ ಅಭ್ಯಾಸಕ್ಕೆ ಬರಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ https://www.medschools.ac.uk/studying-medicine/making-an-application/international-applicants ಜಾಲತಾಣವನ್ನು ಸಂದರ್ಶಿವುದರ ಮೂಲಕ ಪ್ರಾರಂಭಿಸಬಹುದು.

- ಕೇವಲ ಎರಡು ವರ್ಷಗಳ ವಿಶೇಷ ತರಬೇತಿ ಪಡೆಯಲು ಕೆಲವು ಕ್ಷೇತ್ರಗಳಲ್ಲಿ ರಾಯಲ್ ಕಾಲೇಜುಗಳ ಪ್ರಾಯೋಜಕತ್ವದ ಯೋಜನೆಯೂ ಇದೆ: https://www.aomrc.org.uk/medical-training-initiative/







**ಡಾ ವೀಣಾ ಎನ್**
ವಿಭಾಗೀಯ ಸಂಪಾದಕರು
ಸ್ತ್ರೀ ರೋಗ ತಜ್ಞರು, ಕಶ್ಯಪ ಸಂಕೀರ್ಣ, ಶ್ರೀರಾಮಪೇಟೆ, ಸುಳ್ಯ

ಸಾಂಸ್ಕೃತಿಕ

# ಬಳಗದ ವಿಶೇಷ ಕಾರ್ಯಕ್ರಮಗಳ ಪಕ್ಷಿನೋಟ

ವಾಸವಿ ಸಾಹಿತ್ಯ ಕಲಾ ವೇದಿಕೆ ಸುಳ್ಯ ಹಾಗೂ ರಾಜ್ಯ ಐಎಂಎ ಬರಹಗಾರರ ಸಮಿತಿ ಆಯೋಜಿಸಿರುವ ಸಾಹಿತಿಗಳೊಂದಿಗೆ ಒಂದು ಸಂಜೆ ವಿಶೇಷ ಆನ್ ಲೈನ್ ಕಾರ್ಯಕ್ರಮದ ಜನವರಿ –ಫೆಬ್ರವರಿ ತಿಂಗಳ ವರದಿಯನ್ನು ಪ್ರಸ್ತುತಪಡಿಸಲಾಗುತ್ತಿದೆ. ಅಷ್ಟೇ ಅಲ್ಲದೇ ಬಳಗದಿಂದ ಆಯೋಜಿಸಲ್ಪಟ್ಟ ಹಾಗೂ ಭಾ. ವೈ.ಸಂ ರಾಜ್ಯ ಶಾಖೆಯ ಇತರ ಕಮಿಟಿಗಳು ನಡೆಸಿದ ಕನ್ನಡ ಪರ ಕಾರ್ಯಕ್ರಮಗಳ ವರದಿಯನ್ನು ಪ್ರಸ್ತುತಪಡಿಸಲಾಗುತ್ತಿದೆ.



ಸಾಹಿತಿಗಳೊಂದಿಗೆ ಒಂದು ಸಂಜೆ ಕಾರ್ಯಕ್ರಮ ಸಾಕಷ್ಟು ಮಹತ್ವದ ಅಂಶಗಳಿಗೆ ಕಾರಣವಾಗಿದೆ. ಸಾಹಿತ್ಯ, ಸಂಗೀತ, ಸಾಮಾಜಿಕ ಹಾಗೂ ಇತರೆ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಹಲವಾರು ಸಾಧಕರನ್ನು ಈ ಕಾರ್ಯಕ್ರಮದ ಮೂಲಕ ಪರಿಚಯ ಮಾಡಿಕೊಡಲಾಗುತ್ತಿದೆ.

ದಿನಾಂಕ 02–01–2022 ರಂದು ಭಾರತೀಯ ವೈದ್ಯಕೀಯ ಆಯೋಗದ ವೈದ್ಯಕೀಯ ಮೌಲ್ಯಮಾಪನ ಮತ್ತು ಸೂಚ್ಯಂಕ ವಿಭಾಗದ ಅಧ್ಯಕ್ಷರಾದ ಡಾ. ಬಿ.ಎನ್ ಗಂಗಾಧರ್ ರಾವ್‌ರವರು "ಕನ್ನಡದಲ್ಲಿ ವೈದ್ಯಕೀಯ ಶಿಕ್ಷಣ" ಎಂಬ ವಿಷಯದ ಬಗ್ಗೆ ಮಾತನಾಡಿದರು. ಕನ್ನಡ ಭಾಷೆಯಲ್ಲಿ ವೈದ್ಯಕೀಯವನ್ನು ಕಲಿಸುವ ಕುರಿತು ಚರ್ಚಿಸಿದರು. ಕನ್ನಡವನ್ನು ಯಾಕೆ ವೈದ್ಯಕೀಯ ಕ್ಷೇತ್ರದಲ್ಲಿ ಬಳಸಬೇಕು? ಹಾಗೂ ಸ್ಥಳೀಯ ಭಾಷೆಯ ಬಗ್ಗೆ ಯಾಕೆ ಒತ್ತುಕೊಡಬೇಕು? ಜೊತೆಗೆ ಭಾಷೆ ವೈದ್ಯಕೀಯ ಕ್ಷೇತ್ರದಲ್ಲಿ ಎಷ್ಟು ಮಹತ್ವವಾಗಿದೆ? ಅನ್ನುವುದರ ಬಗ್ಗೆ ಸ್ಪಷ್ಟನೆ ನೀಡಿದರು. ಮಾತೃಭಾಷೆಯಲ್ಲಿ ಶಿಕ್ಷಣ ದೊರೆಯಬೇಕಾದ ಅಗತ್ಯದ ಬಗ್ಗೆ /ಅದರಿಂದಾಗುವ ಪ್ರಯೋಜನಗಳ ಬಗ್ಗೆ/ ಪ್ರಾಯೋಗಿಕ ಸಮಸ್ಯೆಗಳ ಬಗ್ಗೆ /ಪರಿಹರಿಸಿಕೊಳ್ಳಲು ಮಾಡಬೇಕಾದ ಸಿದ್ಧತೆಗಳ ಬಗ್ಗೆ ವಿಶದವಾಗಿ ವಿಶ್ಲೇಷಿಸಿದರು (https://youtu.be/Fo9a6RzE6ho)

ದಿನಾಂಕ 9–01–2022 ರಂದು ಸ್ತ್ರೀ ಆರೋಗ್ಯ ತಜ್ಞರಾದ ಡಾ.ಸಂಜೀವ್ ಕುಲಕರ್ಣಿಯವರು " ನಾನು ಮತ್ತು ನನ್ನ ಪ್ರಯೋಗಗಳು" ಎಂಬ ವಿಷಯದ ಕುರಿತು ತಮ್ಮದೇ ಆದ ಕೆಲವು ಸ್ವಂತ ಉದಾಹರಣೆಗಳ ಮೂಲಕ ಅನುಭವವನ್ನು ಹಂಚಿಕೊಂಡರು. ತಮ್ಮ ಸ್ವಂತ ಜಮೀನಿನಲ್ಲಿ ಮರ ಗಿಡಗಳನ್ನು ಬೆಳಸಿ ಸಸ್ಯ ವೈವಿಧ್ಯತೆ ಸೃಷ್ಟಿ ಮಾಡುವ ಮೂಲಕ ತಮ್ಮನ್ನ ತಾವು ತೊಡಗಿಸಿಕೊಂಡವರಲ್ಲಿ ಡಾ.ಸಂಜೀವ್ ಕುಲಕರ್ಣಿಯವರದ್ದು ಮುಂಚೂಣಿ ಹೆಸರು. ಡಾ. ಸಂಜೀವ್ ಕುಲಕರ್ಣಿ ಯವರು ಕೃಷಿ, ಪರಿಸರ ರಕ್ಷಣೆ ಬಗ್ಗೆ, ಝೆನ್ ಧ್ಯಾನದ ಬಗ್ಗೆ, ತಮ್ಮದೇ ಕನ್ನಡ ಶಾಲೆಯ ಬಗ್ಗೆ , ತಾವು ನಡೆಸಿದ ಆಂದೋಲನಗಳ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು. (https://youtu.be/NQKmT-RxKQ8)

ದಿನಾಂಕ 15–01–2022 ರಂದು ಬಳಗದ ವತಿಯಿಂದ ವೈದ್ಯಸಂಪದ ದ್ವೈಮಾಸಿಕ ಇ–ಪತ್ರಿಕೆ ಬಿಡುಗಡೆ ಕಾರ್ಯಕ್ರಮ ರಾಜ್ಯಾಧ್ಯಕ್ಷ ಡಾ. ಕಟೀಲ್ ಸುರೇಶ್ ಕುಡ್ವ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವೈದ್ಯಸಂಪದವನ್ನು ಲೋಕಾರ್ಪಣೆ ಮಾಡಿ ನಾಡೋಜ ಮಹೇಶ್ ಜೋಷಿಯವರು ಎಲ್ಲಾ ವೈದ್ಯ ಬರಹಗಾರರ ಸಾಹಿತ್ಯಾಸಕ್ತಿಯನ್ನು ಶ್ಲಾಘಿಸಿದರು. ವೈದ್ಯ ಬರಹಗಾರ ಉಪಸಮಿತಿಯ ಅಧ್ಯಕ್ಷ ಡಾ ಅರವಿಂದ ಪಟೇಲ್



ಪ್ರಾಸ್ತಾವಿಕ ನುಡಿಗಳಲ್ಲಿ ಪತ್ರಿಕೆಯ ಕನಸು ನನಸಾದ ಕುರಿತು ಹರ್ಷಿಸಿದರು. ವೈದ್ಯಸಂಪದದ ಪ್ರಧಾನ ಸಂಪಾದಕರಾದ ಡಾ. ಸುರೇಶ ವಿ ಸಗರದ ಪತ್ರಿಕೆಯ ಧ್ಯೇಯೋದ್ದೇಶಗಳ ಬಗ್ಗೆ ತಿಳಿಸುತ್ತಾ ಪತ್ರಿಕೆ ಸಾಕಾರಗೊಳ್ಳುವುದಕ್ಕೆ ಕಾರಣರಾದ ವೈದ್ಯಮಿತ್ರರನ್ನು ನೆನಪಿಸಿಕೊಂಡರು. ಡಾ. ಶುಭ್ರತ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಡಾ. ರತ್ನಾ ಕುಲಕರ್ಣಿರವರ ಅಧ್ಯಕ್ಷತೆಯಲ್ಲಿ ಸಂಕ್ರಾಂತಿ ಕವಿಗೋಷ್ಠಿ ನಡೆಯಿತು. ಡಾ. ಅಣ್ಣಯ್ಯ ಕುಲಾಲ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಗಡ್ಡಿ ದಿವಾಕರ್ ಈ ಕವಿಗೋಷ್ಠಿಯ ಸಂಚಾಲಕತ್ವ ವನ್ನು ವಹಿಸಿದ್ದು ಯಶಸ್ವಿಯಾಗಿ ನಿರ್ವಹಿಸಿದರು. ಕವಿಗೋಷ್ಠಿಯಲ್ಲಿ 23 ಕವಿಗಳು ಭಾಗಿಯಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. (https://youtu.be/8yj7HJbbdFc)

ದಿನಾಂಕ 16–01–2022ರಂದು ಕುಮಾರವ್ಯಾಸ ಜಯಂತಿ ಪ್ರಯುಕ್ತ ಮೈಸೂರಿನ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಅಪಾರಾಸಕ್ತಿಯುಳ್ಳ ಡಾ. ಜ್ಯೋತಿ ಶಂಕರ್ ಹಾಗೂ ಎಳೆಯ ಕಲಾವಿದೆ ಧನ್ಯಾ.ಎಸ್ ರವರ ನೇತೃತ್ವದಲ್ಲಿ ವಿದುರಾತಿಥ್ಯ ವಾಚನ– ವ್ಯಾಖ್ಯಾನ ನಡೆಯಿತು. ಇಬ್ಬರ ವಾಚನ–ವ್ಯಾಖ್ಯಾನ ಕೇಳುಗರ ಮನಸೂರೆಗೊಳಿಸಿತು. ವಿದುರನ ಭಕ್ತಿ ,ಕೃಷ್ಣನ ಪ್ರೀತಿ. ದುರ್ಯೋಧನನ ದಾರ್ಷ್ಟ, ವಿಶ್ವರೂಪ ದರ್ಶನ ವಿವರಣೆ ಕೇಳುಗರನ್ನು ಹೊಸ ಲೋಕಕ್ಕೆ ಕರೆದೊಯ್ಯುವಂತೆ ಮೂಡಿಬಂತು. (https://youtu.be/-cVHKuClcjw)

ದಿನಾಂಕ 23–01–2022 ರಂದು ರಂಗ ನಿರ್ದೇಶಕರು ಹಾಗೂ ರಂಗಾಯಣ ನಿರ್ದೇಶಕರಾಗಿದ್ದ ಬಸವಲಿಂಗಯ್ಯರವರು 'ಮಲೆಗಳಲ್ಲಿ ಮದುಮಗಳು ಅಹೋರಾತ್ರಿ ರಂಗ ಪ್ರಯೋಗ ಒಂದು– ಸಂವಾದ' ವನ್ನು ನಡೆಸಿಕೊಟ್ಟರು . ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಹಲವಾರು ಅಂಶಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. 75 ಕಲಾವಿದರು 9ಗಂಟೆಗಳ ರಂಗಪ್ರಯೋಗ 4 ರಂಗ ಸಜ್ಜಿಕೆ ಬಯಲು ವೇದಿಕೆಯ ಅನೇಕ ದೃಶ್ಯಗಳ ಸ್ತಬ್ಧ ಚಿತ್ರಗಳು ಅದ್ಭುತವಾಗಿತ್ತು. (https://youtu.be/UNQTGfbAzMA)

ದಿನಾಂಕ 30–01–2022 ರಂದು ಥಟ್ ಅಂತ ಹೇಳಿ ಖ್ಯಾತಿಯ ಡಾ. ನಾ ಸೋಮೇಶ್ವರ ಅವರು 'ನಮ್ಮ ಹೊಟ್ಟೆಯೊಳಗೊಂದು ಮಿದುಳು' ಎಂಬ ವಿಶೇಷ ವಿಷಯದ ಬಗ್ಗೆ ಮಾತನಾಡಿದರು. ನಾನು ಯಾರು ಅನ್ನೋ ಪ್ರಶ್ನೆಯ ಮೂಲಕ ಕಾರ್ಯಕ್ರಮದಲ್ಲಿ ಮಾತನ್ನು ಪ್ರಾರಂಭಿಸಿದ ಸೋಮೇಶ್ವರ ಅವರು ದೇಹ, ಆತ್ಮ, ಮನಸ್ಸು ಇವುಗಳ ಹೊಂದಾಣಿಕೆಯೇ ನಾನು ಅನ್ನೋ ವಿಚಾರವನ್ನು ಸ್ಪಷ್ಟೀಕರಿಸಿದರು. ದೇಹದ ಹೊರಭಾಗದಲ್ಲಿ ಹಾಗೂ ಒಳಭಾಗದಲ್ಲಿರುವ ಟ್ರಿಲ್ಲಿಯನ್ ಸೂಕ್ಷ್ಮಜೀವಾಣುಗಳ ಇರುವಿಕೆ/ಕಾರ್ಯವೈಖರಿ/ಸ್ನೇಹಪರತೆ/ಅವುಗಳಿಂದಾಗುವ ಉಪಕಾರ/ತೊಂದರೆಗಳನ್ನು ವಿವರಿಸುತ್ತಾ ಒಂದು ಅಚ್ಚರಿಯ ಲೋಕವನ್ನು ಅನಾವರಣಗೊಳಿಸಿದರು ಮಿದುಳು ಮತ್ತು ಕರುಳುಗಳ ನಡುವಿನ ಸೂಕ್ಷ್ಮ ಸಂಬಂಧ ಅನೇಕ ವಿಚಾರಗಳನ್ನು ವಿಸ್ತರಿಸಿದರು. (https://youtu.be/0GGKDAYjaZQ)

ದಿನಾಂಕ 06–02–2022ರಂದು ಮನೋವೈದ್ಯರಾದ ಡಾ. ಸ್ವಾಮಿನಾಥ್.ಜಿ " ನೆರವಿಲ್ಲದ ನೆಲೆಕಾಣದ ಚಿತ್ತಗಳೊಂದಿಗೆ ನನ್ನ ಸಾರ್ಥಕ ದಿನಗಳು " ಎಂಬ ವಿಷಯದ ಬಗ್ಗೆ ಮಾತಾಡುತ್ತಾ ತಮ್ಮ ಸೇವಾ ಮನೋಭಾವನೆಯ ಹಲವಾರು ಸಂಗತಿಗಳನ್ನು ಹಂಚಿಕೊಂಡರು. ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನಲ್ಲಿರುವ ಚಿತ್ತಧಾಮ ಹೆಸರಿನ ನಿರಾಶ್ರಿತರ ಮಾನಸಿಕ ಅಸ್ವಸ್ಥರ ಪುನರ್ವಸತಿ ತಾಣವನ್ನು ಸಂಪೂರ್ಣವಾಗಿ ಪರಿಚಯ ಮಾಡುವ ಮೂಲಕ ಅವರ ಸಾರ್ಥಕ ಸೇವೆಯ ವಿಚಾರಗಳನ್ನು ತಿಳಿಸಿದರು.



ವೈದ್ಯಸಂಪದ

ಚಿತ್ರಸಂಜೀವಿನಿ ಟ್ರಸ್ಟ್ ಮೂಲಕ ನಡೆಸಲ್ಪಡುತ್ತಿರುವ ಮಾನಸಿಕ ಅಸ್ವಸ್ಥರಿಗೆ ಉಚಿತ ಔಷಧ ವಿತರಣೆ ಮನೋಮಳಿಗೆಯ ಬಗ್ಗೆ ವಿವರಿಸಿದರು. ಬುಡಕಟ್ಟು ಜನರ ಜೀವನ, ಶಿಕ್ಷಣ ಮತ್ತು ಅವರ ಅಭಿವೃದ್ಧಿಗಾಗಿ ಅವರು ಕೈಗೊಂಡ ಕೆಲವು ಪ್ರಮುಖ ಯೋಜನೆಗಳನ್ನು ತಿಳಿಸಿದರು. (https://youtu.be/6EpxSmJueuY )

09–02–2022 ರಂದು ಭಾ.ವೈ.ಸಂಘ ಕರ್ನಾಟಕ ಶಾಖೆಯ ಅಕಾಡೆಮಿಕ್ ಸಬ್ ಕಮಿಟಿಯ ಆಶ್ರಯದಲ್ಲಿ 'ಮಾನಸಿಕ ಒತ್ತಡಗಳು–ವಿಧಗಳು ಮತ್ತು ವಿಧಾನಗಳು' ಎಂಬ ವಿಷಯದಲ್ಲಿ ಸಾರ್ವಜನಿಕರಿಗೆ ಆನ್‌ಲೈನ್ ಮಾಹಿತಿ ಕಾರ್ಯಕ್ರಮ ನಡೆಯಿತು. ಹಿರಿಯ ಜನಾನುರಾಗಿ ಡಾ. ಸಿ. ಆರ್. ಚಂದ್ರಶೇಖರ್ ಅವರು ಈ ಕುರಿತು ಸರಳವಾಗಿ ಮಾಹಿತಿ ಯನ್ನು ಕೊಟ್ಟರು. ಥಟ್ ಅಂತ ಹೇಳಿ ಖ್ಯಾತಿಯ ಡಾ. ನಾ.ಸೋಮೇಶ್ವರ ಅವರು ಕಾರ್ಯಕ್ರಮ ನಿರ್ವಹಿಸಿದ್ದರು. (https://youtu.be/CxxoSokw00s)



ದಿನಾಂಕ 13–02–2022ರಂದು ಪೆಥಾಲಜಿ ನಿವೃತ್ತ ಪ್ರಾಧ್ಯಾಪಕರು ಹಾಗೂ ರಂಗ ಚಿಂತಕರಾದ ಡಾ ಹೆಚ್.ಎ. ಪಾರ್ಶ್ವನಾಥ್ ರವರು "ಟಿ.ಪಿ.ಕೈಲಾಸಂ–ಒಂದು ನೆನಪು" ಎಂಬ ವಿಷಯದ ಬಗ್ಗೆ ಮಾತನಾಡಿ ಕನ್ನಡ ಪ್ರಹಸನ ಪಿತಾಮಹರೆನಿಸಿಕೊಂಡ ಟಿ.ಪಿ.ಕೈಲಾಸಂ ರವರ ಹಲವಾರು ನೆನಪುಗಳನ್ನು ಮತ್ತೆ ಮರುಕಳಿಸುವಂತೆ ಮಾಡಿದರು. ಕನ್ನಡ ರಂಗಭೂಮಿಗೆ ಅವರ ಕೊಡುಗೆ ಯಾವ ರೀತಿ ಇತ್ತು ಅನ್ನೋದಕ್ಕೆ ಸಾಕಷ್ಟು ಉದಾಹರಣೆಗಳನ್ನು ನೀಡಿದರು. ಇನ್ನು "ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ಹಲವಾರು ಮುಖಗಳು" ಇರುತ್ತವೆ ಆದರೆ ಕೈಲಾಸಂ ಮಾತ್ರ ಯಾವತ್ತು ಕೂಡಾ ಆ ರೀತಿಯ ವ್ಯಕ್ತಿತ್ವವನ್ನು ಇಟ್ಟುಕೊಂಡವರಲ್ಲ ಎನ್ನುವ ಮೂಲಕ ಅವರ ವ್ಯಕ್ತಿತ್ವ ಹೇಗಿತ್ತು ಎನ್ನುವುದನ್ನು ತಿಳಿಸಿದರು.ಅವರ ಪ್ರತ್ಯುತ್ಪನ್ನಮತಿಯ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಟ್ಟರು. (https://youtu.be/3R6ez4DTPIA)

ದಿನಾಂಕ 20–02–2022 ರಂದು ಚಿಂತಕರು ಹಾಗೂ ಲೀಡರ್ ಶಿಪ್ ಎಕ್ಸಲೆನ್ಸ್ ಸೊಲ್ಯೂಷನ್ ಪ್ರೈವೇಟ್ ಲಿಮಿಟೆಡ್ ನ ಸಿಇಒ ಆದ ಧೀರೆನ್ ಪರಮಲೆಯವರು ಅರಬಿಂದೋ ದರ್ಶನ ಎಂಬ ವಿಷಯದ ಬಗ್ಗೆ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಮುಖ್ಯವಾಗಿ ಅರಬಿಂದರು ಧರ್ಮ ಪ್ರಚಾರಕ್ಕೆ ಬಂದವರಲ್ಲ. ಆದರೆ ಅವರು ಕೇವಲ ಧರ್ಮದ ಕೆಲವು ವಿಚಾರಗಳನ್ನು ಅವರ ಅನುಯಾಯಿಗಳ ಜೊತೆ ಹಂಚಿಕೊಂಡಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಅವರು ಧರ್ಮ ಪ್ರಚಾರದ ಹಾದಿಯತ್ತ ಸಾಗಲಿಲ್ಲ ಎನ್ನುವಂತಹ ಸ್ಪಷ್ಟನೆಯನ್ನು ನೀಡಿದರು. ಉತ್ತರ ಸಿಗದ ಹಲವಾರು ಪ್ರಶ್ನೆಗಳಿಗೆ ಅರಬಿಂದರ ಸಿದ್ಧಾಂತಗಳನ್ನು ಓದಿದಾಗ ಉತ್ತರ ಸಿಕ್ಕಿದೆ ಎನ್ನುವ ತಮ್ಮ ಸ್ವಂತ ಅನುಭವವನ್ನು ವ್ಯಕ್ತ ಪಡಿಸುವ ಮೂಲಕ ಅರಬಿಂದರ ಸಿದ್ಧಾಂತಗಳ ಪ್ರೌಢಿಮೆಯನ್ನು ತೋರ್ಪಡಿಸಿದರು. ಶ್ರೋತೃವರ್ಗದ ಎಲ್ಲಾ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡುತ್ತಿದ್ದ ಧೀರೆನ್ ಅವರ ಜ್ಞಾನ ವ್ಯಾಪ್ತಿಯ ಹರಿವು ಎಲ್ಲರಿಗೂ ಅಚ್ಚರಿ ಹಾಗೂ ಹೆಮ್ಮೆ ಮೂಡಿಸಿತು. (https://youtu.be/I1ieflWiOJY)

2021 ಏಪ್ರಿಲ್ ತಿಂಗಳಿನಲ್ಲಿ ಆರಂಭವಾದ ಸಾಹಿತಿಗಳೊಂದಿಗೆ ಒಂದು ಸಂಜೆ ಕಾರ್ಯಕ್ರಮ ಪ್ರತಿವಾರವೂ ಆಯೋಜಿಸಲ್ಪಡುತ್ತಿರುವ ಕಾರ್ಯಕ್ರಮ ಸಾಹಿತ್ಯಾಭಿಮಾನಿಗಳ , ವೈದ್ಯರ ಪ್ರೋತ್ಸಾಹದಿಂದ 44 ನೇ ಸರಣಿ ಕಾರ್ಯಕ್ರಮಕ್ಕೆ ತಲುಪಿದೆ. ಮುಂದಿನ ದಿನಗಳಲ್ಲಿಯೂ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಾ, ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರನ್ನು ಬಳಗ ಈ ಮೂಲಕ ಸ್ಮರಿಸಿಕೊಳ್ಳುತ್ತದೆ.



**ಡಾ. ವೀಣಾ ಭಟ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಸ್ತ್ರೀರೋಗ ತಜ್ಞರು, ನಯನ ಆಸ್ಪತ್ರೆ ಭದ್ರಾವತಿ

ಸಾಂಸ್ಕೃತಿಕ

# ಶಾಖೆಗಳಲ್ಲಿ ಕನ್ನಡ ಕಾರ್ಯಕ್ರಮಗಳು

"ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು" ಎಂಬ ಕವಿವಾಣಿಯನ್ನು ಸ್ಮರಿಸುತ್ತಾ ಕೇವಲ ನವಂಬರ್ ತಿಂಗಳಿನಲ್ಲಷ್ಟೇ ಕನ್ನಡ ಕಾರ್ಯಕಮಗಳನ್ನ ಸೀಮಿತಗೊಳಿಸದೆ ಸಮಯ ಸಂದರ್ಭ ಸಿಕ್ಕಾಗೆಲ್ಲಾ ಭಾರತೀಯ ವೈದ್ಯಕೀಯ ಸಂಘದ ಹಲವು ಶಾಖೆಗಳು, ಹಲವು ಕನ್ನಡಪರ ಕಾರ್ಯಕಮಗಳನ್ನ, ಹಲವು




ವೈದ್ಯಕೀಯ ದಿನಾಚರಣೆಗಳನ್ನು ಕನ್ನಡದಲ್ಲಿ ಹಮ್ಮಿಕೊಂಡು ತಮ್ಮ ಕನ್ನಡ ಪ್ರೀತಿಯನ್ನು ಮೆರೆದಿದ್ದಾರೆ.

ಭಾರತೀಯ ವೈದ್ಯಕೀಯ ಸಂಘ, ಹೊನ್ನಾವರ ಶಾಖೆಯ ಮಹಿಳಾ ಘಟಕದವತಿಯಿಂದ ಜನವರಿ 24ರಂದು ಸಂತಾಇಗ್ನೇಷಿಯಸ್ ಇನ್ಸಿಟ್ಯೂಟ್ಆಫ್ಹೆಲ್ತ್ ಮತ್ತು ಸೈನ್ಸ ಕಾಲೇಜ್, ಹೊನ್ನಾವರದಲ್ಲಿ ರಾಷ್ಟ್ರೀಯ ಹೆಣ್ಣುಮಕ್ಕಳ ರಕ್ಷಣಾದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಡಾ. ಅನುಪಮ. ಹೆಚ್. ಎಸ್ ರವರು ಆಗಮಿಸಿದರು. ಈ ಕಾರ್ಯಕ್ರಮದಲ್ಲಿ ಐ.ಎಂ.ಎ ಮಹಿಳಾಘಟಕದ ಅಧ್ಯಕ್ಷರಾದ ಮಂಜುಳಾ ಯುವರಾಜ್, ಕಾರ್ಯದರ್ಶಿಯಾದ ವೈಶಾಲಿನಾಯ್ಕ, ಸಿಸ್ಟರ್ ರೀಟಾ, ಡಾ.ಶಬೂರಾ ಬಿ.ವಿ. ಹಾಗೂ ಸಂತಾಇಗ್ನೇಷಿಯಸ್ ಇನ್ಸಿಟ್ಯೂಟ್ ಆಫ್ ಹೆಲ್ತ್ ಮತ್ತು ಸೈನ್ಸ ಕಾಲೇಜ್ ಹೊನ್ನಾವರದ ಪ್ರಾಂಶುಪಾಲರಾದ ಸಿಸ್ಟರ್ ಡಯಾನಾರವರು ಉಪಸ್ಥಿತರಿದ್ದರು. ಡಾ.ಮಂಜುಳಾಯುವರಾಜ್‌ರವರು ಎಲ್ಲರನ್ನು ಸ್ವಾಗತಿಸಿದರು. ಡಾ. ಅನುಪಮ ಹೆಚ್. ಎಸ್. ಮಾತನಾಡಿ ಸಮಾಜದಲ್ಲಿ ಹೆಣ್ಣುಮತ್ತು ಗಂಡು ಇಬ್ಬರೂ ಸಮಾನರು. ಸಮಾಜದಲ್ಲಿ ಹೆಣ್ಣಿನ ಮಹತ್ವ ಹಾಗೂ ಅವಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಕಿರುನಾಟಕದ ಮೂಲಕ ಹೆಣ್ಣುಮಕ್ಕಳ ರಕ್ಷಣೆಗಾಗಿ ಕೈ ಜೋಡಿಸೋಣ ಎಂದರು. ಹೆಣ್ಣುಮಕ್ಕಳ ರಕ್ಷಣಾದಿನಾಚರಣೆಯ ಪ್ರಯುಕ್ತ ಆಯೋಜಿಸಲಾಗಿದ್ದ ಚಿತ್ರಕಲಾ ಹಾಗೂ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ





ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು ಮತ್ತು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಸಮಾಧಾನಕರ ಬಹುಮಾನ ವಿತರಿಸಲಾಯಿತು. ಈ ಶಾಖೆಯಿಂದ ಕ್ರೀಡಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ವೈಶಾಲಿ ವಂದಿಸಿದರು.




ಭಾರತೀಯ ವೈದ್ಯಕೀಯ ಸಂಘ ಸುಳ್ಯ ಶಾಖೆ ಮತ್ತು ಮಹಿಳಾ ವೈದ್ಯಕೀಯ ಘಟಕದವತಿಯಿಂದ ರಾಷ್ಟ್ರೀಯ ಹೆಣ್ಣುಮಗು ದಿನಾಚರಣೆಯ ಕಾರ್ಯಗಾರವನ್ನು ದಿನಾಂಕ 23ರ ಜನವರಿ ಭಾನುವಾರ ಆನ್‌ಲೈನ್ ಮುಖಾಂತರ ಹಮ್ಮಿಕೊಳ್ಳಲಾಗಿತ್ತು. ಸುಳ್ಯದ ವೃತ್ತ ನಿರೀಕ್ಷಕರಾದ ನವೀನ್‌ಚಂದ್ರ ಜೋಗಿರವರು "ಹೆಣ್ಣು ಮಗು ಮತ್ತು ಕಾನೂನು" ಕುರಿತು ಮಾತನಾಡಿ ಸದ್ಯದ ಪರಿಸ್ಥಿತಿಯಲ್ಲಿ ಹೆಣ್ಣು ಮಕ್ಕಳಿಗೆ ಯಾವ ಯಾವ ಕಾನೂನುಗಳು ಅನ್ವಯವಾಗುತ್ತವೆ ಹಾಗೂ ಕಾನೂನು ಅಂದರೆ ಏನು ಎಂಬ ಸೂಕ್ಷ್ಮ ವಿಚಾರಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಆಪ್ತಸಮಾಲೋಚಕರಾದ ಶ್ರೀಮತಿ ಮೀನಾಕುಮಾರಿಯವರು "ಮಕ್ಕಳ ಮನದ ಅರಳುವಿಕೆ" ಎಂಬ ವಿಷಯದ ಬಗ್ಗೆ ಮಾತನಾಡಿ ಹೆಣ್ಣುಮಕ್ಕಳ ರಕ್ಷಣೆ ಹಾಗೂ ಸಮಾನತೆ ಬಗ್ಗೆ ವಿಶ್ಲೇಷಿಸುತ್ತಾ ಹೆಣ್ಣು ಮಕ್ಕಳ ಮುಂದೆ ಇರುವಂತಹ ಹಲವಾರು ಸವಾಲುಗಳನ್ನು ತೆರೆದಿಟ್ಟರು.

ಸ್ತ್ರೀ ಆರೋಗ್ಯ ತಜ್ಞರಾದ ಡಾ.ವೀಣಾ.ಎನ್ ಸುಳ್ಯರವರು ಸಂಸ್ಕೃತಿ ಸಂರಕ್ಷಣೆ ಎಂಬ ವಿಷಯದ ಬಗ್ಗೆ ಮಾತಾಡುತ್ತಾ ಸಂಸ್ಕೃತಿ ಅನ್ನೋ ಪದದ ಅರ್ಥದಿಂದ ತಮ್ಮ ವಿಷಯ ಮಂಡನೆಯನ್ನು ಪ್ರಾರಂಭಮಾಡಿ, ಒಬ್ಬ ವ್ಯಕ್ತಿಗೆ ಆತನ ಬದುಕಿನಲ್ಲಿ ಸಂಸ್ಕೃತಿ ಎಷ್ಟು ಪ್ರಾಮುಖ್ಯತೆಯನ್ನು ಉಂಟುಮಾಡುತ್ತದೆ ಅನ್ನುವುದನ್ನು ತಿಳಿಸಿಕೊಟ್ಟರು. ಪ್ರಾಚೀನ ಇತಿಹಾಸದಿಂದ ಈಗಿನ ಆಧುನಿಕ ಇತಿಹಾಸದಲ್ಲಿ ಸಂಸ್ಕೃತಿಯ ಪಾತ್ರ ಎಂಥದ್ದು ಎನ್ನುವ ವಾಸ್ತವತೆಯನ್ನು ತಿಳಿಸಿದರು. ಬಳಿಕ ಸ್ತ್ರೀರೋಗ ತಜ್ಞರಾದ ಡಾ. ಗೀತಾದೊಪ್ಪರವರು "ಹೆಣ್ಣು ಮಗುವಿನ ರಕ್ಷಣೆಯ ಅಗತ್ಯ" ಎಂಬ ವಿಷಯದ ಬಗ್ಗೆ ಮಾತನಾಡಿದರು. ಹೆಣ್ಣು ಮಕ್ಕಳ ರಕ್ಷಣೆಯ ವಿಚಾರದಲ್ಲಿ ತಂದೆ ತಾಯಿಗಳ ಕರ್ತವ್ಯ ಹೇಗಿರಬೇಕು ಅನ್ನುವುದರ ಬಗ್ಗೆ ತಿಳಿಸಿದರು. ಐ.ಪಿ.ಎಸ್ ಪೋಲಿಸ್ ಅಧೀಕ್ಷರು ಮತ್ತು ಪ್ರಾಂಶುಪಾಲರಾದ ಡಾ.ಧರಣಿದೇವಿ ಮಾಲಗತ್ತಿರವರು ಮಹಿಳಾಸಬಲೀಕರಣದ ಬಗ್ಗೆ ಸಂವಾದ ನಡೆಸಿಕೊಟ್ಟರು. ಮಹಿಳೆಯರ ಮೇಲೆ ದೌರ್ಜನ್ಯಗಳಾಗುವುದಕ್ಕೆ ಕಾರಣಗಳೇನು? ಇದರಿಂದ ಉಂಟಾಗುವಂತಹ ಪರಿಣಾಮಗಳೇನು? ಹಾಗೂ ಇದನ್ನು ತಡೆಗಟ್ಟಲು ಯಾವ ಕ್ರಮಕೈಗೊಳ್ಳಬೇಕು ಎನ್ನುವಬಗ್ಗೆ ತಿಳಿಸಿಕೊಟ್ಟರು.

ದಿನಾಂಕ 24ರಂದು 660 ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು "ಹೆಣ್ಣಾಗಿರುವುದು ನನಗೆ ಹೆಮ್ಮೆ" ಎಂಬವಿಷಯದ ಬಗ್ಗೆ ವಿದ್ಯಾರ್ಥಿನಿಯರಿಗೂ ಹಾಗೂ ಗಂಡುಮಕ್ಕಳಿಗೆ "ಹೆಣ್ಣನ್ನು ನಾನೂ ಗೌರವಿಸುತ್ತೇನೆ" ಎಂಬ ವಿಷಯಗಳ ಬಗ್ಗೆ ಪ್ರಬಂದ ಸ್ಪರ್ಧೆ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಒಟ್ಟು 66 ವಿದ್ಯಾಥಿಗಳಿಗೆ ಬಹುಮಾನವಿತರಣೆ ಮಾಡಲಾಯಿತು.




ಸುಳ್ಯ ಶಾಖೆಯಿಂದ ವೈದ್ಯವಾರ್ತೆ ಎನ್ನುವ ದ್ವೈಮಾಸಿಕ ಪತ್ರಿಕೆ ಆರಂಭವಾಗಿ ಮೊದಲನೆ ಸಂಚಿಕೆ



# ವೈದ್ಯ ವಾರ್ತೆ

ಸಂಚಿಕೆ-1 | ಡಿಸೆಂಬರ್ - ಜನವರಿ 2021-22

ಸುಳ್ಯ ಭಾರತೀಯ ವೈದ್ಯ ಸಂಘದ 2021-22ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ವೀಣಾ ಎನ್., ಕಾರ್ಯದರ್ಶಿ ಡಾ. ರವಿಕಾಂತ್ ಜಿ.ಒ. ಅವರ ನೇತೃತ್ವ ತಂಡದ ಪದ ಪ್ರಧಾನ ಸಮಾರಂಭ ನವೆಂಬರ್ 19ರಂದು ಸುಳ್ಯದ ರೋಟರಿ ಸಮುದಾಯ ಭವನದಲ್ಲಿ ನಡೆಯಿತು. ಭಾರತಿಯ ವೈದ್ಯಕೀಯ ಸಂಘದ ರಾಜ್ಯಾಧ್ಯಕ್ಷ ಡಾ. ಸುರೇಶ್ ಕುದ್ದ ಅನುಸ್ಥಾಪನಾ ಅಧಿಕಾರಿಯಾಗಿದ್ದರು. ಸುಳ್ಯ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ. ಕೆ.ವಿ.ಚಿದಾನಂದರು ಮುಖ್ಯ ಅತಿಥಿಗಳಾಗಿದ್ದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಜಿ.ಕೆ. ಭಟ್ ಹಾಗೂ ರಾಜ್ಯಾಧ್ಯಕ್ಷ ಡಾ. ಸುರೇಶ್ ಕುದ್ದರನ್ನು ಸನ್ಮಾನಿಸಲಾಯಿತು.

## IMA SUBCOMMITTEE

1) Public health awareness committee members:
Dr C R Bhat
Dr Himakar
Dr Venkatakrishna
Dr Geeta Doppa
Dr Karunakar
Dr Prakash Rao
Dr Tara
Dr Bhavya
Dr Rajani
Dr Bhavanishankar
Dr Sowmya

2) Communicable disease subcommittee members:
Dr Dinesh
Dr Amith
Dr Nandakumar
Dr Saigeetha
Dr Namratha
Dr Vidyashambhava Pare

3) Sports subcommittee members:
Dr Bharath Shetty
Dr Ravikanth G O
Dr Shrikrishna Bhat
Dr Roshan
Dr Ranjith
Dr Saigeetha

4) School health program subcommittee members:
Dr Nandakumar
Dr Rajani
Dr sowmya
Dr Geeta Doppa
Dr Bhavya
Dr Bhavanishankar

5) Building maintenance committee members:
Dr Veena N
Dr Ravikanth G O
Dr Sowmya
Dr Shrikrishna Bhat
Dr Ravishankar Bhat
Dr Ganesh Bhat
Dr Rangayya
Dr Umashankar Borkar

6) Antiquackery subcommittee members
Dr Sadashiva rao
Dr J P Pare
Dr Sudhakar
Dr Rangayya
Dr Ranganath
Dr Bharath Shetty
Dr Karunakar
Dr Nandakumar
Dr Navya
Dr Aruna C R Bhat

7) Academic committee members:
Dr C R Bhat
Dr Venkatakrishna
Dr Navya
Dr Geeta Doppa
Dr Umashankar Borkar
Dr Ravishankar Bhat
Dr Aruna C R Bhat

Dr. K.V. Chidananda
Member for Drugs and Equipment Sub Commitee

Dr. Geetha Doppa
Chairperson, IMA KSB Women Doctors Wing

Dr. Veena N
Member Vaidya Barahagara Samithi

Dr. Sathish Aithal
Member Pharmacovigilance Sub Committee

ಭಾರತೀಯ ವೈದ್ಯಕೀಯ ಸಂಘ, ಸುಳ್ಯ 1

ಬಿಡುಗಡೆಯಾಗಿದೆ ಮತ್ತು ಅದು ಆ ಶಾಖೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಮಗ್ರವಾಗಿ ಒಳಗೊಂಡಿರುತ್ತದೆ.

ಭದ್ರಾವತಿ ಐ.ಎಂ.ಎ ಹಾಗೂ ಮಹಿಳಾವೈದ್ಯರ ಉಪಸಮಿತಿಯಿಂದ ವಿಶ್ವಹೆಣ್ಣುಮಗುವಿನ ದಿನಾಚರಣೆಯ ಅಂಗವಾಗಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಹಾಗೂ ನಯನ ಸಭಾಂಗಣದಲ್ಲಿ ಆಚರಿಸಲಾಯಿತು. ಡಾ. ಕವಿತಾ ಸದಾಶಿವ್ ಹಾಗೂ ಡಾ.ವೀಣಾಭಟ್‌ರವರು ಹೆಣ್ಣುಮಗುವಿನ ದಿನಾಚರಣೆಯ ಪ್ರಾಮುಖ್ಯತೆಯಬಗ್ಗೆ, ಹದಿಹರೆಯದ ಹೆಣ್ಣುಮಕ್ಕಳ ಆರೋಗ್ಯ, ಕಾಪಾಡಿಕೊಳ್ಳುವ ಬಗ್ಗೆ ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿಕೊಟ್ಟರು.

ಸಿರಸಿ ಐ.ಎಂ.ಎಯ ಕನ್ನಡಬಳಗ ಇನ್ನಿತರ ಸಂಘಟನೆಗಳ ಸಹಯೋಗದಲ್ಲಿ ಜನವರಿ 8 ರಂದು ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರಿಂದ ವಚನ ಸಾಹಿತ್ಯದಲ್ಲಿ ಸ್ವಾಸ್ಥ್ಯ ಕುರಿತಾಗಿ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರ ಜ್ಞಾನದ ಕಣಜವಾದ ವಚನ ಸಾಹಿತ್ಯದಲ್ಲಿ ಸಮಾಜದ ಸ್ವಾಸ್ಥ್ಯ ಮತ್ತು ವ್ಯಕ್ತಿಯ ಆರೋಗ್ಯದ ಕುರಿತು ಸರ್ವಕಾಲದಲ್ಲಿಯೂ ಪ್ರಸ್ತುತವಾದ ಅನೇಕ ಚಿಂತನೆಗಳನ್ನ ತಮ್ಮ ಅಧ್ಯಯನಪೂರ್ಣ ಜ್ಞಾನವನ್ನ ಹಂಚಿಕೊಂಡರು. ಜನವರಿ 24 ರಾಷ್ಟ್ರೀಯ ಹೆಣ್ಣುಮಕ್ಕಳದಿನವಾಗಿ ಐ.ಎಂ.ಎ ಮಹಿಳಾವೈದ್ಯರ ಸಂಘಟನೆಯಿಂದ ಪ್ರೌಢಶಾಲಾ ಮಕ್ಕಳಿಗೆ ಸಮಾಜಕ್ಕೆ ಹೆಣ್ಣಿನಮಹತ್ವದ ಕುರಿತು ಕನ್ನಡ ನಿಬಂಧ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸಲಾಯಿತು. ಆ ಶಾಖೆಯಿಂದ ಕ್ಯಾನ್ಸರ್ ಸ್ಕ್ರೀನಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಹಾಸನ ಐಎಂಎ ವತಿಯಿಂದ ವಿಶ್ವಕ್ಯಾನ್ಸರ್ ದಿನಾರಚರಣೆಯ ಸಲುವಾಗಿ ಕ್ಯಾನ್ಸರ್ ಬಗ್ಗೆ ಮುಖ್ಯವಾಗಿ ಸ್ತನ ಹಾಗೂ ಗರ್ಭಕೊರಳಿನ ಕ್ಯಾನ್ಸರ್ ಬಗ್ಗೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಅರಿವು ಮೂಡಿಸುವ ಹಾಗೂ ಸ್ಕ್ರೀನಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.




ಹೊಸಪೇಟೆ ಹಾಗೂ ಬೆಳಗಾಂ, ಹುಬ್ಬಳ್ಳಿ ಶಾಖೆ ಹಾಗೂ ಇನ್ನಿತರ ಶಾಖೆಗಳು ವಿಶ್ವಹೆಣ್ಣುಮಗುವಿನ ದಿನಾಚರಣೆಯನ್ನು ಹಾಗೂ ವಿಶ್ವಕ್ಯಾನ್ಸರ್ ದಿನಾಚರಣೆಯನ್ನು ಆಚರಿಸಿ ಹಲವು ಅರಿವು ಕಾರ್ಯಕ್ರಮಗಳನ್ನು ಕನ್ನಡದಲ್ಲಿ ಹಮ್ಮಿಕೊಂಡು ತಮ್ಮ ಕನ್ನಡ ಪ್ರೇಮವನ್ನು ಮೆರೆದಿದ್ದಾರೆ. ಹೀಗೆ ಭಾರತೀಯ ವೈದ್ಯಕೀಯ ಸಂಘದ ರಾಜ್ಯದಾದ್ಯಂತ ಎಲ್ಲಾ ಶಾಖೆಗಳು ಹೆಚ್ಚು ಹೆಚ್ಚು ಕನ್ನಡ ಪರಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ. ಅದು ಕೇವಲ ವೈದ್ಯಕೀಯ ಅರಿವನ್ನು ಜನಸಾಮಾನ್ಯರಲ್ಲಿ ಹೆಚ್ಚಿಸುವುದಷ್ಟೇ ಅಲ್ಲಾ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಕನ್ನಡವನ್ನು ಶ್ರೀಮಂತಗೊಳಿಸುವತ್ತ ಕಾರ್ಯೋನ್ಮುಖವಾಗಲಿ, ಹೆಚ್ಚು ಹೆಚ್ಚು ಕನ್ನಡ ಬಳಗ ಐಎಂಎ ಶಾಖೆಗಳಲ್ಲಿ ಉದ್ಘಾಟನೆಯಾಗಿ ಕನ್ನಡಪರ ಕಾರ್ಯಕ್ರಮಗಳು ಹೆಚ್ಚುತ್ತಾ ಹೋಗಲಿ ಎಂದು ಆಶಿಸುತ್ತಾ.





ಆರೋಗ್ಯ ದಿನಾಚರಣೆ



# ವಿಶ್ವ ಗ್ಲಾಕೋಮಾ ವಾರಾಚರಣೆಯ ಕುರಿತು

**ಡಾ. ರಶ್ಮಿ ಕುಂದಾಪುರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಪೃಥ್ವಿ, ಬೀಜಾಡಿ ಗ್ರಾಮ,ಕೋಟೇಶ್ವರ ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮಾರ್ಚ 6 ರಿಂದ 12 ರ ವರೆಗೆ ವಿಶ್ವ ಗ್ಲಾಕೋಮಾ ವಾರಾಚರಣೆ ಆಚರಿಸಲ್ಪಡುತ್ತದೆ. ಜಗತ್ತಿನಲ್ಲಿ ತಡೆಗಟ್ಟಬಹುದಾದ ಕುರುಡುತನಕ್ಕೆ ಬಹು ಮುಖ್ಯ ಕಾರಣ ಗ್ಲಾಕೋಮಾ ಎಂದು ಕಂಡು ಬಂದಿದೆ. ವಿಶ್ವದಲ್ಲಿ 4.5 ಮಿಲಿಯನ್ ಜನ ಗ್ಲಾಕೋಮಾದಿಂದ ಕುರುಡರಾಗಿದ್ದಾರೆಂದು ಕಂಡು ಬಂದಿದೆ. ಭಾರತದಲ್ಲಿ ಸುಮಾರು 12 ಮಿಲಿಯನ್ ಜನ ಈ ರೋಗದಿಂದ ಬಳಲುತ್ತಿದ್ದು 1.2 ಮಿಲಿಯನ್ ಜನ ಶಾಶ್ವತರಾಗಿ ಕುರುಡರಾಗಿರುವುದು ತಿಳಿದುಬಂದಿದೆ. ಶೇ 90 ರಷ್ಟು ರೋಗಿಗಳಿಗೆ ಗ್ಲಾಕೋಮಾ ಇರುವುದರ ಕುರಿತು ಅರಿವು ಇರುವುದಿಲ್ಲ.


ಗ್ಲಾಕೋಮಾದ ಕುರಿತು ಅರಿವನ್ನು ಮೂಡಿಸುವುದು ಗ್ಲಾಕೋಮಾ ದಿನಾಚರಣೆಯ ಮುಖ್ಯ ಉದ್ದೇಶ. ಈ ಕಾಯಿಲೆಯ ಕುರಿತು ಅರಿವು, ತಪಾಸಣೆ ಮತ್ತು ಚಿಕಿತ್ಸೆಯನ್ನು ಎಲ್ಲರಿಗೂ ತಲುಪಿಸಬೇಕಾಗಿದೆ. ಕಾಯಿಲೆ ನಿಯಂತ್ರಣಕ್ಕೆ ಕಾಯಿಲೆಯಿರುವ ಕುರಿತು ಅರಿವು ಮುಖ್ಯ. ಈ ಕಾಯಿಲೆಯ ಕುರಿತು ಮಾಹಿತಿ ಇಲ್ಲದಿರುವುದರಿಂದ ಮತ್ತು ಕಾಯಿಲೆಯ ಚಿಹ್ನೆಗಳ ಕುರಿತು ಅರಿವು ಇಲ್ಲದೆ ಇರುವುದರಿಂದ ರೋಗಿಗಳು ರೋಗ ಉಲ್ಬಣಗೊಂಡ ನಂತರ ಕಣ್ಣಿನ ವೈದ್ಯರನ್ನು ಸಂಪರ್ಕಿಸುತ್ತಾರೆಂದು ತಿಳಿದು ಬಂದಿದೆ. ಅಂತಹ ಸಂದರ್ಭಗಳಲ್ಲಿ ದೃಷ್ಟಿಯನ್ನು ಉಳಿಸುವುದು ಸಾಧ್ಯವಾಗುವುದಿಲ್ಲ.

ಗ್ಲಾಕೋಮಾ ಎಂದರೇನು – ಗ್ಲಾಕೋಮಾ ಕಾಯಿಲೆಯಲ್ಲಿ ಕಣ್ಣಿನ ಒಳ ಒತ್ತಡ ಹೆಚ್ಚಾಗುತ್ತದೆ. ಇದರಿಂದಾಗಿ ಕಣ್ಣಿನ ನರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಕ್ರಮೇಣ ಕಣ್ಣಿನ ನರ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಇದರಿಂದಾಗಿ ದೃಷ್ಟಿ ಕಡಿಮೆಯಾಗುತ್ತದೆ ಮತ್ತು ಶಾಶ್ವತ ಕುರುಡುತನ ಉಂಟಾಗುತ್ತದೆ. ಗ್ಲಾಕೋಮಾಗಳಲ್ಲಿ ಎರಡು ವಿಧ – ಒಪನ್ ಆಂಗಲ್ ಮತ್ತು ಕ್ಲೋಜ ಆಂಗಲ್. ಸಾಮಾನ್ಯವಾಗಿ ವಯಸ್ಸಾದವರಲ್ಲಿ ಕಂಡು ಬರುವ ಈ ಸಮಸ್ಯೆ 60 ವರುಷ ಮೇಲ್ಪಟ್ಟವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಒಪನ್ ಆಂಗಲ್ ಗ್ಲಾಕೋಮಾದಲ್ಲಿ ಮೊದಲಿಗೆ ಯಾವುದೇ ಚಿಹ್ನೆಗಳು ಕಂಡು ಬರುವುದಿಲ್ಲ. ದೃಷ್ಟಿಯು ಕ್ರಮೇಣವಾಗಿ ಕಡಿಮೆ ಯಾಗುವುದರಿಂದ ಈ ಕುರಿತು ಶಂಕೆಯೂ ಉಂಟಾಗುವುದಿಲ್ಲ. ದೃಷ್ಟಿ ಬಹಳಷ್ಟು ಕಡಿಮೆಯಾದ ನಂತರವೇ ಬಹಳಷ್ಟು ರೋಗಿಗಳು ಕಣ್ಣಿನ ವೈದ್ಯರನ್ನು ಸಂಪರ್ಕಿಸುವರು. ಗ್ಲಾಕೋಮಾ ರೋಗಕ್ಕೆ ಸಂಪೂರ್ಣ



ಪರಿಹಾರವಿರುವುದಿಲ್ಲ. ಇದಕ್ಕಾಗಿ ಕಣ್ಣಿನ ಔಷಧಿಗಳನ್ನು ಜೀವನ ಪರ್ಯಂತ ಉಪಯೋಗಿಸಬೇಕಾಗುತ್ತದೆ. ಆಂಗಲ್ ಕ್ಲೋಜರ್ ಗ್ಲಾಕೋಮಾ ತುರ್ತು ಪರಿಸ್ಥಿತಿ. ತಲೆ ನೋವು, ಕಣ್ಣಿನ ನೋವು, ವಾಂತಿ ಬರುವುದು, ಕಣ್ಣು ಕೆಂಪಾಗುವುದು ಕಂಡು ಬರುತ್ತದೆ. ಕೂಡಲೇ ಚಿಕಿತ್ಸೆ ನೀಡದಿದ್ದರೆ ಶಾಶ್ವತ ಕುರುಡುತನ ಶೀಘ್ರದಲ್ಲಿ ಕಂಡು ಬರುತ್ತದೆ. ಗ್ಲಾಕೋಮಾ

ವೈದ್ಯಸಂಪದ




ಅನುವಂಶೀಯವೆಂದೂ ಕಂಡು ಬಂದಿದೆ.

ಯಾರಲ್ಲಿ ಗ್ಲಾಕೋಮಾ ಹೆಚ್ಚಾಗಿ ಕಂಡು ಬರುವುದು – 60 ವರುಷ ಮೇಲ್ಪಟ್ಟವರಲ್ಲಿ, ಕುಟುಂಬದಲ್ಲಿ ಹಿರಿಯರಿಗೆ ಗ್ಲಾಕೋಮಾ ಇದ್ದರೆ, ಅತಿ ದಪ್ಪ ಕನ್ನಡಕದ ಅವಶ್ಯಕತೆ ಇರುವವರು, ಕಣ್ಣಿಗೆ ಯಾವಾಗಲಾದರೂ ಪೆಟ್ಟು ಬಿದ್ದಿದ್ದರೆ, ಸ್ಟಿರಾಯಿಡ ಬಳಸುವವರಲ್ಲಿ, ಮಧುಮೇಹ, ಅಧಿಕ ರಕ್ತ ದೊತ್ತಡ ಮತ್ತು ಹೃದಯ ರೋಗಿಗಳಲ್ಲಿ ಕಂಡು ಬರುವ ಸಂಭವನೀಯತೆ ಹೆಚ್ಚು.

ದೃಷ್ಟಿಯೆನ್ನುವುದು ದೇಹದ ಆರೋಗ್ಯವನ್ನು ಪ್ರತಿನಿಧಿಸುತ್ತದೆ. ಹಾಗಾಗಿ ದೃಷ್ಟಿ ದೋಷ ಅನ್ನುವುದು ನಮ್ಮ ಜೀವನದ ಗುಣಮಟ್ಟವನ್ನು ಗಣನೀಯವಾಗಿ ಕಡಿಮೆಗೊಳಿಸುತ್ತದೆ. ನಿಯಮಿತವಾಗಿ ಚಿಕಿತ್ಸೆ ಹಾಗೂ ನಿರ್ದಿಷ್ಟ ಪರೀಕ್ಷೆಗಳು ಗ್ಲಾಕೋಮಾ ಕಾಯಿಲೆಯಿಂದ ರಕ್ಷಣೆಗೆ ಅತಿ ಅವಶ್ಯಕ.

ಈ ವರ್ಷದ ಗ್ಲಾಕೋಮಾ ದಿನಾಚರಣೆಯ ಘೋಷಣೆ "ನಮ್ಮ ಸುತ್ತಲಿನ ಪ್ರಪಂಚ ಮೋಡಿ ಮಾಡುವಷ್ಟು ಸುಂದರ ಸಾಹಸ ಭರಿತವಾಗಿದೆ. ಈ ಲೋಕ ಬೆಳಕಾಗಿದೆ, ನಿಮ್ಮ ಕಣ್ಣುಗಳ ದೃಷ್ಟಿಯ ಬೆಳಕನ್ನು ಕಾಪಾಡಿಕೊಳ್ಳಿ".

ಪಂಚೇಂದ್ರಿಯಗಳು ಮನುಷ್ಯನ ಬದುಕಿನ ಅವಶ್ಯಕತೆ ಅನ್ನಿಸಿದರೂ ತಾನಾಗಿ ಸಿಗುವ ಇವುಗಳ ಬಗ್ಗೆ ಮನುಷ್ಯನ ಸದಾ ಅಸಡ್ಡೆ ಕಣ್ಣಿನ ಆರೋಗ್ಯದ ಕುರಿತು ಗಮನ ಹರಿಸುವುದು ದೃಷ್ಟಿಯನ್ನು ಕಾಪಾಡಿಕೊಳ್ಳುವುದು ಅವಶ್ಯಕ. ಗ್ಲಾಕೋಮಾ ದಿನಾಚರಣೆಯ ಮೂಲಕ ಕಾಯಿಲೆಯ ಕುರಿತು ಜಾಗೃತಿ ಯನ್ನು ವಾರಾದ್ಯಾಂತ ಮೂಡಿಸಲು ಪ್ರಯತ್ನಿಸಲಾಗುವುದು. ಕಾಯಿಲೆ ಬರುವ ಪೂರ್ವದಲ್ಲಿ ಕಣ್ಣಿನ ಪರೀಕ್ಷೆಗಳನ್ನು ನಿಯಮಿತವಾಗಿ ಮಾಡಿಸುವುದರಿಂದ ಗ್ಲಾಕೋಮಾದಂತಹ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆಯನ್ನು ಆರಂಭಿಸಬಹುದು ಮತ್ತು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಬಹುದು. o

3ನೇ ಪುಟದಿಂದ

ಸೆಪ್ಟೆಂಬರ 27, 2021 ರಂದು ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಆಯುಷ್ಮಾನ ಭಾರತ ಡಿಜಿಟಲ್ ಮಿಶನ್ ಕುರಿತು ಘೋಷಿಸಿದ್ದರು. ಇದನ್ನು ಪೂರ್ಣರೂಪದಲ್ಲಿ ಅನುಷ್ಠಾನಗೊಳಿಸುವುದಾಗಿ ವಿತ್ತ ಮಂತ್ರಿಗಳು ತಿಳಿಸಿದ್ದಾರೆ. ಎಲ್ಲಾ ಆರೋಗ್ಯ ಸೌಲಭ್ಯಗಳು, ಯೋಜನೆಗಳು, ಆರೋಗ್ಯ ಸೌಲಭ್ಯ ಒದಗಿಸುವ ಸಂಸ್ಥೆಗಳು ಮತ್ತುಆರೋಗ್ಯ ಅಂಕಿ ಅಂಶಗಳು, ಪ್ರತಿಆರೋಗ್ಯ



ಮಾಹಿತಿಯನ್ನು ಸಂಪೂರ್ಣವಾಗಿ ಗಣೀಕೃತಗೊಳಿಸುವ ಮತ್ತು ಸಾರ್ವತ್ರಿಕವಾಗಿ ಲಭ್ಯ ಮಾಡುವ ಬೃಹತ್‌ಯೋಜನೆಯ ಮಾರ್ಗಸೂಚಿಯಕುರಿತುಕೇಂದ್ರ ಸರಕಾರಕಾರ್ಯ ನಿರ್ವಹಿಸುತ್ತಿರುವುದಾಗಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿಗೆ ತಿಳಿಸಿದ್ದಾರೆ. ಇದು ಮುಂದಿನ ದಿನಗಳಲ್ಲಿ ಆರೋಗ್ಯಕ್ರಾಂತಿಗೆ ನಾಂದಿಯಾಗಲಿದೆ.

ಮಾನಸಿಕ ಆರೋಗ್ಯಕ್ಕೆ ಒತ್ತು ನೀಡಿದ್ದು 23 ಟೆಲಿ ಮಾನಸಿಕ ಆರೋಗ್ಯ ಕೇಂದ್ರಗಳನ್ನು ದೇಶಾದ್ಯಂತ ಆರಂಭಿಸಲಾಗುವುದು. ಬೆಂಗಳೂರಿನ ನಿಮ್ಹಾನ್ಸ ನೋಡಲ್ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ಭಾರತೀಯ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಈ ಯೋಜನೆಗೆ ತಂತ್ರಜ್ಞಾನ ಸಹಾಯ ನೀಡಲಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ನಾತಕೋತ್ತರ ವೈದ್ಯಕೀಯ ಮತ್ತು ಸಂಶೋಧನಾಕೇಂದ್ರ ಸ್ಥಾಪಿಸಲು ಯೋಜನೆ ಸಿದ್ಧವಾಗಿದ್ದುಇದಕ್ಕಾಗಿ 425 ಕೋಟಿರೂ ಗಳ ಸಹಾಯವನ್ನುಸುಶ್ಮಿತ ಮತ್ತು ಸುಬ್ರತೊಬಾಗ್ಚಿ ಹಾಗೂ ರಾಧಾ ಮತ್ತುಎನ್‌ಎಸ್ ಪಾರ್ಥಸಾರಥಿಅವರು ನೀಡಲಿದ್ದಾರೆ.800 ಹಾಸಿಗೆಯ ಸುಸಜ್ಜಿತ ಬಹು ವೈದ್ಯಕೀಯ ಸೌಲಭ್ಯವಿರುವ ಬಾಗ್ಚಿ ಪಾರ್ಥಸಾರಥಿಆಸ್ಪತ್ರೆಯಜೊತೆಗೆ ಸಂಶೋಧನಾಸಂಸ್ಥೆ 2024 ರಲ್ಲಿ ಪ್ರಾರಂಭವಾಗಲಿದೆ.ಇದು ಭಾರತೀಯ ವೈದ್ಯಕೀಯಇತಿಹಾಸದಲ್ಲಿ ಹೊಸ ಮೈಲಿಗಲ್ಲಾಗಲಿದೆ. ತಂತ್ರಜ್ಞಾನದ ಬೆಳವಣಿಗೆಗೆ ಭಾರತೀಯ ವಿಜ್ಞಾನ ಸಂಸ್ಥೆಯಕೊಡುಗೆಅಪಾರವಾಗಿದ್ದು ವೈದ್ಯಕೀಯ ಸಂಶೋಧನೆಗೆ ಮತ್ತುಆಧುನಿಕ ವೈದ್ಯ ಪದ್ಧತಿ ಬೆಳವಣಿಗೆಗೆ ಹೊಸ ದಿಕ್ಸೂಚಿಯಾಗಲಿದೆ. ವಿಶ್ವ ವಿಖ್ಯಾತ ಹಾರ್ವರ್ಡ, ಹಾಪ್ಕಿನ್ಸ್ ಮತ್ತುಟೊರೊಂಟೊ ಮಾದರಿಯಲ್ಲಿ ವಿದ್ಯಾಲಯವನ್ನು ಬೆಳೆಸುವ ಗುರಿಯನ್ನು ಹೊಂದಲಾಗಿದ್ದು ವೈದ್ಯಕೀಯ ಸಂಶೋಧನೆಗೆಒತ್ತು ನೀಡುವಎಂಡಿಪಿಎಚ್‌ಡಿಪದವಿಗಳನ್ನು ಆರಂಭಿಸಲಾಗುತ್ತಿದೆ.

ಪ್ರವಚನ, ಸಂವಾದಗಳ ಮೂಲಕ ಭಾವೈಕ್ಯತೆಯ ಸಂದೇಶಗಳನ್ನು ಸಾರುತ್ತಿದ್ದಕನ್ನಡದಕಬೀರಎಂದೇ ಪ್ರಖ್ಯಾತರಾಗಿದ್ದ ಪದ್ಮಶ್ರೀ ಪುರಸ್ಕೃತಇಬ್ರಾಹಿಂ ಸುತಾರಅವರ ನಿಧನತುಂಬಲಾರದ ನಷ್ಟ. ತಮ್ಮ ಮಧುರಕಂಠದ ಮೂಲಕ ಭಾರತದ ಮನೆ ಮನೆಯಲ್ಲೂ ಹೆಸರು ವಾಸಿಯಾಗಿದ್ದ ಭಾರತರತ್ನ ದೀದೀ ಲತಾ ಮಂಗೇಶ್ಕರಅವರು ಸಹ ನಮ್ಮನ್ನುಅಗಲಿದ್ದಾರೆ.ಈ ಇಬ್ಬರೂ ಮಹನಿಯರಿಗೆ ವೈದ್ಯ ಸಂಪದದಿಂದ ನಮನಗಳು.ಇವರ ಧ್ವನಿಗಳು ಸದಾ ನಮಗೆ ಪ್ರೇರಕವಾಗಲಿವೆ. ಸಮನ್ವಯ ಕವಿ, ಚೆಂಬೆಳಕಿನ ಕವಿ, ಸುನೀತಗಳ ಸಾಮ್ರಾಟ ಎಂದು ಪ್ರಸಿದ್ಧರಾಗಿದ್ದ ಚೆನ್ನವೀರ ಕಣವಿಯವರ ಅಗಲಿಕೆ ಸಹ ತುಂಬಲಾಗದ ನಷ್ಟ. ಜೀವ ಧ್ವನಿ ಕೃತಿಗೆ 1981 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ನಾಡೋಜ ಕಣವಿಯವರು 1996 ರಲ್ಲಿ ಹಾಸನದಲ್ಲಿ ನಡೆದ 65ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಭಾರತೀಯ ವೈದ್ಯಕೀಯ ಪರಿಷತ್ತಿನ ಚರಕ ಶಪಥದ ಕುರಿತಾದ ನಿರ್ಣಯ ಮತ್ತೊಂದು ಚರ್ಚೆ ಮತ್ತು ವಿರೋಧಕ್ಕೆ ಕಾರಣವಾಗಿದೆ. ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ತರಬೇತಿ ಹೊಂದುವ ವೈದ್ಯಕೀಯ ವಿದ್ಯಾರ್ಥಿಗಳು ಹಿಪೊಕ್ರೇಟೀಸ ಶಪಥವನ್ನು ಇದುವರೆಗೂ



ತೆಗೆದುಕೊಳ್ಳುತ್ತಿದ್ದರು. ಆದರೆ ಇದರ ಬದಲು ಚರಕ ಶಪಥವನ್ನು ವಿದ್ಯಾರ್ಥಿಗಳು ತೆಗೆದುಕೊಳ್ಳಲು ಸೂಚಿಸಲಾಗಿದೆಯೆಂದು ತಿಳಿದುಬಂದಿದೆ. ಇದ– ಕ್ಕೆ ಈಗಾಗಲೇ ಭಾರತೀಯ ವೈದ್ಯಕೀಯ ಸಂಘ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಭಾರತೀಯ ವೈದ್ಯಕೀಯ ಪದ್ಧತಿಯ ಪಿತಾಮಹ ಚರಕನ ಕುರಿತು ಎಲ್ಲಾ ಭಾರತೀಯರಲ್ಲಿ ಮತ್ತು ಭಾರತೀಯ ವೈದ್ಯರಲ್ಲಿ ಅಪಾರ ಗೌರವ ಆದರಾಭಿಮಾನಗಳಿವೆ. ಆದರೆ ಬೇರೆ ವೈದ್ಯಕೀಯ ಪದ್ಧತಿಯನ್ನು ಬಳಸುವವರಿಗೆ ಚರಕ ಶಪಥ ಎಷ್ಟು ಸಮಂಜಸ ಎನ್ನುವುದು ಭಾರತೀಯ ವೈದ್ಯಕೀಯ ಸಂಘದ ಪ್ರಶ್ನೆ. ಪರಂಪರೆಗಳನ್ನು ಬದಲಿಸಬೇಕೋ ಅಥವಾ ಹೊಸ ಪರಂಪರೆಯನ್ನು ಹುಟ್ಟು ಹಾಕುವಂತಹ ಕಾರ್ಯ ಸಾಧನೆ ಮಾಡಬೇಕೋ ಇಂದು ನಮ್ಮ ಮುಂದಿರುವ ಪ್ರಶ್ನೆ. ಕೇವಲ ಹೆಸರುಗಳನ್ನು ಬದಲಾಯಿಸುವುದರ ಮೂಲಕ ಏನನ್ನೂ ಸಾಧಿಸಲಾಗದು. ಅಮೂಲಾಗ್ರ ಬದಲಾವಣೆಯ ಗುರಿ ಹೊಂದಿರಬೇಕಾದ ಅವಶ್ಯಕತೆ ಇದೆ. ಮಿಕ್ಸೊಪತಿಯಿಂದಾಗಿ ಇತರ ವೈದ್ಯಕೀಯ ಪದ್ಧತಿಗಳು ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳಬಹುದು. ಒಂದೆಡೆ ಬಾಗ್ಚಿ ಪಾರ್ಥಸಾರಥಿಯಂತಹ ಅತ್ಯಾಧುನಿಕ ಸಂಶೋಧನಾ ಕೇಂದ್ರಗಳ ಸ್ಥಾಪಿಸುವ ಮಹತ್ವಾಕಾಂಕ್ಷೆಯ ಯೋಜನೆಗಳು ಇನ್ನೊಂದೆಡೆ ಈ ರೀತಿಯ ತೀರ್ಮಾನಗಳು ನಮ್ಮ ಮುಂದಿರುವ ಹೊಸ ಸವಾಲುಗಳು.

ಈ ವರುಷ ಏಪ್ರಿಲ್ 2 ರಂದು ಭಾರತೀಯರು ಯುಗಾದಿಯ ಮೂಲಕ ಹೊಸ ವರುಷ ಆಚರಿಸಲಿದ್ದಾರೆ. ಬೇವು ಬೆಲ್ಲದ ಮೂಲಕ ಬದುಕಿನ ಸಿಹಿ ಕಹಿಗಳಿಗೆ ಸಿದ್ಧಗೊಳಿಸುವ ಯುಗಾದಿ ಯುಗ ಕವಿಯ ವಾಣಿಯಂತೆ ಮತ್ತೆ ಮತ್ತೆ ಮರಳಿ ಬರಲಿ. ನಮಗೆಲ್ಲರಿಗೂ ಸಂತಸ ಸಮೃದ್ಧಿ ತರಲಿ ಎಂಬ ಆಶಯಗಳೊಂದಿಗೆ ನಿಮ್ಮ ಅಭಿಪ್ರಾಯಗಳಿಗಾಗಿ ಕಾಯ್ದಿರುವ





## ಕಾವ್ಯ ಸಂಪದ

**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು
74, ಮಯೂರಿ ಬಡಾವಣೆ, ಕೇಶವಪುರ ಅಂಚೆ, ಹುಬ್ಬಳ್ಳಿ, 580023

### ಕನ್ನಡ ನಿಧಿ

ಕನ್ನಡ ಮಾತಿನ ಸವಿಯನು ಅರಿಯುತ
ಲೋಕದಿ ಕನ್ನಡ ಬೆಳೆಸೋಣ
ಮನಸಿನ ಭಾವವ ಚೆಲುವಲಿ ಹೇಳಲು
ಕನ್ನಡ ಭಾಷೆಯ ನುಡಿಯೋಣ

ಸುಲಭವು ಸರಳವು ಸುಲಲಿತ ಮಧುರವು
ಕನ್ನಡ ಡಿಂಡಿಮ ಮಿಡಿದಿರಲು
ಹೃದಯವ ಅರಳಿಸಿ ಜಗವನು ಬೆಳಗುತ
ಕನ್ನಡ ನುಡಿಯದು ಹೊಮ್ಮಿರಲು

ಸಿರಿತನ ಬಡತನಯೆಲ್ಲವ ಮರೆಸುತ
ಗೆಳೆತನ ಶಿಖರವನೇರೋಣ
ಕನ್ನಡ ನುಡಿಯಲಿ ಎಲ್ಲರ ಸೆಳೆಯುತ
ಗಂಧದ ಪರಿಮಳ ಹಂಚೋಣ

ಕನ್ನಡ ತಾಯಿಯ ಸೇವೆಯ ಮಾಡುತ
ಮನದಲಿ ನೆಮ್ಮದಿ ಪಡೆಯೋಣ
ಮುಂದಿನ ದಿನಗಳ ಬಾಳಿನ ಒಳಿತಿಗೆ
ಕನ್ನಡ ನಿಧಿಯನು ಉಳಿಸೋಣ

**ಡಾ ವೀಣಾ ಎನ್**
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞರು, ಸುಳ್ಯ

### ಮಾದಕ ದ್ರವ್ಯವೆಂಬ ಚಕ್ರವ್ಯೂಹ

ಮಾದಕ ದ್ರವ್ಯವೆಂಬುದೊಂದು ಚಕ್ರವ್ಯೂಹ
ಒಳ ಸೇರಲು ದಾರಿ ಸಾಲು ಸಾಲು
ಹೊರ ಬರಲು ಕೌರವರ ತಡೆ ಗೋಡೆ ಹಲವು
ದಾರಿ ತೋರಿ ಕಾಯುವ ಕೃಷ್ಣನಿರುವನೆಲ್ಲಿ?

ಹದಿಹರೆಯದ ಹುಚ್ಚು, ಬೆಚ್ಚಗಿನ ರಕ್ತ
ಹಾದಿ ತಪ್ಪಿಸುವ ಗೆಳೆಯರೂ ಅನೇಕ
ತನ್ನದೇ ಸಮರದಲ್ಲಿ ಮಗ್ನ ಅಪ್ಪ ಇಲ್ಲಿಲ್ಲ
ಕಾಯುತಿಹ ಅಮ್ಮನ ಗಣನೆಯೇ ಈಗಿಲ್ಲ

ಮಾದಕ ದ್ರವ್ಯವೇ ಜೀವನವೆಂಬ ಮನಃಸ್ಥಿತಿ
ಕಣ್ಣಿದ್ದೂ ಕಾಣರಲ್ಲ ಮುಂದಿರುವ ಪ್ರಪಾತ
ರಾತ್ರಿ ಕಂಡ ಬಾವಿಗೆ ಹಗಲು ಬೀಳುವ ತವಕ
ತಲೆಗೇರಿದ ಅಮಲು ಮಾಡಿದೆ ಪೂರಾ ಕುರುಡು

ಚಕ್ರವ್ಯೂಹ ಭೇಧಿಸುವ ಅರ್ಜುನ ಈಗಿಲ್ಲ
ಉಳಿದ ನಾವೆಲ್ಲಾ ನಿಮಿತ್ತ ಮಾತ್ರ
ಎದ್ದೇಳು ಮಗನೇ ಈ ಯುದ್ಧ ತರವಲ್ಲ ನಿನಗೆ
ಹೋಗದಿರು ನೀನು ವಿಷ ವರ್ತುಲದೊಳಗೆ

**ಡಾ ಕೆ ಬಿ ಸೂರ್ಯಕುಮಾರ್**
ವಿಧಿ ವಿಜ್ಞಾನ ತಜ್ಞರು, ಮಡಿಕೇರಿ

### ಚಿಣ್ಣರ ಲೋಕ



**ಕುಮಾರಿ ದಾನುಪ್ರಿಯ**
ಗೋಕಾಕ್








## ಪದಬಂಧ–1

**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್



**ಮೇಲಿನಿಂದ ಕೆಳಕ್ಕೆ**

1. ಸಮುದ್ರ ತೀರಕ್ಕೆ ನೀರು ಬಂದಂತೆ ಬರುವುದು ಕೋರೋನಾ (2)
2 ರೋಗ ನಿಯಂತ್ರಿಸಲು ಆಹಾರ ಕ್ರಮ (2)
3 ಅಕಸ್ಮಿಕ ಮರಣಕ್ಕೆ ಪ್ರಮುಖ ಕಾರಣ (5)
7 ಸಿಟ್ಟು, ನಿದ್ರಾಹೀನತೆ, ಖಿನ್ನತೆಗೆ ಪರಿಹಾರ ತಿಳಿಸುವ ವೈದ್ಯರು (4)
9 ಅರ್ಥಪೂರ್ಣವಾಗಿ ಇದರ ಮೇಲೆ ಮಲಗಬಹುದು(2)
10 ಕಣ್ಣು ಹಳದಿಯಾಗುವ ರೋಗ (5)
11 ಖಾರ ಬಹಳ ಸೇವಿಸುವುದರಿಂದ ಇದರಲ್ಲಿ ಹುಣ್ಣು ಆಗಬಹುದು (3)
12 ಶುದ್ಧ ರಕ್ತವನ್ನು ಸರಬರಾಜು ಮಾಡುವವರು (5)
14 ಅಣ್ಣ ಊಟಕ್ಕೆ ಏನಿದೆ? (2)
15 ತತ್ಸಮ ತದ್ಭವದಲ್ಲಿ ದಯೆ ಉದ್ಧವಾಗಿದೆ (2)

**ಎಡದಿಂದ ಬಲಕ್ಕೆ**

1 ಚುಚ್ಚು ಮದ್ದು ಕೊಟ್ಟು ಗುಣಪಡಿಸುವವರು ಯಾರ ಪತಿ (4)
4 ಎಡ ಭಾಗದ ಹೊಟ್ಟೆಗೆ ಪೆಟ್ಟು ಬಿದ್ದರೆ ಈ ಗ್ರಂಥಿಗೆ ಪೆಟ್ಟಾಗಿ ರಕ್ತ ಸ್ರಾವವಾಗಬಹುದು (2)
5 ಎಷ್ಟು ಸೋರೆಕಾಯಿ ತಿಂದರೂ ಈ ಚರ್ಮರೋಗ ಹೋಗದು (5)
6 ಸ್ತನ ಕ್ಯಾನ್ಸರ್ ಪತ್ತೆ ಹಚ್ಚಲು ಸಹಕಾರಿ (2)
7 ಚುನಾವಣೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಹೀಗೂ ಕರೆಯಬಹುದು (4)
8 ದೇಶದ ಅಭಿವೃದ್ಧಿಗಾಗಿ ಕೈಗಳಿಂದ ಗಾರೆ ಹಿಡಿಯಬೇಕು(4)
13 ಈ ಏಕಾದಶಿಯಂದು ಕುಂಟು ನೆಪ ಹೇಳಬೇಡ (3)
14 ಗಡ್ಡೆ ಬೆಳೆದು ಶರೀರವೆಲ್ಲಾ ಹರಡಬಹುದು (5)
16 ಹೋಮ ಹವನಗಳನ್ನು ಮಾಡುವುದು ಯೋಗವೇ?(2)
17 ಕ್ಯಾನ್ಸರ್ ಹೆಚ್ಚಳಕ್ಕೆ ಇದು ಕಾರಣ (3)

**ಪದಬಂಧ 1 ರ ಉತ್ತರಗಳು**

**ಎಡದಿಂದ ಬಲಕ್ಕೆ**
1 ವ್ಯಾಪ್ರ, 3 ಆರೋಗ್ಯ 5 ಮಲೇರಿಯಾ 6 ದೇಶ 7 ಮಧುಮೇಹ 9 ಕನಿಷ್ಠ 10 ಅರಿವು 11 ಆಯುಧ 13 ಪಾರ್ಶ್ವವಾಯು 16 ಜಾತವೇದ 17 ಅನವರತ 20 ಸಂಕ್ರಮಣ


**ಮೇಲಿನಿಂದ ಕೆಳಕ್ಕೆ**
1 ವಿಲೇವಾರಿ 2 ವ್ಯಾಯಾಮ 4 ರೋಗ ನಿರೋಧಕ 6 ದೇಹ 8 ಮೇಘ 10 ಅಗಮ್ಯ 11 ಆಯುರ್ವೇದ 12 ಪ್ಯಾಪ್ 13 ಪಾರಿಜಾತ 14 ಕ್ಷ ಕಿರಣ 15 ಮನಸ್ಸು 18 ರವಿ 19 ಚಕ್ರ

ಪದಬಂಧ 1 ಕ್ಕೆ ಸರಿ ಉತ್ತರ ಕಳಿಸಿದವರು
**ಡಾ ಕವಿತಾ ಸದಾಶಿವ,** ಭದ್ರಾವತಿ

**ಸೂಚನೆ:**
ಸರಿ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದುಸರಿ ಉತ್ತರ ಕಳಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಉತ್ತರವನ್ನು padabhandhavs@gmail.com ಕಳಿಸಿ



**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್





## ಬಿನ್ನಹ


ನೀಲಾಗಸದ ಪುಟ್ಟ ಹಕ್ಕಿಗಳೇ,
ರೆಕ್ಕೆ – ಪುಕ್ಕಗಳಿಲ್ಲದ ಎನಗೆ
ಉತ್ತರವೊಂದನ್ನ ನೀಡಿರೇ ......

ಬಿಟ್ಟು ನಿನ್ನೆ –ನಾಳೆಗಳ
ವ್ಯಥೆ – ಚಿಂತೆ,
ತೊರೆದು ನಾನು – ನನ್ನದೆಂಬ
ಘನತೆ – ಮಮತೆ,
ಚಿಲಿಪಿಲಿ, ಚಿಲಿಪಿಲಿ
ಎಂದೆನುತಾ,
ಜೊತೆ –ಜೊತೆಗೂಡಿ,
ನಲಿವ ಪರಿ ಎಂತೆಂದು
ಉಲಿಯಿರೇ, ಉಲಿಯಿರೆ.......

**ಡಾ. ಕವಿತಾ ಸದಾಶಿವ**
ರೋಗ ವಿಧಾನ ತಜ್ಞೆ
ಭದ್ರಾವತಿ






ಸಂಘಟನೆ/ಇತಿಹಾಸ

# ಭಾರತೀಯ ವೈದ್ಯಕೀಯ ಸಂಘ ನಡೆದು ಬಂದ ದಾರಿ

**ಪಕ್ಷಿನೋಟ**



**ಡಾ ಮಧುಸೂದನ ಕಾರಿಗನೂರು**
ಶಸ್ತ್ರ ಚಿಕಿತ್ಸಾ ತಜ್ಞರು, ಮಧು ಶಸ್ತ್ರ ಚಿಕಿತ್ಸಾಲಯ
ಸಿರುಗುಪ್ಪ, ಜಿಲ್ಲೆ ಬಳ್ಳಾರಿ

(...ಹಿಂದಿನ ಸಂಚಿಕೆಯಿಂದ)

ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ, ವೈದ್ಯವೃತ್ತಿಯ ಕೆಲವು ಸದಸ್ಯರು ಭಾರತದಲ್ಲಿಯೇ ಶಾಖೆಗಳನ್ನು ಹೊಂದಿದ್ದ ಬ್ರಿಟಿಷ್ ವೈದ್ಯಕೀಯ ಸಂಘದ ಸದಸ್ಯರಾಗಿದ್ದರು. ಅಂತಿಮವಾಗಿ ಐ.ಎಂ.ಎ.ಯ ನಾಯಕರುಗಳು ಬ್ರಿಟಿಷ್ ಮೆಡಿಕಲ್ ಅಸೋಸಿಯೇಷನ್ನೊಂದಿಗೆ ಮಾತುಕತೆ ನಡೆಸಿ ಅದು ಮುಂದಿನ ದಿನಗಳಲ್ಲಿ ಯಾವುದೇ ಶಾಖೆಗಳನ್ನು ಭಾರತದಲ್ಲಿ ಹೊಂದಿರಬಾರದು ಎನ್ನುವ ಒಪ್ಪಂದಕ್ಕೆ ಬಂದಿತು. ಇದು ಇಂದಿಗೂ ಮುಂದುವರೆದಿದೆ.

1964 ರಲ್ಲಿ, ಮೇಲಿನ ಅನುಸಾರವಾಗಿ, ಅಕ್ಟೋಬರ್ 2–5, 1993 ರಂದು ನಡೆದ ವಿಶ್ವ ವೈದ್ಯಕೀಯ ಸಂಘದ 45 ನೇ ಸಾಮಾನ್ಯ ಸಭೆಯು WMA ಯ ಐ.ಎಂ.ಎ ಸದಸ್ಯತ್ವವನ್ನು ಅನುಮೋದಿಸಿತು. ಹಾಗೆಯೇ ಕಾಮನ್ವೆಲ್ತ್ ಮೆಡಿಕಲ್ ಅಸೋಸಿಯೇಷನ್ನಿನ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಐ.ಎಂ.ಎ ಇಂದಿಗೂ ಮುಂದುವರೆಸಿದೆ.

ಐ.ಎಂ.ಎ ಶೈಕ್ಷಣಿಕ ವಿಭಾಗಗಳಾದ ಐ.ಎಂ.ಎ ಕಾಲೇಜ್ ಆಫ್ ಜನರಲ್ ಪ್ರಾಕ್ಟೀಷನರ್ಸ್ (IMA CGP) ಮತ್ತು ಐ.ಎಂ.ಎ ಅಕಾಡೆಮಿ ಆಫ್ ಮೆಡಿಕಲ್ ಸ್ಪೆಷಾಲಿಟೀಸ್ (IMAAMS) ಮೂಲಕ ತನ್ನ ಸದಸ್ಯರ ಶೈಕ್ಷಣಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದೆ. ರಾಷ್ಟ್ರೀಯ ಕಾಲೇಜುಗಳು ಮತ್ತು ಅಕಾಡೆಮಿಗಳ ವಿಶ್ವ ಸಂಘಟನೆಯ (WONCA) ಸ್ಥಾಪಕ ಸದಸ್ಯರಾಗಿರುವ IMA CGP ಮೂಲಕ, ಐ.ಎಂ.ಎ 1968 ರಲ್ಲಿ ಜನರಲ್ ಪ್ರಾಕ್ಟೀಸ್ ಕುರಿತು ಮೂರನೇ ಸಮ್ಮೇಳನವನ್ನು ಆಯೋಜಿಸಿತು. ಇದು ಮೊದಲ ಫೆಲೋಶಿಪ್ ಎಂಬುದು ಹೆಮ್ಮೆಯ ವಿಷಯವಾಗಿದೆ. ಪ್ರಪ್ರಥಮವಾಗಿ ಇದನ್ನು ವಿಶ್ವ ಸಂಸ್ಥೆಯ ನಮ್ಮ ಹಿಂದಿನ ಅಧ್ಯಕ್ಷರಲ್ಲಿ ಒಬ್ಬರಾದ ಡಾ. ಪಿಸಿ ಭಾಟಿಯಾ ಅವರಿಗೆ ನೀಡಲಾಯಿತು.

72 ವರ್ಷಗಳ ಅವಧಿಯಲ್ಲಿ, ಐ.ಎಂ.ಎ ತನ್ನ ವೈಭವದ ಸಂಪ್ರದಾಯಗಳನ್ನು ಉಳಿಸಿಕೊಂಡು ಸಮುದಾಯದಲ್ಲಿ ಹೆಮ್ಮೆಯ ಸ್ಥಾನವನ್ನು ಪಡೆದುಕೊಂಡಿದೆ, ಇದು ಆರೋಗ್ಯ ರಕ್ಷಣೆ, ರೋಗ ನಿಯಂತ್ರಣ ಮತ್ತು ನಿರ್ಮೂಲನೆ ಕ್ಷೇತ್ರದಲ್ಲಿ ಮುಂಚೂಣಿಯ ಸೇವೆಯನ್ನು ಸಲ್ಲಿಸುತ್ತಿದೆ. ಸ್ವಾತಂತ್ರ ಪೂರ್ವ ಮತ್ತು ನಂತರದ ಅವಧಿಯಲ್ಲಿ ಸಂಭವಿಸಿದ ಭೂಕಂಪಗಳು, ಬರ ಮತ್ತು ಪ್ರವಾಹಗಳು, ಕ್ಷಾಮಗಳು ಮತ್ತು ಸಾಂಕ್ರಾಮಿಕ ರೋಗಗಳಂತಹ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಸಮುದಾಯಕ್ಕೆ ಐ.ಎಂ.ಎ. ನೀಡಿರುವ ನಿರಂತರ ಸೇವೆಗಳು ಹೆಚ್ಚು ಶ್ಲಾಘಿಸಲ್ಪಟ್ಟಿವೆ. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ರಚನೆ ಮತ್ತು ಅನುಷ್ಠಾನದಲ್ಲಿ ಉದಾ ಕುಟುಂಬ ಕಲ್ಯಾಣ, ತಾಯಿ ಮತ್ತು ಮಕ್ಕಳ ಆರೋಗ್ಯ, ಸಾರ್ವತ್ರಿಕ ರೋಗನಿಯಂತ್ರಣ ಕಾರ್ಯಕ್ರಮ, ಓರಲ್ ರೀಹೈಡ್ರೇಶನ್ ಥೆರಪಿ, ಏಡ್ಸ್ ತಡೆಗಟ್ಟುವಿಕೆ, ನಿಯಂತ್ರಣ ಮತ್ತು ನಿರ್ವಹಣೆ ಇತ್ಯಾದಿಗಳು, ಐ.ಎಂ.ಎ ಪಾತ್ರ ಮತ್ತು ಪಾಲ್ಗೊಳ್ಳುವಿಕೆ ಹೆಚ್ಚು ಮಹತ್ವದ್ದಾಗಿವೆ. ಹಲವಾರು



ಶಾಖೆಗಳು ಕುಟುಂಬ ಕಲ್ಯಾಣ ಚಿಕಿತ್ಸಾಲಯಗಳು, ರೋಗನಿರೋಧಕ ಕೇಂದ್ರಗಳು, ಆಂಬ್ಯುಲೆನ್ಸ್ ಸೇವೆಗಳು, ಬ್ಲಡ್ ಬ್ಯಾಂಕ್‌ಗಳು, ಪೋಲಿಯೊ ನಿರ್ಮೂಲನೆಗಳು ಮತ್ತು RCH ಕಾರ್ಯಕ್ರಮಗಳು ಇತ್ಯಾದಿಗಳನ್ನು ಸ್ಥಾಪಿಸಿವೆ.



ಸಂಘದ ವ್ಯವಹಾರಗಳನ್ನು ಕೇಂದ್ರ ಕೌನ್ಸಿಲ್ ಮತ್ತು ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರು ನಿರ್ವಹಿಸುತ್ತಾರೆ, ಅದು ಕಾರ್ಯನೀತಿಗಳನ್ನು ರೂಪಿಸುವುದರ ಜೊತೆಗೆ ಸಂಘದ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಇದು ಹಲವಾರು ಸ್ಥಾಯಿ ಸಮಿತಿಗಳನ್ನು ಸ್ಥಾಪಿಸಿಕೊಂಡು ವಿವಿಧ ಉಲ್ಲೇಖಗಳ ಅಡಿಯಲ್ಲಿ ಅವರಿಗೆ ವಹಿಸಿಕೊಡಲಾದ ನಿರ್ದಿಷ್ಟ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತದೆ. ಪ್ರತಿ ರಾಜ್ಯ ಮತ್ತು ಸ್ಥಳೀಯ ಶಾಖೆಗಳು ನಿಯಮಿತವಾಗಿ ವೈಜ್ಞಾನಿಕ ಮತ್ತು ವೈದ್ಯಕೀಯ ಸಭೆಗಳನ್ನು ನಡೆಸುತ್ತದೆ ಮತ್ತು ವರ್ಷಕ್ಕೊಮ್ಮೆ ಅದರ ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತವೆ. ರಾಜ್ಯ ಶಾಖೆಗಳು ಪ್ರತಿ ವರ್ಷ ಆಯಾ ರಾಜ್ಯ ಸಮ್ಮೇಳನಗಳನ್ನು ಆಯೋಜಿಸುತ್ತವೆ, ಈ ಸಮಯದಲ್ಲಿ ಸಾಂಸ್ಥಿಕ ವಿಷಯಗಳಲ್ಲದೆ, ವೈದ್ಯಕೀಯದಲ್ಲಿನ ವಿವಿಧ ವಿಶೇಷತೆಗಳಲ್ಲಿ ತಮ್ಮ ಸದಸ್ಯರ ಪ್ರಯೋಜನಕ್ಕಾಗಿ ವೈಜ್ಞಾನಿಕ ಅವಧಿಗಳನ್ನು ನಡೆಸಿಕೊಡುತ್ತವೆ.

'ಜರ್ನಲ್ ಆಫ್ ದಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್' ಎಂಬ ವೈಜ್ಞಾನಿಕ ಜರ್ನಲ್ ಅನ್ನು ಐ.ಎಂ.ಎ ಪ್ರಕಟಿಸುತ್ತದೆ, ಅದರ ಪ್ರತಿಯನ್ನು ಸಂಘದ ಪ್ರತಿಯೊಬ್ಬ ಸದಸ್ಯರಿಗೂ ಮೇಲ್ ಮಾಡಲಾಗುತ್ತದೆ. ಇಂಗ್ಲಿಷ್ನಲ್ಲಿ "ಯುವರ್ ಹೆಲ್ತ್" ಮತ್ತು ಹಿಂದಿಯಲ್ಲಿ "ಆಪ್ ಕಾ ಸ್ವಾಸ್ಥ್ಯ" ನಿಯಮಿತವಾಗಿ ಪ್ರಕಟವಾಗುತ್ತದೆ ತನ್ಮೂಲಕ ಸಾರ್ವಜನಿಕರ ಆರೋಗ್ಯ ಶಿಕ್ಷಣದ ಅಗತ್ಯಗಳನ್ನು ಇದು ಪೂರೈಸುತ್ತದೆ. ರಾಜ್ಯದ ಕೆಲವು ಶಾಖೆಗಳು ತಮ್ಮ ಬುಲೆಟಿನ್ಗಳನ್ನು ಇಂಗ್ಲಿಷ್ ಮತ್ತು/ಅಥವಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಿಸುತ್ತಿವೆ. ಐ.ಎಂ.ಎ ನ್ಯೂಸ್ ಅನ್ನು ಐ.ಎಂ.ಎ ಪ್ರಧಾನ ಕಛೇರಿಯಿಂದ ಮಾಸಿಕ ಪ್ರಕಟಿಸಲಾಗುತ್ತದೆ. ಇದಲ್ಲದೇ, ಐ.ಎಂ.ಎ ಕಾಲೇಜ್ ಆಫ್ ಜನರಲ್ ಪ್ರಾಕ್ಟೀಷನರ್ಸ್ "ಮುಂದುವರಿದ ವೈದ್ಯಕೀಯ ಶಿಕ್ಷಣ" ಬುಲೆಟಿನ್ ಹೆಸರಿನ ಪ್ರಕಟಣೆಯನ್ನು ಐ.ಎಂ.ಎ ಹೊಂದಿದೆ. ಫ್ಯಾಮಿಲಿ ಮೆಡಿಸಿನ್ಗೆ ಹೆಚ್ಚು ಪ್ರಸ್ತುತವಾಗುವಂತೆ ಮಾಡಲು, ಈ ಬುಲೆಟಿನ್ನ ಶೀರ್ಷಿಕೆಯನ್ನು 1996 ರಿಂದ "ಫ್ಯಾಮಿಲಿ ಮೆಡಿಸಿನ್ – ಇಂಡಿಯಾ" ಎಂದು ಬದಲಾಯಿಸಲಾಗಿದೆ. ಐ.ಎಂ.ಎ ಅಕಾಡೆಮಿ ಆಫ್ ಮೆಡಿಕಲ್ ಸ್ಪೆಷಾಲಿಟೀಸ್ ಈಗ ವಾರ್ಷಿಕ ತ್ರೈಮಾಸಿಕವನ್ನು ಪ್ರಕಟಿಸುತ್ತಿದೆ, ಇದರಲ್ಲಿ ಮೂಲ ಲೇಖನಗಳು, ಆಸಕ್ತಿದಾಯಕ ಪ್ರಕರಣ ವರದಿಗಳು, ಪ್ರಖ್ಯಾತ ವೈದ್ಯಕೀಯ ತಜ್ಞರು ಮತ್ತು ಸೂಪರ್ ಸ್ಪೆಷಲಿಸ್ಟ್‌ಗಳ ವಿಮರ್ಶೆ ಲೇಖನಗಳು ಇವೆ.

ಐ.ಎಂ.ಎ ಕಾಲೇಜ್ ಆಫ್ ಜನರಲ್ ಪ್ರಾಕ್ಟೀಷನರ್ಸ್ ವರ್ಷಕ್ಕೆ ಎರಡು ಬಾರಿ ನಿಯಮಿತ ಪರೀಕ್ಷೆಗಳನ್ನು ನಡೆಸುತ್ತಿದೆ ಮತ್ತು ಯಶಸ್ವಿ ಅಭ್ಯರ್ಥಿಗಳು ಫೆಲೋಶಿಪ್ ಪ್ರಶಸ್ತಿಗೆ ಅರ್ಹರಾಗುತ್ತಾರೆ. ಐ.ಎಂ.ಎ ಎ.ಎಂ.ಎಸ್. ಪ್ರತಿ ವರ್ಷವೂ ಆಯ್ಕೆಯಾದ ವಿಶೇಷ ಪರಿಣಿತರಿಗೆ ಫೆಲೋಶಿಪ್ಗಳನ್ನು ನೀಡುತ್ತದೆ.

(ಮುಂದುವರೆಯುವುದು)



## ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು



**ಡಾ. ನಂದ ಕೊಟುರು**



**ಡಾ. ನಂದ ಕೊಟುರು**



ಚಾರ್ಕೋಲ್ ಆರ್ಟ್
**ಡಾ. ಹಲಸಂಗಿಮಠ್ ಸುರೇಶ್**



ಚಾರ್ಕೋಲ್ ಆರ್ಟ್
**ಡಾ. ಹಲಸಂಗಿಮಠ್ ಸುರೇಶ್**



ಚಲುಕ ಬಾತು

**ಡಾ. ಸಿ. ಎಸ್. ನಾಗರಾಜ್**



13500 ಅಡಿ ಎತ್ತರದ ಸೆ ಲಿ ಕೆರೆ ಅರುಣಾಚಲ ಪ್ರದೇಶ

**ಡಾ. ಶ್ರೀಕಾಂತ ಹೆಗಡೆ**




ರಾಜಹಂಸ

**ಡಾ. ಸಿ. ಎಸ್. ನಾಗರಾಜ್**



ಕಪ್ಪು ಚಿರತೆ


**ಡಾ. ಶ್ರೀಕಾಂತ ಹೆಗಡೆ**



ಬಿಳಿ ಹೊಟ್ಟೆಯ ಕಡಲ ಹದ್ದು **ಡಾ. ಚೇತನ್ ಕಲ್ಲೂರ**



ಚಿನಾರ್ ಎಲೆ ಮಂಡಲ ಆರ್ಟ್ **ಡಾ. ಗೌರಿ**



ಚಿರತೆ **ಡಾ. ಶ್ರೀನಿವಾಸ ಪೈ**



ಅಂಡಮಾನ್ ಹಸಿರು ಹಲ್ಲಿ
**ಡಾ. ಸಂಜಯ್ ಹೆಚ್. ಆರ್.**



ಚಿಟ್ಟು ಗಿಳಿ
**ಡಾ. ಸಂಜಯ್ ಹೆಚ್. ಆರ್.**



**ಡಾ. ಅರವಿಂದ ಪಟೇಲ್**

ನಾಲ್ಕು ಕೊಂಬಿನ ಎರಳೆ ಅರವಾ ಚೌ ಸಿಂಘ... ತುಂಬಾ ನಾಚಿಕೆ ಸ್ವಭಾವದ ಪ್ರಾಣಿಗಳು, ಇವು ವಿಫುಲವಾಗಿ ಬೆಳೆದ ಹುಲ್ಲುಗಾವಲು, ತೆರೆದ ಕಾಡು ಮತ್ತು ವಿರಳಿತದ ಗುಡ್ಡಗಾಡಿನ ಪ್ರದೇಶಗಳು ಈ ಪ್ರಾಣಿಗಳ ವಾಸಿಸುವ ನೆಲೆಯಾಗಿವೆ.

ನಾಲ್ಕು ಕೊಂಬುಗಳು ಅಂದರೆ ತಲೆಯ ಮೇಲೆ, ಮುಂಭಾಗದಲ್ಲಿ ಎರಡು, ಹಿಭಾಗದಲ್ಲಿ ಎರಡು ಸ್ಪಷ್ಟವಾಗಿ ಕಾಣುತ್ತವೆ. ಹೆಣ್ಣಿಗೆ ಕೊಂಬುಗಳು ಇರುವುದಿಲ್ಲ. ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಮರಿಗಳಿಗೆ ಜನ್ಮ ನೀಡುತ್ತವೆ.



EDUCATION IS THE ASSET

Since 1999

HEALTH IS WEALTH

PUTTANNA KULAL PRATISTANA

1999 ರಿಂದ ಆರೋಗ್ಯ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು
ಸಾಂಸ್ಕೃತಿಕ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ
**"ಪುಟ್ಟಣ್ಣ ಕುಲಾಲ್ ಪ್ರತಿಷ್ಠಾನ"** ದಿಂದ
ವೈದ್ಯ ಸಂಪದಕ್ಕೆ ಹಾರ್ದಿಕ ಶುಭಾಶಯಗಳು.